ಕರ್ನಾಟಕ ನಾಟಕ ಅಕಾಡೆಮಿ

# ಉತ್ತರ ಕನ್ನಡ
# ಜಿಲ್ಲಾ ರಂಗಮಾಹಿತಿ

ಡಾ. ಶ್ರೀಪಾದ ಭಟ್



ಜಿಲ್ಲಾ ರಂಗಮಾಹಿತಿ ಮಾಲಿಕೆ

# ಉತ್ತರ ಕನ್ನಡ
## ಜಿಲ್ಲಾ ರಂಗಮಾಹಿತಿ

ಡಾ. ಶ್ರೀಪಾದ ಭಟ್

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-02

**UTTARAKANNADA JILLA RANGAMAHITHI :**
District theatre information written by **Dr. Shreepada Bhat**
Published by **B. Manjunatha Aradya,** Registrar, Karnataka Nataka Academy, Kannada Bhavana, J.C. Road, Bengaluru - 560 002.
Phone: 080-22237484

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | 2017 |
| ಪ್ರತಿಗಳು | : | 1000 |
| ಪುಟಗಳು | : | xii + 74 |
| ಬೆಲೆ | : | ರೂ. 60/- |

ಪ್ರಕಾಶಕರು : ಬಿ. ಮಂಜುನಾಥ ಆರಾಧ್ಯ, ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು
ದೂರವಾಣಿ : ೦೮೦ ೨೨೨೩೭೪೮೪
ಇಮೇಲ್: academy.nataka@gmail.com

ಪ್ರಕಟಣಾ ಸಮಿತಿ ಸದಸ್ಯರು : ಎಂ.ಎಸ್. ಗುಣಶೀಲನ್
ಎಸ್.ಕೆ. ಕೊನೆಸಾಗರ
ಮುದ್ದಣ್ಣ ರಟ್ಟೇಹಳ್ಳಿ

ಮುದ್ರಕರು : ಪ್ರಗತಿ ಪ್ರಿಂಟ್ ಕಮ್ಯೂನಿಕೇಷನ್ಸ್
ಬೆಂಗಳೂರು-೨೦.
ಮೊ.: ೯೮೪೫೯೮೭೫೭೯

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಮೂರು ವರ್ಷದ ನಮ್ಮ ಅವಧಿಯ ಮುಕ್ತಾಯದ ಹಂತಕ್ಕೆ ಬಂದಿದ್ದೇವೆ. ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ 30 ದಿನಗಳ ವೃತ್ತಿರಂಗಭೂಮಿ ತರಬೇತಿ ಶಿಬಿರ, ಮುಂಬಯಿ, ದೆಹಲಿ ಹಾಗೂ ಕೇರಳದ ತ್ರಿಶೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಡ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಕಾಲ ಹಮ್ಮಿಕೊಂಡಿದ್ದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30ರ ವರೆಗೆ ನಡೆದರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣ ಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ, ಹಿರಿಯ ನಟ ಕಂಚಿಕೇರಿ ಶಿವಣ್ಣ ಅವರಿಗೆ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಹಾಗೂ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಏಳು ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ 30 ಜಿಲ್ಲೆಗಳಲ್ಲಿ ರಂಗ ಶಿಬಿರ, ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ. ವಿಶೇಷ ಘಟಕ ಯೋಜನೆಯಡಿ ಐದು ಕಲಾವಿದರ ಮತ್ತು ಗಿರಿಜನ ಯೋಜನೆಯಲ್ಲಿ ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ.

12 ವೃತ್ತಿ ನಾಟಕ ಕಂಪನಿಗಳ ಸಾಕ್ಷ್ಯಚಿತ್ರ ನಿರ್ಮಿಸಲಾಗುತ್ತಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಸರಿಸುಮಾರು 20 ವರ್ಷಗಳಿಂದ ಸ್ಥಗಿತಗೊಂಡಿದ್ದಕರ್ನಾಟಕ ನಾಟಕಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ. ನಾಟಕರಚನಾ ಶಿಬಿರದಲ್ಲಿ ಆಯ್ಕೆಯಾದ ಏಳು ನಾಟಕಗಳ ಸಂಕಲನವನ್ನು ಹೊರತರಲಾಗುವುದು.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯ ಪ್ರವೃತ್ತರಾಗಿದ್ದೆವು. ಪ್ರಥಮ ಹಂತದಲ್ಲಿ ಜಿಲ್ಲಾರಂಗ ಮಾಹಿತಿ ಮಾಲಿಕೆ ಮತ್ತು ರಂಗಸಂಪನ್ನರು ಮಾಲಿಕೆಯ 18 ಪುಸ್ತಕಗಳು ಬಿಡುಗಡೆಯಾಗಿವೆ. ಎರಡನೇ ಹಂತದಲ್ಲಿ 15 ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಶತಮಾನದ ಶಕಪುರುಷ ಏಣಗಿ ಬಾಳಪ್ಪ, ರಂಗಭೂಮಿ ಮತ್ತು ಮಹಿಳೆ ಪುಸ್ತಕಗಳನ್ನು ಹೊರತರಲಾಗಿದೆ. 1959 ರಿಂದ 2016 ರ ವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿ ಸದಸ್ಯರು/ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾರಂಗ ಮಾಹಿತಿ ಮಾಲಿಕೆಯಡಿ ಸರಿಸುಮಾರು 25 ಮತ್ತು ರಂಗ ಸಂಪನ್ನರು ಮಾಲಿಕೆಯಡಿ 15 ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೆ, ಪುಸ್ತಕವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಎಂ.ಎಸ್. ಗ್ರಾಫಿಕ್ಸ್ ಅವರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

ಎಲ್.ಬಿ. ಶೇಖ (ಮಾಸ್ತರ)<br>
ಅಧ್ಯಕ್ಷರು<br>
ಕರ್ನಾಟಕ ನಾಟಕ ಅಕಾಡೆಮಿ

# ರಂಗ ಕೈಪಿಡಿಗೊಂದು ಮುನ್ನುಡಿ

ಒಂದೊಂದು ಜಿಲ್ಲೆಗಳ ರಂಗಮಾಹಿತಿ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಲಭ್ಯವಿರಬೇಕು ಎನ್ನುವುದು ನಾಟಕ ಅಕಾಡೆಮಿಯ ಬಹುದಿನದ ಕನಸು. ಇದು ಗುರುತರ ಕೆಲಸ. ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇದಕ್ಕೆ ಚಾಲನೆ ನೀಡಲಾಯಿತು. ಅಕಾಡೆಮಿ ಸದಸ್ಯರಿಗೆ ಇದರ ಹೊಣೆ ಹೊರಿಸಿ ಜಿಲ್ಲೆಯ ಮಟ್ಟದಲ್ಲಿ ಮಾಹಿತಿ ಸಂಗ್ರಹಿಸುವ ಹತ್ತಾರು ರಂಗಕರ್ಮಿಗಳ ಸಂಪಾದಕೀಯ ಸಮಿತಿ ರಚಿಸಲಾಯಿತು. ಹಾಗೂ ಹೀಗೂ 5–6 ಜಿಲ್ಲೆಗಳ ರಂಗಮಾಹಿತಿಯೂ ಸಿದ್ಧಗೊಂಡಿತು. ಆದರೆ ಪುಸ್ತಕಗಳು ಹೊರಬರಲಿಲ್ಲ. ಜಿಲ್ಲೆಯ ಮಟ್ಟದಲ್ಲಿ ಹೆಚ್ಚಿನ ಜನರನ್ನು ಈ ಕೆಲಸಕ್ಕಾಗಿ ತೊಡಗಿಸುವುದು ಕಷ್ಟಕರ. ನಮ್ಮ ಮಿತಿಯಲ್ಲಿ ಅಪ್ರಾಯೋಗಿಕ ಎನಿಸಿತು. ಅಂತೆಯೇ ಒಂದು ಜಿಲ್ಲೆಯ ರಂಗಮಾಹಿತಿ ಸಂಗ್ರಹಿಸಿ ಬರೆಯುವ ಕೆಲಸವನ್ನು ಒಬ್ಬರಿಗೇ ವಹಿಸಿ ಕಾರ್ಯಪ್ರವೃತ್ತರಾದೆವು. ಅದಕ್ಕಾಗಿ 'ಜಿಲ್ಲಾ ರಂಗಮಾಹಿತಿ' ಮಾಲಿಕೆ ಯೋಜನೆ ರೂಪಿಸಲಾಯಿತು. ಅದು ಫಲ ನೀಡಿತು. ಇಪ್ಪತ್ತಕ್ಕೂ ಅಧಿಕ ಜಿಲ್ಲೆಗಳ ರಂಗಮಾಹಿತಿ ಪುಸ್ತಕಗಳು ಈಗ ಹೊರಬಂದವು.

ಜಿಲ್ಲೆಯ ರಂಗಭೂಮಿ ಸಂಕ್ಷಿಪ್ತ ಇತಿಹಾಸ; ಹವ್ಯಾಸಿ, ವೃತ್ತಿತಂಡಗಳು, ನಟ ನಟಿ, ನಿರ್ದೇಶಕ, ನೇಪಥ್ಯ ಕಲಾವಿದರ ಸಂಕ್ಷಿಪ್ತ ಪರಿಚಯ; ರಂಗಮಂದಿರ – ಹೀಗೆ 13 ವಿಷಯಗಳ ಪಟ್ಟಿಮಾಡಿ ಲೇಖಕರಿಗೆ ಕಳಿಸಿಕೊಟ್ಟಿದ್ದೆವು. ರಂಗಲೇಖಕರು ವಿರಳವಾಗಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ಕಲಾವಿದರಿಗೇ ಬರಹದ ಕೆಲಸ ನೀಡಲಾಗಿತ್ತು. ಒಬ್ಬರು ಕಲಾವಿದರ ಮೂಲಕ, ಮತ್ತೊಬ್ಬರು ನಾಟಕಕಾರರ ಮೂಲಕ, ಮತ್ತೆ ಕೆಲವರು ರಂಗತಂಡಗಳ ಕ್ರಿಯಾಶೀಲತೆ ಮೂಲಕ ಜಿಲ್ಲೆಯ ರಂಗಮಾಹಿತಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಮಗ್ರ ಎಂದು ಭಾವಿಸಬಾರದು. ಜಿಲ್ಲೆಯ ಕುರಿತು ಒಂದು ಪಕ್ಷಿನೋಟ ಇದು. ಒಂದು ಜಿಲ್ಲೆಯ ಕೆಲವಷ್ಟು ಮಾಹಿತಿಯನ್ನು ಈ ಪುಸ್ತಕಗಳು ಒಳಗೊಂಡಿವೆ. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

## ಸಂಕ್ಷಿಪ್ತ ಪರಿಚಯ

ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ಹಾಗೂ ಕರಾವಳಿ ಪರಿಸರದ ರಂಗ ಚಟುವಟಿಕೆಗಳ ಸಂಕ್ಷಿಪ್ತ ಪರಿಚಯ ಇದಾಗಿದೆ. ಮಕ್ಕಳ ರಂಗಭೂಮಿ, ಗ್ರಾಮೀಣ ರಂಗಭೂಮಿಯ ಸ್ಥೂಲ ವಿವರಗಳ ಜತೆಗೆ ಹಾಲಿ ಚಾಲ್ತಿಯಲ್ಲಿರುವ ರಂಗತಂಡಗಳ ಚಿತ್ರಣ ನೀಡಿದ್ದಾರೆ. ನೇಪಥ್ಯ ತಂತ್ರಜ್ಞರು, ವಿಶೇಷ ತರಬೇತಿ ಪಡೆದ ನಟರು, ರಂಗತಜ್ಞರು, ಸಂಘಟಕರು, ವಿಮರ್ಶಕರು, ಪ್ರಕಟಣೆಗಳು ಮುಂತಾದವುಗಳ ಪಟ್ಟಿಯ ವಿಂಗಡನೆ ಕರಾರುವಕ್ಕಾಗಿದೆ.

ಡಾ.ಶ್ರೀಪಾದ ಭಟ್ ಹೆಸರಾಂತ ರಂಗ ನಿರ್ದೇಶಕರು. ಉತ್ತರ ಕನ್ನಡ ಜಿಲೆಯ ರಂಗಭೂಮಿ ಕುರಿತು ಸಂಶೋಧನೆ ಮಾಡಿದ್ದಾರೆ. ರಂಗಕರ್ಮಿಯ ಒಳಗೊಳ್ಳುವಿಕೆ ಮತ್ತು ಸಂಶೋಧಕನ ಶಿಸ್ತು ಇಲ್ಲಿನ ಬರವಣಿಗೆಯಲ್ಲಿ ಮೇಳೈಸಿವೆ.

**–ಗುಡಿಹಳ್ಳಿ ನಾಗರಾಜ**
ಪ್ರಕಟಣಾ ಸಮಿತಿ ಪರವಾಗಿ

# ಲೇಖಕರ ಮಾತು

ಕರ್ನಾಟಕ ನಾಟಕ ಅಕಾಡೆಮಿ ಜಿಲ್ಲಾರಂಗ ಕೈಪಿಡಿಗಳನ್ನು ಪ್ರಕಟಿಸುವ ಮಹತ್ವದ ಕಾರ್ಯ ಕೈಗೊಂಡಿದೆ. ಈ ಜಗತ್ತೇ ಒಂದು ಹಳ್ಳಿಯಾಗಿದೆ ಎಂದು ಪದೇ ಪದೇ ಮಾತನಾಡುವ ನಾವು ನಮ್ಮದೇ ಪಕ್ಕದ ಜಿಲ್ಲೆಯಲ್ಲಿ ನಡೆದ ಸಾಂಸ್ಕೃತಿಕ ಸಂಗತಿಗಳನ್ನು ಅರಿಯಲು ತುಂಬ ಕಷ್ಟಪಡಬೇಕಿದೆ. ಅಕ್ಕಪಕ್ಕದ ಜಿಲ್ಲೆಯವರೇ ಒಮ್ಮೊಮ್ಮೆ ಅಪರಿಚಿತರಾಗುವದುಂಟು. ಇಂದಿನ ಜಾಗತೀಕರಣದ ಸಂದಿಗ್ಧ ಪರಿಸ್ಥಿತಿಯಲ್ಲಿ ಸಮುದಾಯವನ್ನು ಒಂದುಗೂಡಿಸುವ, ಸಾಂಸ್ಕೃತಿಕ ಸಂಗತಿಗಳನ್ನು ನಿರ್ವಚಿಸುತ್ತ ಹೊಸ ಬದುಕಿಗೆ ಸಜ್ಜುಗೊಳಿಸುತ್ತ ಸಾಗುವ ರಂಗಭೂಮಿಯಂತೂ ಪರಸ್ಪರ ಸಂಬಂಧಗಳನ್ನು ಮತ್ತೆಮತ್ತೆ ನವೀಕರಿಸಿಕೊಳ್ಳುತ್ತ ಸಾಗಬೇಕಾಗುತ್ತದೆ. ಈ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆ. ಇದನ್ನು ಜಿಲ್ಲೆಯ ಸಮಗ್ರ ಮಾಹಿತಿ ಎಂದೇನು ತಿಳಿಯಬೇಕಿಲ್ಲ. ಇದೊಂದು ಕೈಪಿಡಿ ಮಾತ್ರ, ಮುಂದೆ ಆಸಕ್ತರು ಈ ಮಾಹಿತಿಗಳನ್ನು ವಿಸ್ತರಿಸಿ ಅಧ್ಯಯನ ಕೈಗೊಳ್ಳಬಹುದಾಗಿದೆ. ರಾಜ್ಯದ ಬಹುತೇಕ ತಂಡಗಳ ಒಟ್ಟೂ ನಡೆಯನ್ನು ಅಧ್ಯಯನ ಮಾಡಲು ಈ ಕೈಪಿಡಿಗಳು ನೆರವಾಗಲಿವೆ.

ಉತ್ತರಕನ್ನಡ ಜಿಲ್ಲೆಯ ರಂಗಭೂಮಿಯ ಈ ಕೈಪಿಡಿಯಲ್ಲಿ ಮುಖ್ಯವಾದ ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ ಉತ್ತರಕನ್ನಡ ಜಿಲ್ಲೆಯ ಆಧುನಿಕ ರಂಗಭೂಮಿಯ ಒಟ್ಟೂ ಇತಿಹಾಸವನ್ನು ನೀಡಿದ್ದೇನೆ. ಇನ್ನೊಂದು ಭಾಗದಲ್ಲಿ ವರ್ತಮಾನದಲ್ಲಿ ಪ್ರಯೋಗ ನಡೆಸುತ್ತಿರುವ ರಂಗತಂಡಗಳ ಮಾಹಿತಿಗಳನ್ನು ನೀಡಿದ್ದೇನೆ. ಇನ್ನುಳಿದಂತೆ ಕಂಪನಿ ನಾಟಕಗಳಿಂದ ಪ್ರಭಾವಿತರಾಗಿ ವರ್ಷಕ್ಕೊಮ್ಮೆ ಆ ಬಗೆಯ ನಾಟಕಗಳನ್ನಾಡುವ ಯುವಕ ಮಂಡಳಿಗಳ ಮಾಹಿತಿಯನ್ನು ಗ್ರಾಮೀಣ ರಂಗಭೂಮಿ ಎಂಬ ಶೀರ್ಷಿಕೆಯಡಿ ತಂದಿದ್ದೇನೆ. ಆದರೆ ಇದೇನೂ ಪೂರ್ಣವಲ್ಲ. ಏಕೆಂದರೆ ಬಹುತೇಕ ಕಡೆ ಇದರ ಮಾಹಿತಿಗಳು ಲಭ್ಯವಿಲ್ಲ. ಅದೇ ರೀತಿ ಮಕ್ಕಳ ರಂಗಭೂಮಿ ಕುರಿತ ಮಾಹಿತಿಗಳನ್ನೂ ನೀಡಲಾಗಿದೆ.

ಅರಣ್ಯ ಜಿಲ್ಲೆಯೆಂದೇ ಹೆಸರಾದ ಉತ್ತರಕನ್ನಡದಲ್ಲಿ ಮಾಹಿತಿಗಳು ಲಭ್ಯವಾಗುವುದು ತುಂಬ ಕಷ್ಟ. ಈ ಮೊದಲು ಉತ್ತರಕನ್ನಡ ರಂಗಭೂಮಿಯ ಮೇಲೆ ನಾನು ಕೈಗೊಂಡ ಸಂಶೋಧನೆಯ ಮಾಹಿತಿ ಹಾಗೂ ಇತ್ತೀಚೆಗೆ ತಂಡಗಳು ನನಗೆ ನೀಡಿದ ಮಾಹಿತಿಗಳಾಧಾರದ ಮೇಲೆ ಈ ಬರೆಹ ತಯಾರಿಸಲಾಗಿದೆ. ಸಾಧ್ಯವಾದಷ್ಟು ಮಾಹಿತಿ

ಹಾಗೂ ಛಾಯಾ ಚಿತ್ರಗಳು ಇಲ್ಲಿವೆ. ರಂಗಮಂದಿರಗಳು ಇಡೀ ಜಿಲ್ಲೆಯಲ್ಲಿ ಇರುವದೇ ಎರಡು. ಉಳಿದವು ಸಭಾಭವನಗಳು. ಕಿರಣ ನಾಯ್ಕ ನೀನಾಸಂಗಾಗಿ ಸಂಗ್ರಹಿಸಿದ ಮಾಹಿತಿಗಳನ್ನು ನೀಡಿದ್ದು ಅವುಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಅದರಲ್ಲೂ 5 ವರ್ಷಕ್ಕಿಂತ ಹೆಚ್ಚುವರ್ಷ ಸೇವೆ ಸಲ್ಲಿಸಿದ ತಂಡಗಳ ವಿವರ ಇಲ್ಲಿದೆ. ವೈಯಕ್ತಿಕ ನೆಲೆಯಲ್ಲಿ ಕೆಲಸ ಮಡಿದ ನೂರಾರು ಕಲಾವಿದರಿರಬಹುದಾದರೂ ಈ ಹೊತ್ತಿಗೆ ಸಂಘಟನೆಯ ಹೆಸರುಗಳನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡಿದೆ. ಇದು ಕಲಾವಿದರ ಕೋಶ ಅಲ್ಲ.

ಸಹಕರಿಸಿದ ತಂಡಗಳಿಗೂ, ಸಂಗ್ರಹದಲ್ಲಿ ನೆರವಾದ ಸ್ನೇಹಿತರಿಗೂ, ಮುಖ್ಯವಾಗಿ ನನ್ನ ಸಂಶೋಧನೆ ಸಂದರ್ಭದಲ್ಲಿ ನೆರವಾಗಿದ್ದ ಸ್ನೇಹಿತರಿಗೂ ಹಾಗೂ ಈ ಕಾರ್ಯಕ್ಕೆ ನನಗೆ ಅನುವು ನೀಡಿದ ಅಕಾಡೆಮಿಯ ಸರ್ವರಿಗೂ ಧನ್ಯವಾದಗಳು.

–ಡಾ. ಶ್ರೀಪಾದ ಭಟ್

ಶಿರಸಿ ಉ.ಕ.

## ಕರ್ನಾಟಕ ನಾಟಕ ಅಕಾಡೆಮಿ

ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

ಶ್ರೀ ಎಲ್.ಬಿ.ಶೇಖ (ಮಾಸ್ತರ)

ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ, ವಿಜಯಪುರ ಜಿಲ್ಲೆ

ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ

ಶ್ರೀ ಪಿ.ತಿಪ್ಪೇಸ್ವಾಮಿ, ಚಳ್ಳಕೆರೆ

ಶ್ರೀ ರಾಜಪ್ಪಕಿರಗಸೂರು, ಮೈಸೂರು ಜಿಲ್ಲೆ

ಶ್ರೀ ಎಸ್.ಕೆ.ಕೊನೆಸಾಗರ, ಹುನಗುಂದ

ಶ್ರೀ ಎಂ.ಎಸ್.ಗುಣಶೀಲನ್, ಬೆಂಗಳೂರು

ಶ್ರೀಮತಿ ಕಲ್ಪನಾ ನಾಗನಾಥ್, ಬೆಂಗಳೂರು

ಶ್ರೀ ಮುದ್ದಣ್ಣ ರಟ್ಟೆಹಳ್ಳಿ, ಹಾವೇರಿ ಜಿಲ್ಲೆ

ಶ್ರೀಮತಿ ಅನ್ನಪೂರ್ಣ ಸಾಗರ, ಶಿವಮೊಗ್ಗ ಜಿಲ್ಲೆ

ಶ್ರೀ ಎಚ್.ಷಡಾಕ್ಷರಪ್ಪ ಹೊಸಮನಿ, ಹರಪ್ಪನ ಹಳ್ಳಿ

ಶ್ರೀ ಕೆ.ಜಗುಚಂದ್ರ, ಧಾರವಾಡ

ಶ್ರೀ ಉಮೇಶ ಸಾಲಿಯಾನ್, ಕಾಸರಗೋಡು

ಶ್ರೀ ಹಾಲ್ಕುರಿಕೆ ಶಿವಶಂಕರ್, ಕೊಪ್ಪಳ ಜಿಲ್ಲೆ

ಶ್ರೀ ವಿ.ಎನ್.ಅಕ್ಕಿ, ರಾಯಚೂರು

ಶ್ರೀ ಬಿ.ಎಂ.ರಾಮಚಂದ್ರ, ಮೈಸೂರು

ಶ್ರೀ ಎನ್.ಕೆ.ರಾಮಕೃಷ್ಣ, ಬೆಂಗಳೂರು

ಶ್ರೀಮತಿ ಎ.ವರಲಕ್ಷ್ಮಿ, ಬಳ್ಳಾರಿ

ಕೋಪ್ಟ್ ಆದ ಸಹಸದಸ್ಯರು

ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು

ಡಾ. ಶ್ರೀಪಾದ ಭಟ್, ಶಿರಸಿ

ಶ್ರೀ ಎಲ್.ಎಚ್.ರಂಗನಾಥಪ್ಪ, ಶಿರಾ

ರಿಜಿಸ್ಟ್ರಾರ್: ಬಿ.ಮಂಜುನಾಥ ಆರಾಧ್ಯ

ಯೋಜನಾ ಸಹಾಯಕರು: ಕೆ.ರೇವಣ್ಣ

ಕಚೇರಿ ಸಿಬ್ಬಂದಿ: ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಪರಿವಿಡಿ

ಅಧ್ಯಕ್ಷರ ನುಡಿ

ರಂಗ ಕೈಪಿಡಿಗೊಂದು ಮುನ್ನುಡಿ

ಲೇಖಕರ ಮಾತು

ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

1. ರಂಗಭೂಮಿಯ ಹೆಜ್ಜೆಗುಂಟ...
2. ಉತ್ತರಕನ್ನಡದ ಮಕ್ಕಳ ರಂಗಭೂಮಿ
3. ಗ್ರಾಮೀಣ ನಾಟಕಗಳು
4. ವರ್ತಮಾನದ ರಂಗ ತಂಡಗಳು
5. ತರಬೇತು ಹೊಂದಿದ ಕಲಾವಿದರು
6. ನೇಪಥ್ಯ ತಂತ್ರಜ್ಞರು
7. ರಂಗ ನಿರ್ದೇಶಕರು
8. ರಂಗ ತಜ್ಞರು – ಸಂಘಟಕರು – ವಿಮರ್ಶಕರು
9. ರಂಗ ಪ್ರಶಸ್ತಿ ಪುರಸ್ಕೃತರು
10. ರಂಗ ಸಂಗೀತ ತಜ್ಞರು
11. ರಂಗ ಸಂಶೋಧಕರು
12. ರಂಗ ಪ್ರಕಟಣೆಗಳು
13. ರಂಗ ಮಂದಿರಗಳು

# ಉತ್ತರ ಕನ್ನಡ ಜಿಲ್ಲೆಯ ರಂಗಭೂಮಿಯ ಹೆಜ್ಜೆಗುಂಟ......

## ರಂಗ ಇತಿಹಾಸ

ಉತ್ತರಕನ್ನಡ ಜಿಲ್ಲೆಯು ಕಾಡು, ಕಡಲುಗಳನ್ನು ಗರ್ಭೀಕರಿಸಿಕೊಂಡಿರುವ, ವೈವಿಧ್ಯಮಯ ಜನಜೀವನವನ್ನೂ, ಹಲವು ಬುಡಕಟ್ಟುಗಳನ್ನೂ ಒಳಗೊಂಡಿರುವ ಜಿಲ್ಲೆ. ಇಲ್ಲಿಯ ಭೌಗೋಳಿಕ–ಸಾಂಸ್ಕೃತಿಕ ವೈವಿಧ್ಯತೆಗೂ, ಇಲ್ಲಿ ಕಂಡುಬರುವ ಕಲಾಪ್ರಕಾರಗಳ ವೈಪುಲ್ಯ ಹಾಗೂ ವೈವಿಧ್ಯಕ್ಕೂ ನೇರ ಸಂಬಂಧ ಇದೆ. ಉತ್ತರಕನ್ನಡದ ಕಲಾ ಪ್ರಕಾರಗಳು ತುಂಬಾ ವಿಶಾಲವಾದ ವ್ಯಾಪ್ತಿಯನ್ನು ಹೊಂದಿವೆ. ಒಂದೆಡೆ ತುಂಬಾ ನಿಗೂಢವೂ, ಸಾಂಕೇತಿಕವೂ ಆದ, 'ತಾಂತ್ರಿಕ' ಎನ್ನಬಹುದಾದ ವಿನ್ಯಾಸಗಳನ್ನು ಹೊಂದಿದ ಸುಗ್ಗಿ ಕುಣಿತದಂತಹ ಕಲಾ ಪ್ರಕಾರಗಳಿದ್ದರೆ, ಇನ್ನೊಂದೆಡೆ ಶೀರಾ ಆಧುನಿಕವಾದ ರಂಗಭೂಮಿ ಇದೆ. ಈ ಮಧ್ಯದಲ್ಲಿ ಜಾನಪದವೋ, ಶಾಸ್ತ್ರೀಯವೋ ಎಂಬ ವಿವಾದದಲ್ಲಿರುವ ರಂಗಪ್ರಕಾರವಿದೆ. ಇವೆಲ್ಲವೂ ಪಾರಸ್ಪರಿಕ ಸಂಬಂಧದ ಸಂಕೀರ್ಣ ಜಾಲವನ್ನು ನಿರ್ಮಿಸಿಕೊಂಡಿದೆ. ಹೀಗೆ ಹಲವಾರು ಬುಡಕಟ್ಟುಗಳ ಕಲಾ ಪ್ರದರ್ಶನಗಳು, ಯಕ್ಷಗಾನದ ಜನಪ್ರಿಯತೆಯ ಮಧ್ಯೆ ಆಧುನಿಕ ರಂಗಭೂಮಿ ಇಲ್ಲವೇ ಇಲ್ಲವೇನೋ ಎನ್ನುವಂತೆ ಕೆಲವೊಮ್ಮೆ ಗೋಚರವಾಗುವದಾದರೂ ಅದರ ರೋಚಕ ಇತಿಹಾಸವೇನೂ ಕಡಿಮೆಯದಲ್ಲ. ಸ್ಥೂಲವಾಗಿ ಈ ಕಥನವನ್ನು ಇಲ್ಲಿ ವಿವರಿಸಿದ್ದೇನೆ.

ಉತ್ತರಕನ್ನಡದ ರಂಗಭೂಮಿಯಲ್ಲಿ ಆಧುನಿಕತೆ ಪ್ರವೇಶ ಮಾಡಿದ್ದು ರಂಗ ಪ್ರಯೋಗದ ಮೂಲಕವಲ್ಲ. ನಾಟಕ ಸಾಹಿತ್ಯದ ಮೂಲಕ. ಉತ್ತರಕನ್ನಡದ ಹಾಗೂ ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ (ವಾಸ್ತವಾದಿ) ನಾಟಕಗಳಾದ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ಮತ್ತು 'ಕನ್ಯಾ ವಿಕ್ರಯ' ಎಂಬ ನಾಟಕಗಳ ಮೂಲಕ ಉತ್ತರಕನ್ನಡದ ಆಧುನಿಕ ರಂಗಭೂಮಿಯ ಕಥನ ಆರಂಭಗೊಳ್ಳಬೇಕಿತ್ತು. ಆದರೆ ಇಗ್ಗಪ್ಪ ಹೆಗಡೆಯ–ಕ್ರಾಂತಿಕಾರಿ ವಸ್ತುವಿಗೆ ಹೆದರಿಯೋ ಅಂತಹದ್ದೊಂದು ನಾಟಕ ಪ್ರಕಟಣೆಯಾದದ್ದು ಹಲವರ ಅರಿವಿಗೆ ಬರದೇ ಹೋದದ್ದೋ, ಅಥವಾ ವಾಸ್ತವವಾದಿ ನಾಟಕಗಳ ಪ್ರಯೋಗ ತಂತ್ರ ತಿಳಿಯದೆಯೋ ಅಂತೂ 1987ರ ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನದ ಪ್ರಯೋಗದಿಂದ ಉತ್ತರ ಕನ್ನಡ ಜಿಲ್ಲೆಯ ರಂಗಭೂಮಿಯ ಪ್ರಯೋಗಗಳು ಆರಂಭಗೊಳ್ಳುವುದಿಲ್ಲ. ಬದಲಾಗಿ ಕಂಪನಿ ನಾಟಕಗಳ ಅನುಕರಣೆಯಿಂದ ಜಿಲ್ಲೆಯ ರಂಗ ಪ್ರಯೋಗಗಳು ಮೊದಲುಗೊಂಡವು. ಈ ರಂಗ ಪ್ರಯೋಗಗಳ ಕುರಿತ ಮಾಹಿತಿಯನ್ನು ಸ್ಥೂಲವಾಗಿ ತಾಲೂಕುವಾರು ನೀಡಲು ಪ್ರಯತ್ನಿಸಲಾಗಿದೆ.

## ಘಟ್ಟದ ಮೇಲಿನ ಪರಿಸರದ ರಂಗ ಚಟುವಟಿಕೆಗಳು, ಶಿರಸಿ

ಉತ್ತರಕನ್ನಡ ಜಿಲ್ಲೆಗೆ ಅದರಲ್ಲೂ ಶಿರಸಿಯನ್ನು ಕೇಂದ್ರವಾಗಿಟ್ಟುಕೊಂಡು ನೂರಾರು ನಾಟಕ ಕಂಪನಿಗಳು ಬಂದಿವೆ. ಶಿರಸಿಯ ಮಾರಿ ಜಾತ್ರೆಯಲ್ಲಿ ತುಂಬ ಪ್ರಸಿದ್ಧವಾದ 5–6 ಕಂಪನಿ ನಾಟಕಗಳು ಒಮ್ಮೆಲೇ ಟೆಂಟು ಹಾಕುತ್ತಿದ್ದವು. ವಿಶೇಷವಾಗಿ ಗರುಡ ಸದಾಶಿವರಾಯ, ಗುಬ್ಬಿವೀರಣ್ಣನವರು, ಏಣಗಿ ಬಾಳಪ್ಪ, ಸಿದ್ರಾಮಪ್ಪ, ಪೀರ್ ಸಾಹೇಬರು, ಕೊಟ್ಟೂರು ದಾನಪ್ಪನವರು, ಹಿರಣ್ಣಯ್ಯ ಮುಂತಾದವರು ತಮ್ಮ ಕಂಪನಿಗಳ ನಾಟಕ ಪ್ರದರ್ಶನಗಳನ್ನು ಇಲ್ಲಿ ನೀಡಿದ್ದಾರೆ. ಭರತ ಕಲೋತ್ತೇಜಕ ನಾಟಕ ಸಭಾ, ಬಳ್ಳಾರಿಯ ಲಲಿತಾ ಕಲಾ ಮಂಡಳಿ, ಶಾರದಾ ಸಂಗೀತ ನಾಟಕ ಮಂಡಳಿ ಗೋಕಾಕ ಮುಂತಾದ ನಾಟಕ ಮಂಡಳಿಗಳು ಇಲ್ಲಿ ಪ್ರದರ್ಶನ ನೀಡುತ್ತಿದ್ದವು.

ಶಿರಸಿಯಲ್ಲಿ ರಂಗಪ್ರಯೋಗ ನಡೆಸಿದ ಮೊದಲ ಮಂಡಳಿ ಗಂಧರ್ವ ಸಂಗೀತ ನಾಟಕ ಮಂಡಳಿ. ಸುಮಾರು 1880 ರಿಂದ 1918 ರವರೆಗೆ ಬದುಕಿದ್ದ ಗಂಧರ್ವ ಸಂಗೀತ ನಾಟಕ ಮಂಡಳಿ ಶ್ರೀ ದೇವಗುಡಿ ಭಾಗವತರಿಂದ ನಡೆಸಲ್ಪಟ್ಟಿತು. ಮೈಸೂರಿನಲ್ಲಿ ಕೆಲಕಾಲ ಇದ್ದ ಕೃಷ್ಣಭಾಗವತರು ಫಾರಸಿ ನಾಟಕಗಳಿಂದ ಪ್ರಭಾವಿತರಾಗಿದ್ದರು. ಅಂತದೇ ಮಾದರಿಯನ್ನು ಅನುಸರಿಸಿ ಶಿರಸಿಯ ಸುತ್ತಮುತ್ತ ಅನೇಕ ನಾಟಕಗಳನ್ನಾಡಿದರು. ಫಾರ್ಸಿ ನಾಟಕಗಳು ದಕ್ಷಿಣಾದಿ ಸಂಗೀತವನ್ನು ಅನುಸರಿಸುತ್ತಿದ್ದವರು. ಮೈಸೂರು ಕಡೆಯಿಂದ ಬರುತ್ತಿದ್ದ ಆ ಕಂಪನಿಗಳು ಕರಾವಳಿಯ ಮಂಗಳೂರಿನ ತನಕ ಬಂದು ಹೋಗುತ್ತಿದ್ದವು. ಶಿರಸಿ ಸುತ್ತಮುತ್ತ ಉತ್ತರ ಕರ್ನಾಟಕಗಳ ಕಡೆಯಿಂದ ಬರುತ್ತಿದ್ದ ಮರಾಠಿ ನಾಟಕಗಳ ಪ್ರಭಾವ ಜೋರಾಗಿತ್ತು. ಉತ್ತರಾದೀ ಸಂಗೀತದ ಕುರಿತು ಆಸಕ್ತಿ ಹೆಚ್ಚಿತು. ಹಾಗಾಗಿ ಫಾರ್ಸಿ ಕಂಪನಿಯ ಶೈಲಿಯ ನಾಟಕಗಳು ಮುಂದೆ ಬೆಳೆದು ಬರಲಿಲ್ಲ.

ಗಂಡಸರೇ ರಂಗದ ಮೇಲೆ ಹೆಣ್ಣು ಪಾತ್ರಗಳನ್ನು ಹಾಕುತ್ತಿದ್ದ ಕಾಲದಲ್ಲೇ ಗುರುರಾವ್ ರಾಮಚಂದ್ರ ರಾಯ್ಕರ ಎಂಬವರು ಸ್ತ್ರೀ ನಾಟಕ ಮಂಡಳಿಯೊಂದನ್ನು ಕಟ್ಟಿದರು. ಕಾಮಾಕ್ಷಿ ಸ್ತ್ರೀ ನಾಟಕ ಮಂಡಳಿ ಎಂಬ ಹೆಸರಿನ ಈ ನಾಟಕ ಮಂಡಳಿಯ ಚಟುವಟಿಕೆಗಳ ಕೆಲ ವಿವರ ನಮಗೆ ಸಿಗುವುದು 1920ರ ಸುಮಾರಿನಲ್ಲಿ. ಶಾಂತಬಾಯಿ, ಗಂಗಬಾಯಿ, ಲೀಲಕ್ಕ, ಯಮುನಕ್ಕ, ಕೆ.ಕಮಲಾಬಾಯಿ, ಹೆರೂರ ಕಮಲಾಬಾಯಿ ಮುಂತಾದವರು ಈ ಮಂಡಳಿಯಲ್ಲಿದ್ದರು. ಗಿರಿಜಮ್ಮ ಎನ್ನುವವರು ಹಾರ್ಮೋನಿಯಂ ನುಡಿಸುತ್ತಿದ್ದರು. ಕಾಮಾಕ್ಷಮ್ಮನವರು ಮೇಕಪ್ ಮಾಡುತ್ತಿದ್ದರು. ಅನೇಕ ಪೌರಾಣಿಕ ನಾಟಕಗಳನ್ನು ಈ ತಂಡ ಆಡಿದೆ. ಗದಾಯುದ್ಧ, ಕುರುಕ್ಷೇತ್ರ ಮುಂತಾದ ನಾಟಕಗಳನ್ನು ಪ್ರದರ್ಶಿಸಿ ತಂಡ ಪ್ರಸಿದ್ಧಿಗೆ ಬಂದಿತ್ತು . ಹಾನಗಲ್‌ನಲ್ಲಿ ಇವರ ಕುರುಕ್ಷೇತ್ರ ನಾಟಕ 6 ತಿಂಗಳುಗಳ ಕಾಲ ಪ್ರಯೋಗ ಕಂಡಿತ್ತು ಎಂಬ ಸಂಗತಿ ಕನ್ನಡದ ಮೊದಲ ಪೂರ್ಣ ಪ್ರಮಾಣದ ವ್ಯವಸಾಯಿ ಸ್ತ್ರೀ ನಾಟಕ ಮಂಡಳಿ ಇದೆ ಆಗಿರಬಹುದೆಂಬ ಊಹೆಯನ್ನು ಮೂಡಿಸುತ್ತದೆ

**ಕಾಮಾಕ್ಷಿ ಸ್ತ್ರೀ ನಾಟಕ ಮಂಡಳಿಯಲ್ಲಿ** ಪ್ರಮುಖ ಪಾತ್ರ ವಹಿಸುತ್ತಿದ್ದ ಕೆ. ಕಮಲಾಬಾಯಿ 1930ರ ಸುಮಾರಿಗೆ 'ಸಂಗೀತ ಕಲಾ ನಾಟಕ ಸಭಾ ಶಿರಸಿ' ಎಂಬ ಇನ್ನೊಂದು ನಾಟಕ ಮಂಡಳಿ ಕಟ್ಟಿದಳು. ಈ ಮಂಡಳಿ 'ಕೊತ್ವಾಲ ಕಮಲಾಬಾಯಿ ಮಹಿಳಾ ನಾಟಕ ಮಂಡಳಿ' ಎಂದೇ ಹೆಸರಾಗಿತ್ತು . ಕಮಲಾಬಾಯಿ **'ನಮ್ಮೂರ ಜಟ್ಟಿ'** ಎಂಬ ಸಾಮಾಜಿಕ ನಾಟಕವನ್ನು ಬರೆದು ಅದರಲ್ಲಿ ಕೊತ್ವಾಲರ ಪಾತ್ರ ವಹಿಸಿ ಪ್ರಸಿದ್ಧರಾಗಿದ್ದರು. ಜನ ಅವಳಿಗೆ ಕೊತ್ವಾಲನ ಕಮಲಾಬಾಯಿ ಎಂದೇ ಕರೆಯಲಾರಂಭಿಸಿದರು. ಬದುಕಿನ ಪರ್ಯಾಂತ ಆಕೆಗೆ ಕೆ. (ಕೊತ್ವಾಲ) ಕಮಲಾಬಾಯಿ ಎಂಬ ಹೆಸರೇ ಖಾಯಂ ಆಯಿತು. ಅವಳ ತಂಡದಲ್ಲಿ ಹೆರೂರ ಕಮಲಾಬಾಯಿ, ಹಾನಗಲ್‌ನ ಚಂದ್ರಬಾಯಿ, ಶಿರಸಿಯ ಬಂಗಾರಮ್ಮ, ನಾಗರತ್ನಮ್ಮ ಮುಂತಾದವರು ಇದ್ದರು. ಶಿರಸಿಯ ಚನ್ನಯ್ಯಶೆಟ್ಟರು ಈ ತಂಡದ ಆಧಾರ ಸ್ತಂಭವಾಗಿದ್ದರು. ಶಿರಸಿಯಲ್ಲಿ ಕಾಮಾಕ್ಷಮ್ಮನವರ, ಕೆ.ಕಮಲಾಬಾಯಿಯವರ ನಾಟಕ ತಂಡಗಳೆರಡೂ ಸಾಕಷ್ಟು ಪೈಪೋಟಿ ನಡೆಸಿದೆ–ವೈಭವದ ಗಳಿಗೆಗಳನ್ನೂ ಕಂಡಿದೆ.

1929–30 ರ ಸುಮಾರಿಗೆ ಶೀಗೆಹಳ್ಳಿಯ ಪರಮಾನಂದ ಸಾಧನ ಎಂಬ ಪತ್ರಿಕೆಯ ಸಂಪಾದಕರಾದ ಶ್ರೀ.ಗ.ಕಂ. ಸರ್ಪಕರ್ಣೇಶ್ವರರು ವೇಣು ಬಂಧನ, ಸುಖ ಸಂಸಾರ ಮುಂತಾದ ನಾಟಕಗಳನ್ನು ಬರೆದು ಆಡಿಸಿದರು. ಗಳಗನಾಥರ ಕಾದಂಬರಿಯಿಂದ ಪ್ರೇರಿತರಾಗಿ ಅವರು ಅನೇಕ ಐತಿಹಾಸಿಕ ನಾಟಕಗಳನ್ನು ಬರೆದು ರಚಿಸಿದ್ದರು. 1930ರ ಸುಮಾರಿಗೆ ಶಿರಸಿಯ ಹೊಸಪೇಟೆ ಮಲ್ಲಯ್ಯನವರು ನಾಟಕಕ್ಕೆ ಬೇಕಾದ ಪರದೆ, ಪರಿಕರಗಳನ್ನೆಲ್ಲಾ ಸಿದ್ಧಗೊಳಿಸಿಕೊಂಡು ಕಂಪನಿ ಕಟ್ಟಿದರು. ಅವರು ಪ್ರಯೋಗಿಸುತ್ತಿದ್ದ **'ಭೋಜ ಕಾಳಿದಾಸ'** ನಾಟಕ ತುಂಬಾ ಪ್ರಸಿದ್ಧಿ ಹೊಂದಿತ್ತು . ಇದೇ ಕಾಲಕ್ಕೆ ಶಿರಸಿಯ ರಾಯರ ಪೇಟೆ ಜನ್ನರಾಯರು 'ವೆಂಕಟೇಶ ನಾಟ್ಯ ಸಭಾ' ಎಂಬ ಹೆಸರಿನ ಸಂಸ್ಥೆಯನ್ನು ಕಟ್ಟಿ ಸುಮಾರು 30 ವರ್ಷಗಳವರೆಗೆ ಅದನ್ನು ನಡೆಸಿದರು. ನಟನೆ, ಸಂಗೀತ, ಸೆಟ್ಟಿಂಗ್ ಇವೆಲ್ಲ ತುಂಬ ಉಚ್ಚ ಮಟ್ಟದಲ್ಲಿತ್ತು . ಜನಾರ್ಧನರಾಯರು ಮತ್ತು ಅದೇ ಕಂಪನಿಯ ಗೋಪು ಭಟ್ಟರು ತಮ್ಮ ಅಭಿನಯದ ಮೂಲಕ ಆ ಕಾಲದಲ್ಲಿ ತುಂಬ ಹೆಸರಾಗಿದ್ದರು. ವಿಷಯ ವಿವಾಹ, ಚೌತಿ ಚಂದ್ರ, ಪಾದುಕಾ ಪಟ್ಟಾಭಿಷೇಕ, ಮಹಾತ್ಮ ಕಬೀರ, ಎಚ್ಚಮ ನಾಯಕ, ವೀರ ಅಭಿಮನ್ಯು ಮುಂತಾದ ಅನೇಕ ನಾಟಕಗಳನ್ನು ಈ ತಂಡ ಪ್ರದರ್ಶಿಸಿದೆ. ರಂಗ ಪರಿಕರಗಳನ್ನು, ಸ್ಟೇಜ್ ಕಟ್ಟಿಂಗ್‌ನ್ನು ಸ್ವತಃ ತಯಾರಿಸುತ್ತಿದ್ದ ಜನ್ನರಾಯರು ಉತ್ತಮ ಹಾಡುಗಾರರು ಆಗಿದ್ದರು.

1940–45ರ ಸುಮಾರಿಗೆ ಮಹಾರುದ್ರಪ್ಪ ಪ್ರಜಾರರು ಶಿರಸಿಯ ಹವ್ಯಾಸಿ ಕಲಾವಿದರನ್ನು ಸೇರಿಸಿಕೊಂಡು ಅನೇಕ ಪ್ರಯೋಗಗಳನ್ನು ಮಾಡಿದರು. ಹಲವಾರು ಸಾಮಾಜಿಕ ನಾಟಕಗಳನ್ನು ಪ್ರಯೋಗಿಸಿದ ಕೀರ್ತಿ ಇವರದ್ದು. ಏಕ ಚಾ ಪ್ಯಾಲಾ ಮರಾಠಿ ನಾಟಕವನ್ನಾಧರಿಸಿದ ಒಂದೇ ಗ್ಲಾಸು, ಮಂಗಲ ಸೂತ್ರ, ಪುಣ್ಯ ಪ್ರಭಾವ,

ಪಾಣಿ ಗ್ರಹಣ, ಹಳ್ಳಿಯ ಬದುಕು, ಆದರ್ಶ ಪ್ರೇಮ ಮುಂತಾದ ನಾಟಕಗಳಲ್ಲದೇ ಓಸಿ ಅಥವಾ ಸ್ತ್ರೀ ರತ್ನ, ಮುನ್ಸಿಪಾಲಟಿ ಎಂಬ ಕ್ರಾಂತಿಕಾರಿ ನಾಟಕಗಳನ್ನು ಪ್ರದರ್ಶಿಸಿದರು. ಸಂಗೀತ ಶಾಲೆ ನಡೆಸುತ್ತಿದ್ದ ಮಹಾರುದ್ರಪ್ಪ ಪೂಜಾರ್, ವಿ.ಟಿ.ಹೆಗಡೆ ಶೀಗೆಹಳ್ಳಿಯಂತಹ ಅನೇಕ ರಂಗಭೂಮಿ ಕಲಾವಿದರಿಗೆ ಸಂಗೀತ ಗುರುಗಳಾಗಿದ್ದರು.

ಉತ್ತರ ಕನ್ನಡದ ಆಧುನಿಕ ರಂಗಭೂಮಿಯನ್ನು ಬಹು ದೊಡ್ಡದಾಗಿ ಪ್ರಭಾವಿಸಿದವರು **ರಾ.ವೆ.ವಾಲ್ಗಳ್ಳಿ.** ವೃತ್ತಿ ರಂಗಭೂಮಿಯ ಪ್ರಭಾವವನ್ನು ಅರಗಿಸಿಕೊಂಡು ಇಲ್ಲಿಯೂ ಅಂತದೇ ಮಾದರಿಯ ರಂಗಪ್ರಯೋಗಗಳನ್ನು ಮಾಡಿದರು. ಆದರೆ ವಾಲ್ಗಳ್ಳಿಯವರೆಂದರೆ ಇಷ್ಟೇ ಅಲ್ಲ . ಪರಂಪರೆ ಮತ್ತು ಪ್ರಯೋಗಗಳಿಗೆ ಸ್ವತಃ ತಾವೇ ಮಾದರಿಯಾದವರು ಉತ್ತರ ಕನ್ನಡದಲ್ಲಿದ್ದ ಆ ಕಾಲದ ಕಲಾವಿದರೆಲ್ಲರಿಗೆ ವಾಲ್ಗಳ್ಳಿ ಗುರುಗಳಾಗಿದ್ದವರು. ಶೈಕ್ಷಣಿಕ ಕೇಂದ್ರದಲ್ಲಿ ರಂಗಭೂಮಿ ಕುರಿತು ಆಸಕ್ತಿ ಮೂಡಿಸಿ, ಅಪಾರ ಜನರನ್ನು ರಂಗಭೂಮಿಗೆ ತಂದರು. ಕರಾವಳಿಯ ಗೋಕರ್ಣದಲ್ಲಿರುವ ಸಾಹಿತ್ಯ ಸೇವಕ ಸಂಘದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಉತ್ತರ ಕನ್ನಡದ ಮೊದಲ ಪೂರ್ಣ ಪ್ರಮಾಣದ ವ್ಯವಸಾಯ ನಾಟಕ ಮಂಡಳಿಯಾದ ಜಯಕರ್ನಾಟಕ ನಾಟಕ ಮಂಡಳಿಗೆ ನಟರನ್ನೂ, ರಂಗಪರಿಕರಗಳನ್ನೂ ನೀಡಿ, ತಾವೂ ಅದರಲ್ಲಿ ನಟರಾಗಿ ಭಾಗವಹಿಸಿ, ತೊಂದರೆಯಲ್ಲಿದ್ದ ಕಂಪನಿ ಉಳಿಸಲು ಸೀತಾರಾಮಶಾಸ್ತ್ರಿಗಳಿಗೆ ನೆರವಾದರು.

ಪತ್ರಿಕಾ ರಂಗದಲ್ಲಿ ಹಲವಾರು ಪ್ರಯೋಗ ಮಾಡುತ್ತ, ಪತ್ರಿಕೆಯ ಉಳಿವಿಗಾಗಿ ನಾಟಕ ಪ್ರದರ್ಶನ ಏರ್ಪಡಿಸಿದರು. ಒಂದೆಡೆ ಷಹಜಹಾನ್‌ನಂತಹ ಪ್ರದರ್ಶಿಸುತ್ತಾ ಇನ್ನೊಂದೆಡೆ ಪು.ತಿ.ನ. ರವರ 'ಅಹಲ್ಯಾ' ದಂತಹ ಗೀತ ರೂಪಕವನ್ನು ರಂಗಕ್ಕೆ ತರಲು ಶ್ರಮಿಸಿದವರು.

1938 ರ ಸುಮಾರಿಗೆ ತರುಣ ಸಂಘ ಎಂಬ ಸಂಘಟನೆ ಸ್ಥಾಪಿಸಿದ ವಾಲ್ಗಳ್ಳಿ 1941 ರಲ್ಲಿ ಈ ಸಂಘದ ಮೂಲಕ ಜಿಲ್ಲೆಯ ಮೊದಲ ಸಾಹಿತ್ಯ ಸಮ್ಮೇಳನ ಏರ್ಪಡಿಸಿದರು. ಶ್ರೀರಂಗ, ಕಾರಂತ, ಪ್ರಸಿದ್ಧ ನಟ ತಾಡಪತ್ರಿ ರಾಘವಾಚರ್ಯ ಮುಂತಾದವರನ್ನು ಈ ಕಾರ್ಯಕ್ರಮಕ್ಕಾಗಿ ಕರೆತಂದರು. ವಾಲ್ಗಳ್ಳಿಯವರಿಗೆ ಅ.ನ.ಕೃ, ತೀ.ನಂ.ಶ್ರೀ ಮುಂತಾದ ಪ್ರಸಿದ್ಧ ಸಾಹಿತಿಗಳೊಡನೆ ಸಂಪರ್ಕವಿತ್ತು. ವೆಂಕಟೇಶ ನಾಟ್ಯ ಸಭಾ ಮಂಡಳಿಯಲ್ಲಿ ನಟನೆಯನ್ನು ಆರಂಭಿಸಿದ ವಾಲ್ಗಳ್ಳಿ ಮುಂದೆ ಕಲಾ ವಿಲಾಸಿ ಸಂಘ ಎಂಬ ರಂಗ ತಂಡ ಕಟ್ಟಿ ಹಲವಾರು ನಾಟಕಗಳನ್ನು ಪ್ರದರ್ಶಿಸಿದರು. 'ಎಚ್ಚೆಮನಾಯಕ' ನಾಟಕ ಅವರಿಗೆ ತುಂಬ ಪ್ರಸಿದ್ಧಿಯನ್ನು ತಂದಿತು. ಮರಾಠಿ ನಾಟಕದ ಅನುವಾದ 'ಏಕ ಚಾ ಪಾಲ್ಯ' ನಾಟಕದಲ್ಲಿ ಅವರ ಪಾತ್ರ ನೋಡಲು ಜನ ಹಾತೊರೆಯುತ್ತಿದ್ದರು. ಸೀತಾರಾಮ ಶಾಸ್ತ್ರಿಗಳ 'ಜಯಕರ್ನಾಟಕ ಸಂಘ'ದ ನಟರೆಲ್ಲ ಕೈಕೊಟ್ಟ ಕೆಟ್ಟ ಗಳಿಗೆಯಲ್ಲಿ , ವಾಲ್ಗಳ್ಳಿ ಅವರ ಜತೆಯಾದರು. ತಮ್ಮ ಜತೆ ಬೈಲಕೇರಿ ಪರಮೇಶ್ವರ ಭಟ್ಟ , ಪನ್ನಿ ಕೃಷ್ಣ ಭಟ್ಟ, ಅಘನಾಶಿನಿ ಸಬಾಹಿತ ಮತ್ತು ಸ್ತ್ರೀ ಪಾತ್ರಕ್ಕಾಗಿ

ಶಿರ್ಶಿಯ ಕಲಾವಂತೆ 'ಗುಲಾಬಿ' ಯನ್ನು ಕರೆತಂದು ಸಂಘದ ಕಾರ್ಯಕಲಾಪ ಸುಗಮವಾಗಿ ಸಾಗುವಂತೆ ಮಾಡಿದರು. ರಜಾಕಾರರ ಹಾವಳಿಗೆ ಸಿಕ್ಕಿ ಜಯಕರ್ನಾಟಕ ಸಂಘ ರಾಯಚೂರಿನಲ್ಲಿ ಕೊನೆಯುಸಿರೆಳೆದ ನಂತರ , ಶಿರ್ಶಿಯಲ್ಲಿ ವಿ.ಟಿ.ಹೆಗಡೆ, ದೀಕ್ಷಿತ, ಮರಾಠೆ ಮುಂತಾದವರ ಜತೆ ಸಿದ್ಧಿವಿನಾಯಕ ಮಿತ್ರಮಂಡಳಿ ಕಟ್ಟಿದರು. 'ಹಸಿರುಕೋಣೆ' ಎಂಬ ನವೀನ ಬಗೆಯ ನಾಟಕ ಪ್ರಯೋಗಿಸಿ ಹಲವಾರು ಪ್ರಯೋಗಗಳನ್ನು ಮಾಡಿದರು. ವಿ.ಟಿ.ಹೆಗಡೆ ಶೀಗೆಹಳ್ಳಿಯವರ ಜತೆ ಸೇರಿ ಮಾರಿಕಾಂಬ ದೇವಾಲಯದ ನವರಾತ್ರಿ ಉತ್ಸವದಲ್ಲಿ 'ಆಶು ನಾಟಕ'ಗಳ ಪ್ರಯೋಗ ನಡೆಸಿದರು. ನೂರಾರು ನಾಟಕಗಳಲ್ಲಿ ಭಾಗವಹಿಸಿದ ಅನುಭವ ಅವರದ್ದು.

ವಾಲ್ಗಳ್ಳಿಯವರು ರಂಗಚಟುವಟಿಕೆ ನಡೆಸುತ್ತಿದ್ದ ಕಾಲದಲ್ಲೇ ಶಿರಸಿಯ ಸುತ್ತಮುತ್ತ ನಾಟಕಗಳನ್ನಾಡಿಸುತ್ತಿದ್ದವರು **ಮುರ್ಡೇಶ್ವರದ ಮಾಧವರಾಯರು.** ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಟಕ ಸಂಘಗಳನ್ನು ಕಟ್ಟಿ ಹುಣ್ಣಿಮೆ – ಅಮವಾಸ್ಯೆ ಎರಡನ್ನೂ ಕಂಡವರಲ್ಲಿ ಮುರ್ಡೇಶ್ವರ ಮಾಧವರಾಯರೂ ಒಬ್ಬರು. ಅವರು ಉತ್ತಮ ನಟನಾ ಸಾಮರ್ಥ್ಯವುಳ್ಳವರೂ, ಸಂಗೀತಗಾರರೂ ಆಗಿದ್ದರು. ದಿ.ಗರುಡ ಸದಾಶಿವರಾಯರ ಜತೆ ರಂಗಾನುಭವ ಹೊಂದಿದವರು. ಉತ್ತರ ಕನ್ನಡದ ಭಟ್ಕಳ ತಾಲೂಕಿನ ಮುರ್ಡೇಶ್ವರದಲ್ಲಿ ಜನಿಸಿದ ಚಿಕ್ಕಂದಿನಲ್ಲೇ ನಟರಾಗಿ ರಂಗಾಭೂಮಿಗೆ ಪಾದಾರ್ಪಣ ಮಾಡಿದವರು ಮುಂದೆ ದಕ್ಷಿಣ ಕನ್ನಡದ ಅಂಬಾ ಪ್ರಸಾದಿತ ನಾಟಕ ಸಂಸ್ಥೆ ಸೇರಿ ಕೆಲಕಾಲ ನಟರಾಗಿದ್ದು ನಂತರ ಮಾರುತಿ ಪ್ರಸಾದಿತ ನಾಟಕ ಮಂಡಳಿ ಎಂಬ ಸ್ವಂತ ಕಂಪನಿ ಕಟ್ಟಿ ಕೆಲಕಾಲ ಪ್ರದರ್ಶಗಳನ್ನಿತ್ತರು. ಕಂಪನಿಯ ಅವನತಿಯ ನಂತರ ರಾಜ್ಯದ ಅನೇಕ ನಾಟಕ ಕಂಪನಿಗಳಲ್ಲಿ ನಟರಾಗಿ ದುಡಿದು ಕೊನೆಗೆ ತಮ್ಮ ಕೊನೆಗಾಲದ ವರೆಗೂ ಶಿರಸಿ ಸುತ್ತಮುತ್ತ ರಂಗಭೂಮಿಯ ಕೈಂಕರ್ಯ ನಡೆಸಿದರು. ಶಿರಸಿಯ ಆಸಕ್ತ ರಂಗಕಲಾವಿದರನ್ನು ಸೇರಿಸಿ ಶಿರಸಿಯಲ್ಲಿ ಶ್ರೀ ಗುರು ಮಾರುತಿ ವಿಜಯ ನಾಟ್ಯ ಸಂಘ ಮುರುಡೇಶ್ವರ ಎಂಬ ತಂಡ ಕಟ್ಟಿ ಅನೇಕ ನಾಟಕಗಳನ್ನಾಡಿಸಿದ್ದಾರೆ. ಗೋಳಿ, ಬನವಾಸಿ, ಸಂಪಖಂಡ, ಸಾಲ್ಕಣಿ,ಬರೂರ ಮುಂತಾದ ಹಳ್ಳಿಗಳಲ್ಲಿ ಹಲವಾರು ನಾಟಕ ನಿರ್ದೇಶಿಸಿದ್ದಾರೆ. ಟಿಪ್ಪುಸುಲ್ತಾನ ಇವರಿಗೆ ಪ್ರಸಿದ್ಧಿ ತಂದ ನಾಟಕ. ಪ್ರೊಫೆಸರ್ ಎಸ್.ಜಿ.ಪ್ರಾತಃಕಾಲ ಟಿಪ್ಪುಸುಲ್ತಾನ ಪಾತ್ರವಹಿಸಿ ಅಪಾರ ಪ್ರಸಿದ್ಧಿ ಪಡೆದದ್ದು ಇವರ ಕಾಲದಲ್ಲಿ.

**ಕುಳವೆ ಜಿ.ಜಿ.ದೀಕ್ಷಿತರು**, ವಿ.ಟಿ.ಹೆಗಡೆ ಶೀಗೆಹಳ್ಳಿ, ವಾಲ್ಗಳ್ಳಿ ಇವರು ನಡೆಸುತ್ತಿದ್ದ ಸಿದ್ಧಿವಿನಾಯಕ ಮಿತ್ರ ಮಂಡಳಿಯಲ್ಲಿ ನಟರಾಗಿದ್ದರು. ಇವರು ಶಿರಸಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸ್ವರಚಿತ ನಾಟಕಗಳಾದ ಹಿಮಗಿರಿಯ ಗೌರಿ, ಟುಡೇ ಇನ್ ಶಿರಸಿ, ಉದ್ರಿ ನಗದಿ, ಪಿಂಚಣಿ ಮಾಸ್ತರ ಮುಂತಾದ ನಾಟಕಗಳನ್ನಾಡಿಸಿದ್ದಾರೆ. ಶಿರಸಿ ಸುತ್ತಮುತ್ತ ನಾಟಕಗಳನ್ನಾಡಿಸಿದ ಮುಖ್ಯರಲ್ಲಿ ರಾಮಚಂದ್ರ ಶರ್ಮ ಒಬ್ಬರು. ಚೌಲೆ ಚಂದ್ರ, ವೀರ ಅಭಿಮನ್ಯು, ಕಬೀರದಾಸ ಮುಂತಾದ ನಾಟಕಗಳನ್ನು ಪ್ರದರ್ಶಿಸಿದ್ದಾರೆ. 1956ರಲ್ಲಿ

ಶಿರಸಿಯಲ್ಲಿ ನಡೆದ ಅಖಿಲ ಭಾರತ ಮಲೆನಾಡ ಸಮ್ಮೇಳನದಲ್ಲಿ ಇವರ ಚಂದ್ರಹಾಸ ನಾಟಕ ಅಪಾರ ಪ್ರಶಂಸೆಗೆ ಪಾತ್ರವಾಯಿತು, ಇವರ ಇನ್ನೊಂದು ಅದ್ದೂರಿ ಪ್ರಯೋಗ ಅಕ್ಷಯಾಂಬರ.

ಹಯವದನ ನಾಟಕದ ಪ್ರದರ್ಶನದ ಜತೆಗೆ ಉತ್ತರ ಕನ್ನಡ ಜಿಲ್ಲೆಗೆ ಪ್ರಯೋಗಾತ್ಮಕ ರಂಗಭೂಮಿಯನ್ನು ಪರಿಚಯಿಸಿದವರು **ವಿ.ಟಿ.ಹೆಗಡೆ ಶೀಗೆಹಳ್ಳಿ**, ಯಕ್ಷಗಾನ ಅನುಭವ ಮತ್ತು ವಾಲ್ಗಳ್ಳಿಯವರ ಮಾರ್ಗದರ್ಶನ ಅವರನ್ನು ಸಮರ್ಥ ಕಲಾವಿದರನ್ನಾಗಿಸಿತು. 1947 ರಲ್ಲಿ ಶ್ರೀ ಸಿದ್ಧಿ ವಿನಾಯಕ ಮಿತ್ರ ಮಂಡಳಿಯನ್ನ ಕಟ್ಟಿಕೊಂಡರು. ಇವರ ಜೊತೆ ಶ್ರೀ ವಾಲ್ಗಳ್ಳಿ, ಶ್ರೀನಿವಾಸ ವರ್ಝು, ಪ್ರಭಾಕರ ಮರಾಠೆ, ಚಿತ್ತರಗಿ ಮಠ, ದೀಕ್ಷಿತ್ ಮುಂತಾದ ಪ್ರತಿಭಾವಚಿತರಿದ್ದರು. ಈ ತಂಡ ನಾಟಕ, ಯಕ್ಷಗಾನ, ವಚನ ಭಾಗವತ ಹೀಗೆ ಎಲ್ಲ ಬಗೆಯ ಪ್ರದರ್ಶನವನ್ನೂ ನೀಡುತ್ತಿತ್ತು. ವಿ.ಟಿ.ಹೆಗಡೆ ನಿರ್ದೇಶನದ ಸಿದ್ಧಿವಿನಾಯಕ ಸಂಘ ಆಶು ನಾಟಕ ಪ್ರದರ್ಶನಕ್ಕೂ ಬಹಳ ಪ್ರಸಿದ್ಧಿಯಾಗಿತ್ತು. ಯಾವುದೇ ವಿಷಯ ಕೊಡಲಿ ಮುಂದಿನ ಅರ್ಧ ಗಂಟೆ ತಾಸಿನಲ್ಲಿ ನಾಟಕ ಹೆಣೆದು ಸ್ಟೇಜಿಗೆ ಬರುತ್ತಿದ್ದರು. ವಿ.ಟಿ.ಹೆಗಡೆ ಮತ್ತು ಅವರ ತಂಡ ಪ್ರದರ್ಶಿಸಿದ ಆಶು ನಾಟಕಗಳು ರಂಗಭೂಮಿಯಲ್ಲಿ ನಡೆದ ವಿಶಿಷ್ಟ ಪ್ರಯೋಗಗಳಾಗಿವೆ. ವಿ.ಟಿ.ಹೆಗಡೆ ತಮ್ಮ ತಂಡದ ಮೂಲಕ **ಕುರುಕ್ಷೇತ್ರದಂತಹ** ಪೌರಾಣಿಕ ನಾಟಕಗಳನ್ನೂ, ಶಿವರಾಮ ಕಾರಂತರು ರಚಿಸಿದ **ಗರ್ಭಗುಡಿಯಂತಹ** ವಾಸ್ತವವಾದಿ ನಾಟಕಗಳನ್ನೂ, ಪರ್ವತವಾಣಿ ರಚಿಸಿದ ಲಂಚಾಮೃತ ದಂತಹ ಏಕಾಂಕಗಳನ್ನೂ, ಹೀಗೆ ತುಂಬಾ ವೈವಿಧ್ಯಮಯವಾದ ರಂಗ ಪ್ರದರ್ಶನಗಳನ್ನು ನೀಡಿದ್ದಾರೆ.

1950 ರಲ್ಲಿ ಆರಂಭವಾದ **ಗೋಳಿಯ ಶ್ರೀ ಸಿದ್ಧಿವಿನಾಯಕ ನಾಟ್ಯ ಕಲಾಸಂಘ** ವೀರ ಅಭಿಮನ್ಯು, ಉತ್ತರ ಭೂಪ, ಬಿ.ಎ ಮುಂತಾದ ನಾಟಕಗಳನ್ನು ಮುರುಡೇಶ್ವರ ಮಾಧವರಾಯರ ನಿರ್ದೇಶನದಲ್ಲಿ ಪ್ರದರ್ಶಿಸಿದೆ. ತಾಳಗುಪ್ಪ, ಶಿರಸಿ ಮುಂತಾದ ಕಡೆ ನಾಟಕಗಳನ್ನು ಪ್ರದರ್ಶಿಸುತ್ತ ಬಂದ ಈ ತಂಡ ನಂತರ ಪೌರಾಣಿಕ ನಾಟಕ ಪ್ರದರ್ಶನಕ್ಕಾಗಿ ಹೆಸರಾಯಿತು. ಉಷಾ ಸ್ವಯಂವರ, ಶ್ರೀಕೃಷ್ಣ ಗಾರುಡಿ, ಕುರುಕ್ಷೇತ್ರ, ಚೌತಿ ಚಂದ್ರ ಇವು ಈ ತಂಡದ ಬಹುಮುಖ್ಯ ಪ್ರದರ್ಶನಗಳಾಗಿವೆ. ರಾಮಚಂದ್ರ ಹೆಗಡೆ, ಶಂಕರ ನಾರಾಯಣ ಹೆಗಡೆ ಎಂಬ ಸಹೋದರರು ಈ ಪ್ರದರ್ಶನದ ನೇತೃತ್ವವನ್ನು ವಹಿಸಿದ್ದರು. ನಾಟಕದ ಸೆಟ್ಟಿಂಗ್ ತಯಾರಿಕೆ, ಸೀನರಿಗಳ ತಯಾರಿಕೆಯಲ್ಲಿ ಪ್ರವೀಣರಾದ ಈ ಸಹೋದರರು ಸುತ್ತಮುತ್ತಲಿನ ಹಳ್ಳಿಯ ಸುಮಾರು 150 ಜನ ಕಲಾವಿದರನ್ನು ಸೇರಿಸಿ ನಾಟಕವಾಡುತ್ತಿದ್ದರು. ಅದ್ಭುತ ದೃಶ್ಯ ವೈಭವ, ಸಾವಿರಾರು ಕುಸುರಿ ಕೆಲಸದ ಸೆಟ್ಟಿಂಗ್, ಉತ್ತಮ ಸಂಗೀತ, ಪೂರಕ ಬೆಳಕು ಇವರ ನಾಟಕದ ವೈಶಿಷ್ಟ್ಯವಾಗಿತ್ತು. 10–15 ಸಾವಿರ ಮಂದಿ ಪ್ರೇಕ್ಷಕರು ಇವರ ಪ್ರದರ್ಶನಗಳನ್ನು ನೋಡಿದ್ದಾರೆ. ಕುರುಕ್ಷೇತ್ರ ನಾಟಕಕ್ಕೆ ತಂಡ ಖರ್ಚು ಮಾಡಿದ ಹಣ 40 ಸಾವಿರ ರೂಪಾಯಿಗಳಾಗಿದ್ದರೆ, ಆ ನಾಟಕದ ಪ್ರದರ್ಶನ ಪ್ರವೇಶ ಧನದ ಮೂಲಕ ಗಳಿಸಿದ್ದು

1 ಲಕ್ಷ ರೂಪಾಯಿಗಳನ್ನು.

ಶಿರಸಿಯ ಎಂ.ಎಂ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ ಹಲವಾರು ರಂಗಚಟುವಟಿಕೆಗಳನ್ನು ನಡೆಸಿದೆ. 1965 ರಲ್ಲೇ ಹಿರಿಯ ಪ್ರಾಧ್ಯಾಪಕ ಎನ್.ಜಿ. ಭಟ್ಟರು ಶ್ರೀರಂಗರ 'ಪ್ರಪಂಚ ಪಾಣಿಪತ್' ನಾಟಕವನ್ನು ಪ್ರದರ್ಶಿಸಿದ್ದರು. 1966 ರಲ್ಲಿ ಅಲ್ಲಿ ಪ್ರಾಚಾರ್ಯರಾಗಿದ್ದ ಎಲ್.ಟಿ.ಶರ್ಮಾ ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನವನ್ನು ಆಕಾಶವಾಣಿಗಾಗಿ ಸಿದ್ಧಪಡಿಸಿದ್ದರು. ಇನ್ನೊಬ್ಬ ಪ್ರಾಧ್ಯಾಪಕ ಎಂ.ರಮೇಶರ ನಿರ್ದೇಶನದಲ್ಲಿ ಈ ನಾಟಕ ರಂಗಪ್ರಯೋಗವನ್ನು ಕಂಡಿತು. ಶ್ರೀ ದಿವಸ್ಪತಿ ಹೆಗಡೆ **'ತುಘಲಕ್'** ನಾಟಕವನ್ನು ಆಡಿಸಿದ್ದರು. ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿ ರಂಗ ತರಬೇತಿ ಶಿಬಿರಗಳನ್ನು ಅಯೋಜಿಸಿ ಹಲವಾರು ನಾಟಕಗಳ ಪ್ರದರ್ಶನಕ್ಕೆ ಈ ಕಾಲೇಜು ಕಾರಣವಾಗಿದೆ.

ಕೆರೆಗೆ ಹಾರ, ಗೋಸುಂಬೆ, ಮದುವೆಯೊ ಮಸಣವೊ, ಮೂರು ಮೆಟ್ಟಿಲ ಕಥೆ ಮುಂತಾದ ಪ್ರದರ್ಶನ ಇಂತಹ ಶಿಬಿರದ ಫಲಗಳಾಗಿವೆ.

ಬಹುಕಾಲ ರಂಗಪ್ರಯೋಗ ನೀಡದೇ ಸುಮ್ಮನಿದ್ದ ಶಿರಸಿಗೆ 1986 **ಶ್ರೀ ಕಿರಣ ಭಟ್** ಅವರ ನೇತೃತ್ವದಲ್ಲಿ ಪ್ರಾರಂಭವಾದ **'ರಂಗಸಂಗ"** 'ಡಾ.ಪಾಸ್ಟಸ್' , 'ಗಾಂಧಿ,' 'ಕತ್ತೆ ಮತ್ತು ಧರ್ಮ' , 'ಕುರಿತೇರು', 'ಸೋಮಾರಿ ಕ್ಲಬ್', 'ಕಪ್ಪು ಕೆಂಪು' ಮುಂತಾದ ನಾಟಕಗಳ ಮೂಲಕ ಚೇತನವನ್ನು ನೀಡಿತು. 1987 ರಲ್ಲಿ ಕಥಾ ನಾಟಕ ಸರಣಿಯ ಕಾರ್ಯಕ್ರಮದಡಿ ಪ್ರೇಮಚಂದ್ರರ ಕಫನ್, ಕಾಫ್ಕಾನ 'ನ್ಯಾಯದ ಬಾಗಿಲಲ್ಲಿ', ಆ್ಯಂಟನ್ ಚೆಕಾವ್‌ನ 'ಗೋಸುಂಬೆ' ನಾಟಕಗಳನ್ನು ಪ್ರದರ್ಶಿಸಿತು. ಅಕಾಡೆಮಿ ಸಹಯೋಗದೊಂದಿಗೆ ನಡೆಸಿದ ರಂಗತರಬೇತಿ ಶಿಬಿರದ ಮೂಲಕ ಮಹಿಮಾಪುರ ನಾಟಕವನ್ನು, ರವಿವಾರದ ರಂಗ ತರಬೇತಿ ಶಿಬಿರದಲ್ಲಿ ಮಹಾಭಾರತ ನಾಟಕವನ್ನು ಪ್ರದರ್ಶಿಸಿದೆ. ಮಕ್ಕಳ ರಂಗಭೂಮಿಯಲ್ಲಿ ವಿಶೇಷ ಕೊಡುಗೆ ನೀಡಿದ ರಂಗಸಂಗ ಹಲವಾರು ಮಕ್ಕಳ ನಾಟಕಗಳನ್ನು ಪ್ರದರ್ಶಿಸಿದೆ ಪಾಠ ನಾಟಕ ಸರಣಿ, ರಂಗವಿಕಾಸ ಯೋಜನೆಯಡಿ ಅನೇಕ ಮಕ್ಕಳ ನಾಟಕಗಳು ಪ್ರದರ್ಶನಗೊಂಡಿವೆ.

ಶ್ರೀ ರಮಾನಂದ ಐನಕೈ ಅವರ ನೇತೃತ್ವದಲ್ಲಿ ಆರಂಭವಾದ **ಅಂಕ ಸಂಸಾರ** ಎಂಬ ಸಂಘಟನೆ ನಾಟಕಗಳನ್ನು ಆಡುತ್ತ ಸಂಘಟಿಸುತ್ತ ಬರುತ್ತಿದೆ. **ಉದ್ಭವ, ಜಾತೆ, ಕುಬಿ ಮತ್ತು ಇಯಾಲ, ಸಾಯೋ ಆಟ, ದೆವ್ವದ ಕಾಟ** ನಾಟಕ ಪ್ರದರ್ಶಿಸಿದೆ. ಕಳೆದ ವರ್ಷದಿಂದ ರೆಪರ್ಟರಿ ಆರಂಭಿಸಿ ಅಂಧಯುಗ ನಾಟಕದ ತಿರುಗಾಟ ನಡೆಸಿದೆ.

ಶಿರಸಿ ಸಮೀಪದ ಬಾಳಗದ್ದೆಯ **ಯುವರಂಗ** ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ ನಾಟಕವನ್ನು ಪ್ರದರ್ಶಿಸಿದೆ. ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ ನಾಟಕದ ನಾಟಕದ ಶತಮಾನೋತ್ಸವ ಸಂದರ್ಭದಲ್ಲಿ ಪ್ರದರ್ಶಿತವಾದ ಈ ನಾಟಕ ದೊಡ್ಡ ಪ್ರಮಾಣದ ಉತ್ಸವದ ವಾತಾವರಣವನ್ನು ಸೃಷ್ಟಿಸಿತ್ತು. ಇಡೀ ಊರಿಗೆ ಊರೇ ಈ ಉತ್ಸವದಲ್ಲಿ ಪಾಲ್ಗೊಂಡಿತು; **ಕೆರೆಗೆ ಹಾರ, ಗಾಂಧೀ ನಗರ** ಇವು ಈ ತಂಡದ ಇತರ ನಾಟಕಗಳು.

ಹುಳಗೊಳ ಎಂಬ ಊರಿನ ಯುವಕ ಸಂಘ, ರಂಗಭೂಮಿಯಲ್ಲಿ ಕ್ರಿಯಾಶೀಲವಾಗಿದ್ದು ಹುತ್ತ, ನ್ಯಾಯದ ಬಾಗಿಲಲ್ಲಿ, ಹೆಡ್ಡಾಯಣ, ದೇವಿ ಕೊಟ್ಟ ಬೆಳಕು ಮುಂತಾದ ನಾಟಕಗಳನ್ನಾಡಿಸಿವೆ. ಮತ್ತಿಘಟ್ಟ ಎಂಬ ಕುಗ್ರಾಮ ಕೂಡ ನಾಟಕ ಸ್ಪರ್ಧೆಯೊಂದನ್ನು ಇತ್ತೀಚೆಗೆ ಸಂಘಟಿಸಿದೆ. ಕೆ.ಆರ್.ಪ್ರಕಾಶರ ನೇತೃತ್ವದಲ್ಲಿ ನಿಸರ್ಗರಂಗಭೂಮಿಯ ಪರಿಕಲ್ಪನೆಯಡಿ ಹಲವು ರೀತಿಯ ಪ್ರಯೋಗಗಳನ್ನು ನಡೆಸಿದೆ.

## ಸಿದ್ದಾಪುರ

**ಸಿದ್ದಾಪುರ**ದಲ್ಲಿ ಆರಂಭಕಾಲದಲ್ಲಿ ನಡೆದ ಚಟುವಟಿಕೆಗಳ ಕುರಿತು ಹೆಚ್ಚಿನ ಮಾಹಿತಿಗಳು ದೊರಕುವುದಿಲ್ಲವಾದರೂ 19 ನೇ ಶತಮಾನದ ಕೊನೆಯಲ್ಲಿ ಇದ್ದ **'ತಿಪ್ಪಯ್ಯ ಮಾಸ್ತರ'**ರು ಎಂಬುವರು ಸಿದ್ದಾಪುರದಲ್ಲಿ ಅನೇಕ ನಾಟಕಗಳನ್ನು ರಚಿಸಿದ್ದು, ಆ ಭಾಗದಲ್ಲಿ ರಂಗಚಟುವಟಿಕೆಗಳಿಗೆ ಕಾರಣರಾಗಿದ್ದರು. ಸಾಕಷ್ಟು ಜನಪ್ರಿಯತೆ ಹೊಂದಿದ ಅವರನ್ನು 1898 ರಲ್ಲಿ ಮೈಸೂರು ಸಂಸ್ಥಾನದ ಕೃಷ್ಣರಾಜೇಂದ್ರ ಒಡೆಯರು ಸನ್ಮಾನಿಸಿದ್ದರು. ತಿಪ್ಪಯ್ಯ ಮಾಸ್ತರರು ಅನೇಕ ನಾಟಕಗಳನ್ನು ಬರೆದಿದ್ದಾರೆ. ಪದ್ಮಾವತಿ ಪರಿಣಯ, ಪ್ರಯತ್ನ ಪ್ರಭಾವ, ವಿಜಯ ಸಿಂಹ ಕಲಾಮಂಜರಿ, ಬಕುಳಾದೇವಿ, ವೆಂಕಟೇಶ ಕಲ್ಯಾಣ ಇವು ಅವರ ಪ್ರಸಿದ್ಧ ನಾಟಕಗಳು.

1931 ರಲ್ಲಿ **ಜಯಕರ್ನಾಟಕ ನಾಟಕ ಮಂಡಳಿ** ಸ್ಥಾಪಿತವಾಯಿತು. ಇದರ ಸ್ಥಾಪಕರು **ಹುಲಿಮನೆ ಸೀತಾರಾಮಶಾಸ್ತ್ರಿ**. ಉತ್ತರ ಕನ್ನಡದಲ್ಲಿ ಪೂರ್ಣಪ್ರಮಾಣದ ವೃತ್ತಿಕಂಪನಿಯೊಂದನ್ನು ಕಟ್ಟಿ ರಾಜ್ಯದಾದ್ಯಂತ ಪ್ರದರ್ಶನ ನೀಡಿದ ಕೀರ್ತಿ ಸಿದ್ದಾಪುರದ ಹುಲಿಮನೆ ಶಾಸ್ತ್ರಿಯವರಿಗೆ ಸೇರುತ್ತದೆ. 1931 ರಲ್ಲಿ ಸ್ಥಾಪಿಸಲ್ಪಟ್ಟ ಅವರ ಜಯಕರ್ನಾಟಕ ನಾಟಕ ಮಂಡಳಿ ಜಿಲ್ಲೆಯ ಏಕೈಕ ವ್ಯವಸಾಯ ಮೇಳವಾಗಿತ್ತು . ವೃತ್ತಿರಂಗಭೂಮಿಯ ಇತಿಹಾಸದಲ್ಲಿ ಉತ್ತರ ಕನ್ನಡಕ್ಕೊಂದು ಸ್ಥಾನ ಕಲ್ಪಿಸಿ ಕೊಟ್ಟವರು ಇವರು.

ಹುಲಿಮನೆ ಶಾಸ್ತ್ರಿ ಜನಿಸಿದ್ದು 1904 ರಲ್ಲಿ ಉತ್ತರ ಕನ್ನಡದ ಸಿದ್ದಾಪುರ ತಾಲೂಕಿನ ಸಮೀಪದ ಹುಲಿಮನೆಯಲ್ಲಿ. ಮೊದಲ ಹೆಸರು ಸೀತಾರಾಮ ಹೆಗಡೆ. ಚಿಕ್ಕಂದಿನಲ್ಲೇ ಯಕ್ಷಗಾನದ ಆಕರ್ಷಣೆಗೆ ಸಿಕ್ಕಿದರು. 12 ನೇ ವಯಸ್ಸಿಗೆ ಮನೆಯಿಂದ ಬೆಂಗಳೂರಿಗೆ ಬಂದು , ಬಂಡೇಪಂತರಾಜರ ಸಹಾಯದಿಂದ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆ ಸೇರಿದರು. ವರದಾಚಾರ್ಯರ ಕಂಪನಿಯಲ್ಲಿ ಬಣ್ಣ ಹಚ್ಚಲು ಆರಂಭ ಮಾಡಿ 1925 ರಲ್ಲಿ ಸದಾಶಿವ ಗರುಡರ ದತ್ತಾತ್ರೆಯ ನಾಟಕ ಮಂಡಳಿ ಸೇರಿದರು. ಗರುಡರು ದತ್ತಾತ್ರೆಯ ಸ್ವಾಮಿಯ ಭಕ್ತರಾಗಿದ್ದರು. ಪ್ರತಿನಿತ್ಯ ಕಂಪನಿಯಲ್ಲಿ ಶಾಸ್ತ್ರೋಕ್ತ ಪೂಜೆಯಾಗಬೇಕಿತ್ತು . (ನಾಟಕ ನೋಡಲು ಬಂದವರಿಗೆ ಪ್ರಸಾದರೂಪದ ಹೆಸರುಬೇಳೆ ಪಾಯಸ ಸಿಗುತ್ತಿತ್ತು) ಸೀತಾರಾಮ ಹೆಗಡೆ ಸಂಸ್ಕೃತ ಪರೀಕ್ಷೆ ಪಾಸು ಮಾಡಿ ಸೀತಾರಾಮ ಶಾಸ್ತ್ರಿಯಾಗಿ ಗರುಡರ ಕಂಪನಿಯಲ್ಲಿ ಪೂಜೆಗೆ ಸೇರಿಕೊಂಡರು. ಸಂಸ್ಕೃತ ಸಾಹಿತ್ಯದ ವ್ಯಾಸಂಗದಿಂದೊದಗಿದ ಭಾಷಾ ಶುದ್ಧಿ, ಆರಂಭದಿಂದ ಇದ್ದ

ರಂಗಾಸಕ್ತಿ ಅವರನ್ನು ನಟರಿಗೆ ಸಂಭಾಷಣೆ ಹೇಳಿಕೊಡುವ ಕಾರ್ಯಕ್ಕೆ ಭಡ್ತಿ ನೀಡಿತು. ಕ್ರಮೇಣ ನಾಟಕ ಶಿಕ್ಷಣೋಪಾಧ್ಯಾಯರಾಗಿ ಕೆಲಸ ನಿರ್ವಹಿಸಿ ಚಿಕ್ಕಪುಟ್ಟ ಪಾತ್ರ ವಹಿಸುತ್ತ, ಕ್ರಮೇಣ ಗರುಡರ ಕಂಪನಿಯ ಮುಖ್ಯ ಕಲಾವಿದರೂ ಆದರು. ಮುಖ್ಯವಾಗಿ ಪ್ರತಿನಾಯಕನ ಪಾತ್ರದಲ್ಲಿ ಹೆಸರಾದರು. ಮರಾಠಿ ಹಾಡುಗಳನ್ನೆಲ್ಲಾ ಗರುಡರ ಜತೆ ಕನ್ನಡಕ್ಕೆ ತರ್ಜುಮೆ ಮಾಡುತ್ತ ಮರಾಠಿಯನ್ನು  ಅಭ್ಯಾಸ ಮಾಡಿದರು. ಕೆಲವು ಮರಾಠಿ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಟ್ಟರು.

ಸಂಸ್ಕೃತ ಸಾಹಿತ್ಯದ ಅಭ್ಯಾಸದಿಂದ ಭಾಷಾಜ್ಞಾನ,  ಶಿಕ್ಷಣೋಪಾಧ್ಯಾಯನಾಗಿ ಕಾರ್ಯ ನಿರ್ವಹಿಸಿದ್ದರಿಂದಾಗಿ ಬಂದ ರಂಗದ ಒಳಾಂಗಣದ ಅರಿವು, ಅಭಿನಯದಿಂದ ರಂಗಪ್ರದರ್ಶನದ ಜ್ಞಾನ, ನಿರ್ದೇಶನದ ಅವಕಾಶದಿಂದ ರಂಗ ಪ್ರಯೋಗ ತಿಳಿವು , ಹೀಗೆ ಸೀತಾರಾಮಶಾಸ್ತ್ರಿ ರಂಗಭೂಮಿಯ ದೃಷ್ಟಿಯಿಂದ ಪರಿಣತರಾಗಿ  ತಮ್ಮದೇ ಸ್ವಂತ ಕಂಪನಿಯಿಂದ ಕನಸು ಕಟ್ಟಿದರು. 1931 ರಲ್ಲಿ 'ಜಯಕರ್ನಾಟಕ ನಾಟಕ ಸಂಘ'  ಜನ್ಮ ತಾಳಿ ಕರ್ನಾಟಕ ರಾಜ್ಯಾದ್ಯಂತ ತಿರುಗಾಟ ನಡೆಸಿದ ಈ ತಂಡ ಹಲವಾರು ಏಳುಬೀಳುಗಳನ್ನು ಕಂಡಿತು. ಉಡುಪಿ ಕ್ಯಾಂಪ್‌ನಲ್ಲಿ ಆರ್ಥಿಕವಾಗಿ ಸಾಕಷ್ಟು ಚೇತರಿಸಿಕೊಂಡು 5 ವರ್ಷಕಾಲ ದಕ್ಷಿಣ ಕನ್ನಡದಲ್ಲಿಯೇ ನೆಲೆಸಿತ್ತು . 1948 ಸೆಪ್ಟಂಬರ್ 12 ನೇ ತಾರೀಖು ರಾಯಚೂರಿನಲ್ಲಿ ತಂಡದ ಪ್ರದರ್ಶನ ನಡೆದಿದ್ದಾಗ ರಜಾಕಾರದ ಹಾವಳಿಗೆ ತುತ್ತಾಗಿ ತಂಡ ಅವನತಿ ಹೊಂದಿತು. ಕಂಪನಿ ನಿಂತಮೇಲೆ ಕರೆದಲ್ಲಿ ಹೋಗಿ ಪಾತ್ರ ಮಾಡುತ್ತಿದ್ದ ಶಾಸ್ತ್ರಿಗಳು 1961 ಏಪ್ರಿಲ್‌ನಲ್ಲಿ ದೆಹಲಿಗೆ ಹೋಗಿ ಭಾರತದ ಪ್ರಥಮ ರಾಷ್ಟ್ರಪತಿಗಳಾಗಿದ್ದ ಡಾ. ರಾಜೇಂದ್ರ ಪ್ರಸಾದರ ಸಮ್ಮುಖದಲ್ಲಿ ಟಿಪ್ಪುಸುಲ್ತಾನ ಏಕಪಾತ್ರಭಿನಯ ಪ್ರದರ್ಶಿಸಿ ಮೆಚ್ಚುಗೆ ಪತ್ರ ಪಡೆದರು. 1965 ರಲ್ಲಿ ನಾಟಕ ರಂಗದ ಅವರ ಕೊಡುಗೆಯನ್ನು ಗಮನಿಸಿ ರಾಜ್ಯ ಸರ್ಕಾರ ರಾಜ್ಯ ಪ್ರಶಸ್ತಿ ನೀಡಿತು.

ಸಿದ್ದಾಪುರದಲ್ಲಿ **ಲಕ್ಷ್ಮಿ ವೆಂಕಟೇಶ  ಪ್ರಸಾದಿತ ನಾಟಕ ಮಂಡಳಿ** 1940 ರ ಸುಮಾರಿಗೆ  ಹಲವಾರು ನಾಟಕಗಳನ್ನಾಡಿದೆ ಎಂದು ತಿಳಿದುಬರುತ್ತದೆ.

1950ರ ಸುಮಾರು ಸ್ಥಾಪನೆಗೊಂಡ **ಕರ್ನಾಟಕ ಸಂಘ** ಸಿದ್ದಾಪುರದ ರಂಗಚಟುವಟಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ನಾಡಹಬ್ಬದಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದ ಕರ್ನಾಟಕ ಸಂಘ **ಕಾಬೂಲಿವಾಲ, ದಕ್ಷಯಜ್ಞ, ಅಶೋಕ** ಮುಂತಾದ ನಾಟಕಗಳನ್ನಾಡಿಸಿದೆ. ದಕ್ಷಯಜ್ಞ ರೂಪಕವನ್ನು ನಾಡಿನ ಅನೇಕ ಕಡೆ ಪ್ರದರ್ಶಿಸಿದೆ. **ಆರ್.ಕೆ. ಹೊನ್ನೆಗುಂದಿ** ಸಿದ್ದಾಪುರದ ಸುತ್ತಮುತ್ತಲಿನ ಅನೇಕ ಹಳ್ಳಿಗಳಲ್ಲಿ ನಾಟಕ ಪ್ರದರ್ಶಿಸಿದ್ದಾರೆ. ಮಹಾಗಣಪತಿ ನಾಟ್ಯಕಲಾ ಸಂಘ ಮೊಗೆಗಾರು, ಶ್ರೀ ಭಾರತ ನಾಟಕ ಕಲಾ ತರಬೇತಿ ಕೇಂದ್ರ, ಭತ್ತಗೆರೆ ನಾಟಕ ಸಂಘ, ಹಾರ್ಸಿಕಟ್ಟಾ ನಾಟಕ ಸಂಘ, ವಾಜಗದ್ದೆ ನಾಟಕ ಸಂಘ ಮುಂತಾದವು ನಾಟಕವಾಡಿವೆ. **ವೇದಿಕೆ ತಂಡ** 'ಕ್ರಾಂತಿ ಬಂತು ಕ್ರಾಂತಿ',  'ಜಾತ್ರೆ', ಮುಂತಾದ ನಾಟಕಗಳನ್ನಾಡಿದೆ. ಸಿದ್ದಾಪುರ ತಾಲೂಕಿನ **ಉಂಚಳ್ಳಿ** ಗ್ರಾಮದಲ್ಲಿ ಇತ್ತೀಚೆಗೆ **ಚೂರಿಕಟ್ಟೆ** ನಾಟಕ ಪ್ರದರ್ಶನ ಕಂಡಿದೆ.

ಇತ್ತೀಚಿಗೆ ಸಿದ್ದಾಪುರ ತಾಲೂಕಿನಲ್ಲಿ ರಂಗಚಟುವಟಿಕೆಗಳಿಗೆ ಜೋರಾಗಿ ನಡೆಯುತ್ತದೆ. ಹುಲಿಮನೆ ಶಾಸ್ತ್ರಿ ಪ್ರತಿಷ್ಠಾನ, ಒಡ್ಡೋಲಗ ಹಿತ್ಲಕೈ, ರಂಗಸೌಗಂಧ ವಡ್ಡಿನಗದ್ದೆ ಹಲವಾರು ಮಹತ್ವದ ಪ್ರಯೋಗ ನಡೆಸುತ್ತಿದೆ. ರೆಪರ್ಟರಿ ಮೂಲಕ ನಾಡಿನಲ್ಲೂ ಸಂಚರಿಸುತ್ತಿದೆ. ಮುಂದೆ ಇದರ ವಿವರ ನೀಡಲಾಗಿದೆ.

**ಯಲ್ಲಾಪುರ**

**ಯಲ್ಲಾಪುರ** ತಾಲೂಕಿನ **ಭರತನಹಳ್ಳಿ** ಸೀಮೆ ಎಂಬ ಪ್ರದೇಶದಲ್ಲಿ 1940 ರಿಂದಲೇ ಸಂಗೀತ ನಾಟಕಗಳು ಆಡಲ್ಪಡುತ್ತಿದ್ದವು. 1950-60 ರ ದಶಕದಲ್ಲಿ **ಮಂಚಿಕೇರಿ** ಮತ್ತು **ಕನೇನಹಳ್ಳಿ** ಊರುಗಳಲ್ಲಿ 2 ತಂಡಗಳು ನಾಟಕ ಪ್ರದರ್ಶನ ಮಾಡುತ್ತಿದ್ದವು. 80ರ ದಶಕದಲ್ಲಿ ಮಂಚಿಕೇರಿಯಲ್ಲಿ ರಂಗಾಸಕ್ತರೆಲ್ಲ ಒಂದಾಗಿ ನಾಟಕ ಆಡಲಾರಂಭಿಸಿದರು. ಅಲ್ಲಿ ರಂಗಭೂಮಿ ಹೊಸ ದಿಕ್ಕು ಪಡೆದು ರಂಗ ಚಳುವಳಿಯನ್ನೇ ಆರಂಭಿಸಿತು. ರಾಮಕೃಷ್ಣ ಭಟ್ಟ ದುಂಡಿ, ಜಿ.ಟಿ.ಭಟ್ಟ ಮುಂತಾದವರೆಲ್ಲ ಸೇರಿ ಕೇಳು ಜನಮೇಜಯ, ಬಾಕಿ ಇತಿಹಾಸ ನಾಟಕಗಳನ್ನು ಆಡಿದರು. ನಂತರ ನೀನಾಸಂ ಜೊತೆ ಸಂಬಂಧ ಪಡೆದು ಅದರ ನೆರವಿನಿಂದ 1981 ರಲ್ಲಿ ಜಿಲ್ಲೆಗೆ ಪ್ರಥಮ ಎನ್ನಬಹುದಾದ ರಂಗ ಮಂದಿರವನ್ನು ಕಟ್ಟಿಕೊಂಡಿತು. ಜಯಸಿದ್ಧನಾಯಕ, ಹಯವದನ, ಅಂತಿಗೊನೆ, ಸಂದರ್ಭ, ಕಾಕನಕೋಟೆ, ಅಷಾಡದ ಒಂದು ದಿನ, ಬೆಟ್ಟದರಸು, ವಿದಿಶಯ ವಿದೂಷಕ, ಸೂರ್ಯ ಶಿಕಾರಿ, ಅಗ್ನಿ ವರ್ಣ, ಕತ್ತಲೆ ದಾರಿ ದೂರ, ಕಂತು, ಮಂಟಿಲಾ ಹೀಗೆ ಅನೇಕ ನಾಟಕಗಳನ್ನು ಈ ತಂಡ ಪ್ರದರ್ಶಿಸಿದೆ. ಭಾಸನಿಂದ ಠಾಗೂರರ ವರೆಗೆ ಮಹಾನ್ ನಾಟಕಕಾರರ ನಾಟಕಗಳೆಲ್ಲ ಈ ಹಳ್ಳಿಯಲ್ಲಿ ಆಡಲ್ಪಟ್ಟಿವೆ. ಚಿಂದಂಬರ ರಾವ್‌ಜಂಬೆ, ಕೆ.ವಿ.ಅಕ್ಷರ, ರಘುನಂದನ, ಐತಾಳ, ಕೆ.ಜಿ.ಕೃಷ್ಣಮೂರ್ತಿ ಮುಂತಾದ ಅನೇಕ ನಿರ್ದೇಶಕರು ಇಲ್ಲಿ ಕೆಲಸ ಮಾಡಿದ್ದಾರೆ. ನೀನಾಸಂ ಸಹಕಾರದೊಡನೆ ಮಂಚಿಕೇರಿಯಲ್ಲಿದ್ದ ಸಿದ್ಧಿ ಜನಾಂಗದ ಹಾಡಿಗಳಲ್ಲಿ ರಂಗಶಿಬಿರ ಏರ್ಪಡಿಸಿ ಅವರಿಂದ ನಾಟಕಗಳನ್ನಾಡಿಸಿದೆ. ಸಿದ್ದಿಯರ ಬದುಕಿಗೊಂದು ಸಾಂಸ್ಕೃತಿಕ ಆಯಾಮ ನೀಡಿ. ಸತ್ತವರ ಕತೆಯಲ್ಲ, ಕಪ್ಪು ಜನ ಕೆಂಪು ನೆರಳು, ಮಂಟಿಲ ಎಂಬ ನಾಟಕಗಳನ್ನಾಡಿಸಿ ಕನ್ನಡ ನಾಟಕ ರಂಗಕ್ಕೆ ಅವರನ್ನು ಪರಿಚಯಿಸಿದೆ. ರಾಜ್ಯಾದ್ಯಂತ ಮಾತ್ರವಲ್ಲ ರಾಜ್ಯದ ಹೊರಗಡೆ ಸಹ ನಾಟಕಗಳನ್ನು ಪ್ರದರ್ಶಿಸಿದ ಕೀರ್ತಿ ಈ ಸಂಘದ್ದು. ಅಕಾಡೆಮಿಯ ಸಹಕಾರದೊಂದಿಗೆ 1982 ಮತ್ತು 1986 ರಲ್ಲಿ ನಾಟಕೋತ್ಸವಗಳನ್ನು ಸಂಘಟಿಸಿದೆ.

1980 ರಲ್ಲಿಯೇ ಭರತನಹಳ್ಳಿ ಪ್ರಗತಿ ವಿದ್ಯಾಸಂಸ್ಥೆಯ ಆಶ್ರಯದಲ್ಲಿ **ಅಭಿನವ ಕಲಾಕೂಟ** ಎಂಬ ರಂಗತಂಡವನ್ನು ಕಟ್ಟಿದ ನಾ.ಸು.ಭರತನಹಳ್ಳಿ ಕಾಲಾಯ ತಸ್ಮೈ ನಮಃ, ಅಶೋಕ, ಅವಾಂತರ, ಆಹ್ವಾನ, ರಥಮುಸಲ ಮುಂತಾದ ನಾಟಕಗಳನ್ನಾಡಿಸಿದ್ದಾರೆ.

ಯಲ್ಲಾಪುರ ಭಾಗಕ್ಕೆ ಸೇರಿರುವ ಕಾನಗೋಡು 1999 ರಲ್ಲಿ **ರಂಗಚೇತನ** ಎಂಬ ತಂಡವನ್ನು ಕಟ್ಟಿಕೊಂಡು ಅಂಧಯುಗ ನಾಟಕವನ್ನಾಡಿಸಿದೆ. ಕರ್ನಾಟಕದ ಹಲವೆಡೆ ಪ್ರದರ್ಶನ ನೀಡಿದ. ಈ ತಂಡ ಬೆಂಗಳೂರು ದೂರದರ್ಶನದಲ್ಲಿಯೂ ಪ್ರದರ್ಶನ ನೀಡಿದೆ ಇಂದಿಗೆ ಮೂವತ್ತೈದು ವರ್ಷಗಳ ಹಿಂದೆಯೇ ಇಲ್ಲಿನ ಹಿರಿಯರು ರಂಗಭೂಮಿ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿದ್ದರು. ನಂತರದ ತಲೆಮಾರಿನ ಕಾನಗೋಡು ಮತ್ತು ಬಾಳೆಹದ್ದ ಸುತ್ತಮುತ್ತಲಿನ ಯುವಕರು ಸೇರಿ ಸಂಘಟಿಸಿಕೊಂಡ ಚೈತನ್ಯ ಯುವಕ ಮಂಡಳಿ ಹಲವಾರು ವರ್ಷಗಳಿಂದ ಈ ಚಟುವಟಿಕೆಯನ್ನು ಮುಂದುವರಿಸಿಕೊಂಡು ಬಂತು. ಗರುಡಗಂಬ, ಹರಕೆಯ ಕುರಿ, ಹಯವದನ, ಸೂಳೆ ಸನ್ಯಾಸಿ, ಸಾಕ್ರೆಟಿಸ್, ಕರ್ಣ, ಅಂಧಯುಗ, ಸಾಹೇಬರು ಬರುತ್ತಾರೆ, ತಿರುಗುಬಾಣ ಮುಂತಾದ ನಾಟಕಗಳನ್ನು, ಹೆಡ್ಡಾಯಣ, ಜಯಂತ್ ಮಾಮ, ಯಮಲೋಕ, ಮಾದಣ್ಣನ ಹುಲಿಯೂ, ನಕ್ಕಿತು ನಕ್ಷತ್ರ, ನಾಯಿಮರಿ, ಆಲಿಬಾಬಾ ಮತ್ತು ನಲವತ್ತು ಕಳ್ಳರು ಮುಂತಾದ ಮಕ್ಕಳ ನಾಟಕಗಳನ್ನೂ ಈ ತಂಡ ಪ್ರಯೋಗಿಸಿದೆ. ನಾಟಕ ಹಾಗೂ ಸಂಗೀತ ನಿರ್ದೇಶನದಲ್ಲಿ ಈ ಊರಿನ ಯುವಕರೇ ಮುಂದಾಗುತ್ತಾರೆ. ಕಾನಗೋಡ ಶ್ರೀಪಾದ ಹೆಗಡೆ ತುಂಬ ಕ್ರಿಯಾಶೀಲರಾಗಿ ಇದರಲ್ಲಿ ತೊಡಗಿಕೊಂಡಿದ್ದಾರೆ.

### ದಾಂಡೇಲಿ

ದಾಂಡೇಲಿಯ ಅಂಬಿಕಾನಗರದ ವಿದ್ಯುತ್ ನಿಗಮದಲ್ಲಿ ಕೆಲಸ ಮಾಡುತ್ತಿದ್ದ ನೌಕರರು ರಂಗ ತಂಡ ಕಟ್ಟಿ ಜಿಲ್ಲೆಯ ಬಹು ಮುಖ್ಯ ತಂಡವಾಗಿ ಹೆಸರು ಮಾಡಿದೆ. ಖ್ಯಾತ ನಾಟಕಕಾರ ಹೂಲಿಶೇಖರರ ನೇತೃತ್ವದಲ್ಲಿ 1980 ರ ಹೊತ್ತಿಗೆ **ಜೋಕುಮಾರ ಸ್ವಾಮಿ ಕಲಾಬಳಗ** ಎಂಬ ಹೆಸರಿನಿಂದ ಆರಂಭಗೊಂಡು ಕಲ್ಯಾಣದೊಳ್ಲೊಂದು ಕ್ರಾಂತಿ, ಸ್ವಾಮಿಗಳ ಸ್ವಾಮಾರ, ಭೂತ ಬಂತು ಭೂತ, ಹುತ್ತವ ಬಡಿದರೆ, ಒಥೆಲೊ, ದಫನ್, ಗಾಂಧೀನಗರ, ಸುಯೋಧನ, ಅಹಿ ರಾವಣ, ಮಂದಾರ ಹೂ, ಗುದಮುರಗಿ, ಮುಂತಾದ ಅನೇಕ ನಾಟಕಗಳನ್ನು ಪ್ರದರ್ಶಿಸಿವೆ. ಅನೇಕ ನಾಟಕೋತ್ಸವಗಳನ್ನು ಏರ್ಪಡಿಸಿ ಜಿಲ್ಲೆಯ ರಂಗ ತಂಡಗಳ ಪ್ರದರ್ಶನಗಳಲ್ಲದೇ, ಜಿಲ್ಲೆಯ ಹೊರಗಿನ ರಂಗ ತಂಡಗಳನ್ನು ಕರೆಸಿ ನಾಟಕಗಳನ್ನು ಪ್ರದರ್ಶಿಸುತ್ತವೆ. ಈ ಕಲಾಬಳಗ 1989, 92, 98 ಹೀಗೆ ಮೂರು ವರ್ಷ ನಾಟಕೋತ್ಸವ ಸಂಘಟಿಸಿದೆ.

**ಜೋಯಿಡಾ** ತಾಲೂಕಿನ ಗಣೇಶ ಗುಡಿಯಲ್ಲಿ ಹವ್ಯಾಸಿ ಕಲಾಬಳಗ ಅನೇಕ ವರ್ಷಗಳಿಂದ ರಂಗಚಟುವಟಿಕೆಗಳನ್ನು ನಡೆಸಿಕೊಂಡು ಬಂದಿವೆ. ಶ್ರೀರಂಗರ ಬಹುತೇಕ ಎಲ್ಲಾ ನಾಟಕಗಳನ್ನು ಆಡಿರುವ ಗಣೇಶ ಗುಡಿ ತಂಡದ ಕಲಾವಿದರು ಇತ್ತೀಚಿಗೆ 'ಸಾಂಬಶಿವ ಪ್ರಹಸನ' ನಾಟಕವನ್ನು ಪ್ರದರ್ಶಿಸಿದ್ದಾರೆ.

## ಕರಾವಳಿ ಪರಿಸರದ ರಂಗ ಚಟುವಟಿಕೆಗಳು

ಕರಾವಳಿಯ ರಂಗಚಟುವಟಿಕಗಳ ಕುರಿತ ಮಾಹಿತಿ 1920 ರಿಂದ ದೊರಕುತ್ತದೆ. ಮರಾಠಿ ಭಾಷಾ ಪ್ರಭಾವ ಜೋರಾಗಿದ್ದ ಕರಾವಳಿಯಲ್ಲಿ ಮರಾಠಿ ನಾಟಕಗಳು ಹೆಚ್ಚಾಗಿ ಪ್ರದರ್ಶಿಸಲ್ಪಡುತ್ತಿದ್ದವು. 1920 ರಲ್ಲಿ ಕುಮಟಾದಲ್ಲಿ ಸ್ತ್ರೀ ನಾಟಕ ಮಂಡಳಿ ಇದ್ದು ಅದು ಮರಾಠಿ ಭಾಷೆಯಲ್ಲಿ ನಾಟಕವಾಡುತ್ತಿತ್ತು . 1932 ರಲ್ಲಿ ಮಹಾರಾಷ್ಟ್ರದಿಂದ ಬಂದ ಪ್ರಭಾತ ಸಂಗೀತ ಮಂಡಳಿ ಮರಾಠಿ ಭಾಷೆ ನಾಟಕವನ್ನು 15 ದಿನಗಳ ಕಾಲ ಕುಮಟಾದಲ್ಲಿ ಪ್ರಯೋಗಿಸಿದ ಕುರಿತು ಉಲ್ಲೇಖವಿದೆ. ಇದೇ ಸಮಯದಲ್ಲಿ ಅಂದರೆ ಸುಮಾರು 1930 ರಲ್ಲಿ ಜಿಲ್ಲೆಯ ಕಲಾವಿದರು ನಾಟಕ ಪ್ರದರ್ಶನಗಳನ್ನು ನೀಡಲಾರಂಭಿಸಿದರು.

ಕರಾವಳಿ ಪ್ರದೇಶದ ರಂಗ ಚಟುವಟಿಕೆಗಳ ವಿವರವಾದ ಮಾಹಿತಿಗಳು **ಗೋಕರ್ಣ** ಸೀಮೆಯ ರಂಗ ಪ್ರದರ್ಶನಗಳಿಂದ ದೊರಕಲಾರಂಭಿಸುತ್ತವೆ.

### ಗೋಕರ್ಣ

1933–34 ರಲ್ಲಿ ಹಿರಿಯ ಸಾಹಿತಿ ಗೌರೀಶ ಕಾಯ್ಕಿಣಿಯವರ ನೇತೃತ್ವದಲ್ಲಿ **ಲಲಿತಾ ಕಲಾ ಅಮೇಚ್ಯೂರ** ಎಂಬ ನಾಟಕ ತಂಡ ಹುಟ್ಟಿಕೊಂಡಿತು. ಉತ್ತರ ಕನ್ನಡದ ಕರಾವಳಿ ಪ್ರದೇಶದಲ್ಲಿರುವ ಗೋಕರ್ಣದಿಂದ ಎರಡುವರೆ ಮೈಲಿ ದೂರವಿರುವ ಬಂಕಿಕೊಡ್ಲ ಇದರ ಚಟುವಟಿಕೆಯ ಕೇಂದ್ರವಾಯಿತು. ಗೌರೀಶ ಕಾಯ್ಕಿಣಿ ಈ ತಂಡದ ಪ್ರದರ್ಶನಕ್ಕಾಗಿ ಹಲವಾರು ಮರಾಠಿ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟರು. ಏಕ ಚಾ ಪ್ಯಾಲಾ, ಚಂದ್ರ ಗ್ರಹಣ, ಆಶಾ – ನಿರಾಶ, ಸೌಭದ್ರ, ಯುಗಾಂತರ ಇತ್ಯಾದಿ. ಈ ಎಲ್ಲಾ ನಾಟಕಗಳೂ ಎರಡೆರಡು ಪ್ರದರ್ಶನಗಳನ್ನು ಕಂಡವು. ಯುಗಾಂತರ ನಾಟಕವನ್ನು ಶಿರಾಲಿ, ಚಿತ್ರಾಪುರ ಮುಂತಾದ ಊರುಗಳಲ್ಲಿ ಪ್ರದರ್ಶಿಸಲಾಯಿತು.

ಸರಿಸುಮಾರು ಇದೇ ಸಮಯದಲ್ಲಿ ಗೋಕರ್ಣದ **ಸಾಹಿತ್ಯ ಸೇವಕ ಸಂಘ** ಚಟುವಟಿಕೆಯನ್ನು ಆರಂಭಿಸಿತು. ಸಂಸ್ಕೃತ ವ್ಯಾಸಂಗ ಪಡೆದ ಯುವಕರ ಗುಂಪು ಮೃಚ್ಛ ಕಟಕ , ವೇಣು ಸಂಸಾರ, ಅನಿರುದ್ಧ ಮುಂತಾದ ಸಂಸ್ಕೃತ ನಾಟಕಗಳನ್ನು ಪ್ರಯೋಗಿಸಿತು. ಗೌರೀಶ ಕಾಯ್ಕಿಣಿ ಮರಾಠಿಯಿಂದ ಅನುವಾದಿಸಿದ ಭೂಕೈಲಾಸ ನಾಟಕದಿಂದ ಪ್ರೇರಿತರಾದ ವಿಘ್ನೇಶ್ವರ ಶರ್ಮ ತಾವೇ ಸ್ವತಃ ಭೂಕೈಲಾಸ ನಾಟಕವನ್ನು

ರಚಿಸಿದರು. ತುಂಬಾ ವೈಭವಪೂರ್ಣವಾಗಿ ಪ್ರಯೋಗಿಸಲ್ಪಟ್ಟ ಈ ನಾಟಕ ತಂಡಕ್ಕೆ ಅಪಾರ ಜನಪ್ರಿಯತೆ ತಂದುಕೊಟ್ಟಿತು. ಮುಂದೆ ಮದುವೆಯ ಹುಚ್ಚು, ಪ್ರೇಮಸಂದೇಶ ಇಂತಹ ಸಾಮಾಜಿಕ ನಾಟಕಗಳನ್ನು ಆಡಿ ಜನಪ್ರಿಯವಾಯಿತು. ಗೌರೀಶ ಕಾಯ್ಕಿಣಿ ಈ ಎಲ್ಲ ನಾಟಕಗಳಿಗೆ ಗೀತ ರಚನೆ ಮಾಡುತ್ತಿದ್ದರು. ಶ್ರೀ ರಾಜರಾಮ ಮಾಸ್ತರರು ಸಂಘಕ್ಕಾಗಿ ಪದ್ಮಿನಿ ಎಂಬ ನಾಟಕವನ್ನು ಬರೆದುಕೊಟ್ಟರು. ಆ ನಾಟಕ ಎಷ್ಟು ಪ್ರಸಿದ್ಧಿ ಪಡೆದಿತ್ತೆಂದರೆ ಶಿರಸಿ ಕ್ಯಾಂಪ್‌ನಲ್ಲಿ ನಾಟಕ ಪ್ರದರ್ಶಿಸುತ್ತಿದ್ದ ಶ್ರೀ ಸುಬ್ಬಯ್ಯ ನಾಯ್ಡು ಅವರು ಪದ್ಮಿನಿ ನಾಟಕವನ್ನು ಓದಿ ತಮ್ಮ ಕಂಪನಿಗಳಿಗೆ ಕೈಕೇಯಿ ಪಾತ್ರವನ್ನು ಪ್ರಧಾನ ಭೂಮಿಕೆಯಲ್ಲಿಟ್ಟು ಇದೇ ತರಹದ ನಾಟಕಗಳನ್ನು ಬರೆದು ಕೊಡಲು ರಾಜಾರಾಮ ಮಾಸ್ತರರನ್ನು ವಿನಂತಿಸಿದರು. ಶಿರಸಿಯ ರಾ.ವೇ.ವಾಲ್ಗಳ್ಳಿ ಈ ತಂಡದಲ್ಲಿ ಅಭಿನಯಿಸುತ್ತಿದ್ದರು. ಯಕ್ಷಗಾನ ರಂಗದಲ್ಲಿ ಸಾಕಷ್ಟು ಹೆಸರು ಗಳಿಸಿದ **ಆ್ಯಕ್ಟರ್ ಜೋಶಿ** ಈ ತಂಡದ ನಟರು. ಇದೇ ತಂಡದಲ್ಲಿ ಚಿಕ್ಕ ಪುಟ್ಟ ಪಾತ್ರ ವಹಿಸುತ್ತಿದ್ದ ಆ್ಯಕ್ಟರ್ ಜೋಶಿ ಮುಂದೆ ಅಣ್ಣಿಗೇರಿ, ಕರ್ಜಗಿ, ಬೆಳಗಾವಿ ಮುಂತಾದ ಅನೇಕ ನಾಟಕ ಕಂಪನಿಗಳಲ್ಲಿ ಪಾತ್ರ ವಹಿಸಿ ಗರುಡರ ಕಂಪನಿಯಲ್ಲಿ ತುಂಬ ಪ್ರಸಿದ್ಧಿಗೆ ಬಂದರು. ವಿ.ಎಂ.ಜೋಶಿ ಎಂಬ ಅವರ ಹೆಸರು ಜನರು ಕೊಟ್ಟ ಬಿರುದಿನಿಂದ ಎಕ್ಟರ್ ಜೋಶಿ ಎಂದಾಯಿತು.

### ಕಾರವಾರ

ಗೋವಾ ಸಮೀಪದಲ್ಲಿರುವ **ಕಾರವಾರ** ಮರಾಠಿ ನಾಟಕಗಳ ನೆಲೆವೀಡಾಗಿತ್ತು. ಮರಾಠಿ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದ ನಾಲ್ಕೈದು ಮಂದಿ ಮಹಾರಾಷ್ಟ್ರ ಸಿನಿಮಾ ರಂಗದಲ್ಲಿಯೂ ಪ್ರಸಿದ್ಧಿ ಪಡೆದಿದ್ದಾರೆ. ಕಾರವಾರದ ಜಯಶ್ರೀ ಗಡ್ಕರ ನಾಟಕದ ಮೂಲಕ ಮರಾಠಿ ಸಿನಿಮಾಗೆ ಪಾದಾರ್ಪಣೆ ಮಾಡಿರುವವರಲ್ಲಿ ಪ್ರಮುಖರು. ಈಗಲೂ ಕಾರವಾರದಲ್ಲಿ ಮರಾಠಿ ಯಕ್ಷಗಾನ, ಮರಾಠಿ ಭಾಷೆಯ ಆರ್ಕೆಸ್ಟ್ರಾ ನಿರಂತರವಾಗಿ ನಡೆಯುತ್ತದೆ. ಇಂತಹ ಸನ್ನಿವೇಶದಲ್ಲಿ ನರಸಿಂಹ ಕಲಾಕುಂಜ ಎಂಬ ನಾಟಕ ತಂಡ ಕಾರವಾರದಲ್ಲಿ ಕನ್ನಡ ನಾಟಕಗಳನ್ನಾಡುತ್ತ ಹೆಸರುವಾಸಿಯಾಯಿತು. ತೀರ ಇತ್ತೀಚಿನವರೆಗೂ ಈ ತಂಡ ಅಪರೂಪಕ್ಕಾದರೂ ನಾಟಕಗಳನ್ನು ಆಡುತ್ತಲೇ ಇದೆ. ಟಿಪ್ಪುಸುಲ್ತಾನ ಅವರ ಪ್ರಸಿದ್ಧ ನಾಟಕ.

### ಅಂಕೋಲಾ

**ಅಂಕೋಲಾ** ಭಾಗದ ರಂಗಚಟುವಟಿಕೆಯಲ್ಲಿ ತುಂಬ ಹೆಸರಾದವರು **ಎಂ.ಎನ್.ಭಟ್.** ಅಂಕೋಲೆಯ ಜೈಹಿಂದ್ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದ ಎಂ.ಎನ್.ಭಟ್ ಹಲವಾರು ನಾಟಕಗಳನ್ನಾಡಿಸಿದ್ದಾರೆ. ಅವರು 1956 ರಲ್ಲಿ ಸಂಗೀತ ನಾಟಕ ಅಕಾಡೆಮಿಯ ಸದಸ್ಯರಾಗಿದ್ದರು. ಉತ್ತಮ ನಟರಾಗಿದ್ದ ಎಮ್.ಎನ್.ಭಟ್ ಟಿಪ್ಪುಸುಲ್ತಾನ, ನಾಜೂಕಯ್ಯ, ಹರಿಶ್ಚಂದ್ರ, ಗುಹಾ, ಅಲ್ಲಾವುದ್ದೀನ, ಷಹಜಹಾನ್, ಮುಟ್ಟಾಪಜೋಶಿ,

ತ್ಯಾಕರೆ ಸಾಹೇಬ, ಕೀಚಕ ಮುಂತಾದ ಪಾತ್ರಗಳ ಮೂಲಕ ಹೆಸರಾಗಿದ್ದರು. ಐತಿಹಾಸಿಕ, ಸಾಮಾಜಿಕ ನಾಟಕಗಳನ್ನಾಡಿಸುತ್ತಾ ವಿದ್ಯಾರ್ಥಿಗಳಲ್ಲಿ ರಂಗಭೂಮಿಯ ಕುರಿತ ಆಸಕ್ತಿಗೆ ಕಾರಣರಾಗಿದ್ದಾರೆ. ಆ ಸಂದರ್ಭದಲ್ಲಿ ಶಾಲಾ ಕಾಲೇಜುಗಳಲ್ಲಿ ಮರಾಠಿ ನಾಟಕಗಳು ನಿರಂತರವಾಗಿ ಪ್ರಯೋಗಿಸಲ್ಪಡುತ್ತಿದ್ದವು. ಅಂತಹ ಪ್ರತಿಕೂಲ ಸನ್ನಿವೇಶದಲ್ಲಿಯೂ ಕನ್ನಡ ನಾಟಕಗಳನ್ನು ಜನಪ್ರಿಯಗೊಳಿಸಿದವರು ಎಂ.ಎನ್.ಭಟ್.

ಅಂಕೋಲಾದ ರಂಗಭೂಮಿಯಲ್ಲಿ ಅಲ್ಲಿಯ ಕರ್ನಾಟಕ ಸಂಘ ತುಂಬಾ ಮುಖ್ಯ ಪಾತ್ರ ವಹಿಸಿದೆ. ಲಲಿತಾಕಲಾ ಮಂಡಳಿ ವತಿಯಿಂದ ಅಂಕೋಲಾ ಸುತ್ತಮುತ್ತ ಹಲವಾರು ನಾಟಕಗಳನ್ನು ಪ್ರಯೋಗಿಸಿದೆ. ಗೋಕರ್ಣದಲ್ಲಿ ಜರುಗುವ ಶಿವರಾತ್ರಿ ಜಾತ್ರಾ ಸಮಯದಲ್ಲಿ ಟೆಂಟು ಹಾಕುತ್ತಿದ್ದ ಅನೇಕ ವೃತ್ತಿ ರಂಗ ಕಂಪನಿಗಳು ಗೋಕರ್ಣಕ್ಕೆ ಹೋಗುವಾಗ ಅಥವಾ ಗೋಕರ್ಣದಿಂದ ವಾಪಾಸ್ಸು ಬರುವಾಗ ಅಂಕೋಲೆಯಲ್ಲಿ ತಮ್ಮ ಪ್ರದರ್ಶನವನ್ನು ನೀಡುತ್ತಿದ್ದವು. ಅಂತಹ ಸಂದರ್ಭದಲ್ಲಿ ಕರ್ನಾಟಕ ಸಂಘ ಏಣಗಿ ಬಾಳಪ್ಪನಂಥ ಪ್ರಸಿದ್ಧ ಕಲಾವಿದರನ್ನು ಸನ್ಮಾನಿಸಿ ಅವರ ಪ್ರಯೋಗಗಳಿಗೆ ಅನುವು ಮಾಡಿಕೊಡುತ್ತಿತ್ತು.

1956–57 ರ ಸುಮಾರಿಗೆ ಶ್ಯಾಮ ಹುದ್ದಾರ, ಎಮ್.ಎನ್.ಭಟ್ಟ ಮುಂತಾದವರು ಕರ್ನಾಟಕ ಸಂಘದಡಿ ಸತ್ತಾಗ, ನಾಳಿನ ಬಾಳು, ಪರಿವರ್ತನಾ, ಗೋಲ್ಡನ್ ಗ್ಯಾಂಗ್, ಆದರ್ಶ ಪ್ರೇಮ, ಗಂಡನ ಮಾನ, ದೇವದಾಸಿ, ಮಾರಿಕೊಂಡವರು ಮುಂತಾದ ಅನೇಕ ನಾಟಕಗಳನ್ನು ಪ್ರದರ್ಶಿಸಿದರು. ಕ್ರಮೇಣ ಪ್ರಯೋಗ ರಂಗದತ್ತ ಹೊರಳಿದ ಈ ಸಂಘದ ಕಲಾವಿದರು ಮೋಹನ ಹಬ್ಬು ನಿರ್ದೇಶನ ಒಂದು ಕತ್ತೆಯ ಕಥೆ, ಬೇಲಿ ಮತ್ತು ಹೊಲ, ಜಯಸಿದ್ಧ ನಾಯಕ ಮುಂತಾದ ನಾಟಕಗಳನ್ನು ಪ್ರದರ್ಶಿಸಿದ್ದಾರೆ.

ಅಂಕೋಲೆಯ ರಂಗಚಟುವಟಿಕೆಗಳಲ್ಲಿ ಬೀದಿ ನಾಟಕಗಳ ಪಾತ್ರ ಹಿರಿದು. ಬಸಂತ (ಬಂಡಾಯ ಸಂಘಟನಾ ತಂಡ) ತಂಡ ವರದಕ್ಷಿಣೆ, ಬೆಲೆಯೇರಿಕೆ, ನಾಯಿಗಳು, ರೇಶನ್ ಕಾರ್ಡ್, ಕತ್ತೆ ಮೋತಿ ಇತ್ಯಾದಿ ನಾಟಕಗನ್ನು ಅನೇಕ ಕಡೆ ಪ್ರದರ್ಶಿಸಿದೆ.

ಚಿಕ್ಕ ವಯಸ್ಸಿನಿಂದಲೇ ನಾಟಕದ ಗೀಳು ಹತ್ತಿಸಿಕೊಂಡ ವಿಷ್ಣು ನಾಯ್ಕ, ನಾಟ್ಯ ಭೂಷಣ ಎಂ.ಎನ್.ಭಟ್‌ರ ಗರಡಿಯಲ್ಲಿ ಪಳಗಿದವರು. ದಾಂಡೇಲಿ, ಧಾರೇಶ್ವರ ಮುಂತಾದ ಕಡೆ ಶಿಕ್ಷಕರಾಗಿದ್ದ ಅವರು ಆ ಭಾಗದಲ್ಲಿ ಅನೇಕ ನಾಟಕಗಳನ್ನು ಆಡಿದ್ದಾರೆ. ಮುಂದೆ ಅಂಕೋಲಾ ಸೇರಿದ ಮೇಲೆ ತಮ್ಮ ಮನೆಯ ಸಮೀಪದ ಅಂಬಾರಕೊಡ್ಲದ ಹಾಲಕ್ಕಿ ಕೇರಿಯಲ್ಲಿ ಸುಮಾರು 20 ವರ್ಷಗಳ ಕಾಲ ವರ್ಷಕ್ಕೊಂದು ನಾಟಕದಂತೆ ಹಲವಾರು ನಾಟಕಗಳನ್ನು ಪ್ರಯೋಗಿಸಿದ್ದಾರೆ. ಸಾಮಾಜಿಕ ಸಮಸ್ಯೆಗಳನ್ನು ಕೇಂದ್ರದಲ್ಲಿರಿಸಿಕೊಂಡು ಕಂಪನಿ ನಾಟಕದ ಶೈಲಿಯಲ್ಲಿ ಪ್ರದರ್ಶಿತವಾಗುತ್ತಿದ್ದ ಇವರ ನಾಟಕಗಳು ಸಾವಿರಾರು ಪ್ರೇಕ್ಷಕರನ್ನು ಆಕರ್ಷಿಸಿವೆ. ಸಾಕ್ಷರತಾ ಅಂದೋಲನದ ಸಂದರ್ಭದಲ್ಲಿ ಹಲವಾರು ಬೀದಿ ನಾಟಕಗಳಿಗೆ ಚಾಲನೆ ಇತ್ತವರು ಇವರು.

ವಿ.ಜೆ .ನಾಯಕ ಯಕ್ಷಗಾನ ಮತ್ತು ಆಧುನಿಕ ನಾಟಕಗಳಲ್ಲಿ ಪರಿಶ್ರಮ ಇರುವವರು, ಶಾಸ್ತ್ರೀಯವಾಗಿ ರಂಗ ತರಬೇತಿಯನ್ನು ಪಡೆದು ಶಿಕ್ಷಣ ಕ್ಷೇತ್ರದಲ್ಲಿ ರಂಗ ಕಲೆಯ

ಕುರಿತು ಅನೇಕ ಲೇಖನಗಳನ್ನು ಬರೆದಿದ್ದಾರೆ. ಪತ್ರಿಕೆಗಳಲ್ಲಿ ಯಕ್ಷಗಾನ ನಾಟಕಗಳ ಕುರಿತ ರಂಗ ವಿಮರ್ಶೆಯನ್ನು ಆರಂಭಿಸಿದವರು ಇವರು. 1985 ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾದ ಸಂದರ್ಭದಲ್ಲಿ 4 ದಿನಗಳ ನಾಟಕೋತ್ಸವವನ್ನು ಸಂಘಟಿಸಿ ಅದನ್ನೊಂದು ಮಹತ್ವದ ಘಟನೆಯನ್ನಾಗಿಸಿದ್ದಾರೆ. ನಾಟಕಗಳ ಜತೆಜತೆಯಲ್ಲಿ ರಂಗ ವಿಮರ್ಶೆ, ನಾಟಕ ಮತ್ತು ಪ್ರೇಕ್ಷಕ, ನೆರಳು, ಬೆಳಕು, ರಂಗವಿನ್ಯಾಸ ಮುಂತಾದ ವಿಚಾರ ಸಂಕಿರಣಗಳನ್ನು ನಡೆಸಿ ತಜ್ಞರನ್ನು ಆಹ್ವಾನಿಸಿ ಪ್ರಾಯೋಗಿಕ ರಂಗಭೂಮಿಗೆ ಉತ್ತಮ ಕೊಡುಗೆ ನೀಡಿದ್ದಾರೆ. ಸಂಗಾತಿರಂಗ ವೇದಿಕೆ ಇತ್ತೀಚೆಗೆ ಕ್ರಿಯಾಶೀಲವಾಗಿರುವ ತಂಡವಾಗಿದೆ.

**ಕುಮಟಾ**

ಕಂಪನಿ ಶೈಲಿಯ ಸಾಮಾಜಿಕ ನಾಟಕಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ **ಕುಮಟಾ** ಭಾಗದಲ್ಲಿ ರಂಗಭೂಮಿಗೆ ಸಂಬಂಧಿಸಿದಂತೆ **ರೋಹಿದಾಸ್ ಮಹಾಲೆ** ತುಂಬ ಪ್ರಸಿದ್ಧಿ ಪಡೆದಿದ್ದಾರೆ. ಕುಮಟಾ ತಾಲೂಕಿನ ಕೂಜಳ್ಳಿ ಇವರ ಊರು. 18 ನೇ ವಯಸ್ಸಿನಲ್ಲಿ ರಂಗಪ್ರವೇಶ ಮಾಡಿದ ಮಹಾಲೆಯವರು 70 ರ ಇಳಿವಯಸ್ಸಿನಲ್ಲೂ ರಂಗಾಸಕ್ತಿ ಉಳಿಸಿಕೊಂಡಿದ್ದಾರೆ. 50 ವರ್ಷಕ್ಕೂ ಹೆಚ್ಚು ಕಾಲದ ರಂಗಸೇವೆ ಇವರದು. ಸಾಮಾಜಿಕ ನಾಟಕಗಳನ್ನು ರಚಿಸಿ ನಿರ್ದೇಶಿಸುವ ಮಹಾತಿ ಗ್ರಾಮೀಣ ಭಾಗದ ಯುವಕ ಸಂಘಗಳಿಗೆ ತುಂಬಾ ಪ್ರಿಯರಾದವರು. 1962 ರಲ್ಲಿ 'ಕೈ ಹಿಡಿದವಳು' ಎಂಬ ಅವರ ಮೊದಲ ಕೃತಿಗೆ ರಾಜ್ಯ ಮಟ್ಟದ ಬಹುಮಾನ ಬಂತು. ಮುಳ್ಳಿನ ಹಾಸಿಗೆ ನಾಟಕಕ್ಕೆ ಉಡುಪಿಯ ರಂಗಭೂಮಿ ಪ್ರಶಸ್ತಿ ನೀಡಿದೆ. ಹಿಂದೂ, ಮುಸ್ಲಿಂ, ಕ್ರೈಸ್ತ ಭಾವೈಕ್ಯ ಸಾರುವ ಧರ್ಮಸಂಗಮ, ವೇಶ್ಯಾ ಸಮಸ್ಯೆಯ ವಸ್ತುವಾಗುಳ್ಳ ನಿಗೂಢ ರಹಸ್ಯ, ಪ್ರೇಮದ ಮಹತ್ವ ಸಾರುವ ವಧು ಪೂರ್ಣಿಮಾ ಅವರ ಮಹತ್ವದ ಕೃತಿಗಳಾಗಿವೆ. ಕುಮಟಾ ತಾಲೂಕಿನ **ಬಗ್ಗೋಣ** ಎಂಬ ಊರಿನ ಯುವಕ ಸಂಘ ಸಿಂಧೂರ ಲಕ್ಷ್ಮಣ ನಾಟಕವನ್ನು ಜಿಲ್ಲೆಯ ಹಲವಡೆ ಪ್ರದರ್ಶಿಸಿದೆ . ಕಳೆದ ಮೂರು ವರ್ಷಗಳಿಂದ **(2003) ಚಿಂತನ ರಂಗ ಅಧ್ಯಯನ** ಕೇಂದ್ರ ಕುಮಟಾದಲ್ಲಿ ಮಕ್ಕಳ ನಾಟಕೋತ್ಸವವನ್ನು, ಬೇಸಿಗೆ ರಂಗ ಶಿಬಿರವನ್ನು ನಡೆಸಿ ಹಲವಾರು ಮಕ್ಕಳ ನಾಟಕಗಳನ್ನು ಪ್ರದರ್ಶಿಸಿದೆ. ಶ್ರೀಕಾಂತ ಕುಮಟ ಅವರ ನೇತೃತ್ವದ 'ವಾರಿಧಿ' ಇತ್ತೀಚೆಗೆ ರಂಗಕಾಯಕ ನಡೆಸುತ್ತಿರುವ ನಡೆಸುತ್ತಿರುವ ತಂಡವಾಗಿದೆ.

**ಹೊನ್ನಾವರ**

ಹೊನ್ನಾವರದಿಂದ 8 ಮೈಲಿ ದೂರದ ಕಲಭಾಗ ಎಂಬ ಗ್ರಾಮದ **ಗೋವಿಂದ ಹೆಗಡೆ,** ಹೊನ್ನಾವರದ ಹಳ್ಳಿಗಳಿಗೆ ಹೊಸ ನಾಟಕಗಳನ್ನು ಪರಿಚಯಿಸಿದವರು 1949–50 ರಲ್ಲಿ ತಮ್ಮ ಗೆಳೆಯರ ಸಹಾಯದಿಂದ **ಪ್ರೇಮಕಲಾ ಸಂಗೀತ ನಾಟಕ ಮಂಡಳಿ ಸಾಲಕೋಡ'** ಎಂಬ ನಾಟಕ ಮಂಡಳಿ ಸ್ಥಾಪಿಸಿ ಸುಮಾರು 15 ವರ್ಷಗಳ ಕಾಲ

ನಿರಂತರವಾಗಿ ನಾಟಕಗಳನ್ನಾಡಿಸಿದ್ದಾರೆ. ಸತ್ಯ ಹರಿಶ್ಚಂದ್ರ , ಚಿತ್ರಾಂಗದೆ, ಭೌಮಾಸುರು, ವೀರ ಅಭಿಮನ್ಯು, ಕುರುಕ್ಷೇತ್ರ, ಪಾಣಿಗ್ರಹಣ , ರಕ್ತರಾತ್ರಿ, ಸ್ತ್ರೀರತ್ನ ಇವು ಪ್ರೇಮಕಲಾ ನಾಟಕ ಮಂಡಳಿಯ ಪ್ರಸಿದ್ಧ ಪ್ರಯೋಗಗಳು ಮಂಡಳಿ ನಿಂತ ಮೇಲೆಯೂ ಸಹ ಅನೇಕ ವರ್ಷ ಬೇರೆ ಬೇರೆ ಊರುಗಳಿಗೆ ಹೋಗಿ ಗೋವಿಂದ ಹೆಗಡೆ ನಾಟಕ ಕಲಿಸುತ್ತಿದ್ದರು.

ಇದೇ ಸಮಯದಲ್ಲಿ ಶೃಂಗಾರ ಮಂಟಪ ತಂಡ ಹೊನ್ನಾವರ, ಗುಣವಂತೆ ಮುಂತಾದ ಕಡೆ ನಾಟಕಗಳನ್ನಾಡುತ್ತಿತ್ತು . ಶೃಂಗಾರ ಮಂಟಪ ತಂಡದ ಮೂಲಕ ಶೃಂಗಾರ ಪತ್ರಿಕೆಯ ಸಂಪಾದಕ ರಾಗಿದ್ದ ಗಂಗಾಧರ ಶಾಸ್ತ್ರಿ ನಾಜಗಾರ್ ತಮ್ಮ ಸಹೋದರರೊಡನೆ ಈ ತಂಡವನ್ನು ಸಂಘಟಿಸಿದ್ದರು. ಅ.ನ.ಕೃ ಅವರ ರಜಪೂತ ಲಕ್ಷ್ಮಿ , ಕಂದಗಲ್‌ರ ರಕ್ತರಾತ್ರಿ ಮುಂತಾದ ನಾಟಕಗಳಲ್ಲದೆ ಗಂಗಾಧರ ಶಾಸ್ತ್ರಿಯವರು ಬರೆದ ಹಲವಾರು ನಾಟಕಗಳ ಪ್ರದರ್ಶನವನ್ನು ತೋರಿದೆ. ಸರಸ ವಿರಸ ಸಮರಸ ಎಂಬ ಮೂರಂಕದ ಶಾಕುಂತಲ ನಾಟಕವನ್ನು , ಯೋಗ್ಯ ಸಂಬಂಧ , ಹೊಸ ಹಾದಿ, ಅದರ್ಶದ ಸುಳಿ ಮುಂತಾದ ಸಾಮಾಜಿಕ ನಾಟಕಗಳನ್ನು ಬರೆದು ನಿರ್ದೇಶಿಸಿದ್ದಾರೆ. ಲಚ್ಚಿ ಎಂಬ ಸಾಮಾಜಿಕ ನಾಟಕವನ್ನು ಉಡುಪಿಯಲ್ಲಿ ಪ್ರದರ್ಶಿಸಿದ ಈ ತಂಡ ನಾಟಕದ ಅಭಿನಯಕ್ಕಾಗಿ ಬಹುಮಾನ ಗಳಿಸಿದೆ. ತಂಡದ ಗೌರೀಶ ಮತ್ತು ಲಕ್ಷ್ಮಿ ಉತ್ತಮ ಹಾಸ್ಯನಟ ಮತ್ತು ಉತ್ತಮ ನಟಿ ಎಂದು ಪ್ರಶಸ್ತಿ ಪಡೆದಿದ್ದಾರೆ. ಏಣಗಿ ಬಾಳಪ್ಪನವರ ಕಂಪನಿಯ ಪ್ರಸಿದ್ಧ ನಾಟಕವಾದ 'ಕುಂಕುಮ' ನಾಟಕವನ್ನು ಇವರು ಪ್ರಯೋಗಿಸಿ ಮೆಚ್ಚುಗೆ ಗಳಿಸಿದ್ದಾರೆ. ನಾಟಕ ಪ್ರದರ್ಶನದಲ್ಲಿ ಆ ಕಾಲದಲ್ಲೇ ಸೆಟ್‌ಗಳನ್ನು ಬಳಸಿದ ಕೀರ್ತಿ ಇವರದ್ದು . 36 ಅಲ್ಲ 63 ನಾಟಕಕ್ಕಾಗಿ ಪರದೆಯ ಬದಲು ಸೆಟ್‌ಗಳನ್ನು ಬಳಸಿದ್ದರು. ರಜಪೂತ ಲಕ್ಷ್ಮಿ ನಾಟಕದಲ್ಲಿ ಬರುವ ಜೈಲಿನ ದೃಶ್ಯಕ್ಕಾಗಿ ಸರಳುಗಳನ್ನು ಉಪಯೋಗಿಸಿ ಜೈಲನ್ನು ಸೃಷ್ಟಿಸಿದ ಈ ತಂಡ 1954 ರ ಹೊತ್ತಿಗೆ ರಂಗಪರಿಕರಗಳನ್ನು ಸಾಂಕೇತಿಕ ದೃಶ್ಯ ವಿನ್ಯಾಸಗಳನ್ನು ಬಳಸಿ ಹೆಸರಾಗಿತ್ತು. ಹೆಸರಾಂತ ಯಕ್ಷಗಾನ ಕಲಾವಿದರಾದ ಮಹಾಬಲಹೆಗಡೆ, ಶಂಭು ಹೆಗಡೆ ಇವರೆಲ್ಲ ಈ ನಾಟಕಗಳಲ್ಲಿ ಪಾತ್ರ ವಹಿಸಿದ್ದರು.

1965 ರ ಸುಮಾರಿಗೆ ಬೆಂಗಳೂರಿನಿಂದ ತರಬೇತಿ ಪಡೆದು ಬಂದ ಮತ್ತು ಬಿ.ವಿ.ಕಾರಂತರಿಂದ ಪ್ರಭಾವಿತರಾದ ಜಿ.ಯು.ಭಟ್ಟ ಇವರು ಜಿ.ಎಸ್.ಅವಧಾನಿ, ಎ.ಕೆ.ಶೇಟ್ ಮುಂತಾದ ಗೆಳೆಯರನ್ನು ಕೂಡಿಸಿಕೊಂಡು ಗೆಳೆಯರ ಕಲಾಕ್ಷೇತ್ರವನ್ನು ಕಟ್ಟಿದ್ದರು. ಜೋಕುಮಾರ ಸ್ವಾಮಿ ಈ ತಂಡದ ಮೊದಲ ನಾಟಕ .ಅಂಕೋಲಾ, ಕಾರವಾರ, ಗೋವಾ, ಮಡಗಾವ್, ಮುಂತಾದ ಕಡೆ ಇದು ಪ್ರದರ್ಶನ ಕಂಡಿತು. ಅಂಧಯುಗ, ಗರ್ಭಗುಡಿ, ನೆರೆಹಾವಳಿ, ಬಕಪಕ್ಷಿ, ದೇವದಾಸಿ ಮುಂತಾದ ನಾಟಕಗಳನ್ನು ಕಟ್ಟಿದ ಜಿ.ಯು.ಭಟ್ಟ ನಾಟಕದ ಸಂಘಟಕರಾಗಿ, ನಟರಾಗಿ, ನಿರ್ದೇಶಕರಾಗಿ ಪಾಲ್ಗೊಳ್ಳುತ್ತಿದ್ದರು. ಸೈಕ್ಲೋರಮಾ, ಸ್ಯಾಟಲೈಟು, ಸೆಟ್‌ಗಳ ಬಳಕೆಯಿಂದ ನಾಟಕ

ಪ್ರಯೋಗಿಸುತ್ತಿದ್ದ ಅವರ ಆಧುನಿಕ ಪ್ರಯೋಗಗಳಿಗೆ ಸಾವಿರಾರು ಪ್ರೇಕ್ಷಕರು ಆಕರ್ಷಿತರಾಗುತ್ತಿದ್ದರು. ಹುಲಿಕೊಪ್ಪ ಬಾಬು ಹಾರ್ಮೋನಿಯ್‌ಂಗೆ , ತಬಲಾ ರಾಮ ತಬಲಾಕ್ಕೆ , ಪೇಂಟರ್ ದತ್ತ ಪರದೆಗಳಿಗೆ ಬಾರಕೂರನ ಬುಡಾನ ಬಾದುಷಾ ನಾಟಕಗಳ ಸೆಟ್‌ಗೆ ನೆರವಾಗುತ್ತಿದ್ದರು.

ಹೊನ್ನಾವರದ **ಕರ್ನಾಟಕ ಸಂಘ**ದಡಿಯಲ್ಲಿ ಇವರು **ಶ್ರೀನಿವಾಸ ಪ್ರಭು, ಮುಖ್ಯಮಂತ್ರಿ ಚಂದ್ರು** ಇವರ ಮೂಲಕ ರಂಗ ತರಬೇತಿ ಶಿಬಿರ ನಡೆಸಿ ಬೇಲಿ ಮತ್ತು ಹೊಲ, ಅಚಲಾಯತನ ನಾಟಕಗಳನ್ನು ಸಿದ್ಧಪಡಿಸಿದರು. ಆ ಸಂದರ್ಭದಲ್ಲಿ ಕರ್ನಾಟಕ ಸಂಘ ಸಂಘಟಿಸಿದ ನಾಟಕೋತ್ಸವ ಜಿಲ್ಲೆಯ ರಂಗಭೂಮಿಯಲ್ಲಿ ಮಹತ್ವದ ಪ್ರಭಾವ ಬೀರಿತು. ಪ್ರಸನ್ನ ರ ಗೆಲಿಲಿಯೋ , ಕುರಿ, ಮಾರೀಚನ ಬಂಧುಗಳು ಮುಂತಾದ ಮಹತ್ವದ ನಾಟಕಗಳನ್ನು ಜಿಲ್ಲೆಯ ಜನ ನೋಡುವಂತಾಯಿತು.

ಹೊನ್ನಾವರದ **ಎಸ್.ಡಿ.ಎಂ.ಕಾಲೇಜು** ರಂಗಭೂಮಿಯ ಬೆಳವಣಿಗೆಯಲ್ಲಿ ತುಂಬ ಮಹತ್ವದ ಪಾತ್ರ ವಹಿಸಿದೆ. ಹೊನ್ನಾವರ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದ ವಿ.ಸೀತಾರಾಮಯ್ಯ ಅಲ್ಲಿಯ ಪ್ರಾಧ್ಯಾಪಕರುಗಳನ್ನು ಸೇರಿಸಿ 1968 ರಲ್ಲಿ ಬಿ.ಎಂ.ಶ್ರೀಯವರ 'ಗದಾಯುದ್ಧ' ನಾಟಕದ ವಾಚನ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ವಾಚಕಾಭಿನಯದ ಮಹತ್ವದ ಆ ಪ್ರಯೋಗದಲ್ಲಿ ಪ್ರೊಫೆಸರ್ ವಿ.ಸೀ. ಯವರು ಗದಾಯುದ್ಧ ನಾಟಕದ ರಸಘಟ್ಟಗಳನ್ನು ಸೂತ್ರದಾರರು , ಭಾಗವತರೂ ಆಗಿ ಹಾಡಿದರೆ, ಪ್ರಾಧ್ಯಾಪಕ ವೃಂದದವರು ಕೃಷ್ಣ , ಭೀಮ , ಅರ್ಜುನ , ಅಶ್ವತ್ಥಾಮ ಮುಂತಾದ ಪಾತ್ರಗಳನ್ನು ವಾಚಿಸಿದ್ದರು . ನಾಟಕವೊಂದರ ವಾಚನ , ವ್ಯಾಖ್ಯಾನಕ್ಕೆ ಇದೊಂದು ಮಾದರಿಯಾಗಿತ್ತು. ಈ ಪರಂಪರೆಯನ್ನು ಮುಂದುವರಿಸಿಕೊಂಡು ಬಂದ ಡಾ.ಎನ್.ಆರ್.ನಾಯಕ ರಂಗಭೂಮಿ ಕಾಳಜಿಯ ಪ್ರೊಫೆಸರ್ ಜಿ.ಎಸ್.ಅವಧಾನಿಯವರ ಜತೆ ಸೇರಿ ಇಕ್ಬಾಲ್ ಅಹಮದ್ , ಸುರೇಶ ಆನಗಳ್ಳಿಯವರಂಥ ನಿರ್ದೇಶಕರನ್ನು ಕರೆಸಿ ಕಾಲೇಜು ವಿದ್ಯಾರ್ಥಿಗಳಿಗೆ ರಂಗ ತರಬೇತಿ ಶಿಬಿರಗಳನು ನಡೆಸಿದರು. ಇಕ್ಬಾಲ ಅಹಮದ್ ಮಿಡ್ ಸಮ್ಮರ್ ನೈಟ್ ಡ್ರೀಮ್ಸ ನಾಟಕವನ್ನು ನಿರ್ದೇಶಿಸಿದರೆ, ಸುರೇಶ ಆನಗಳ್ಳಿ ಸಂಕ್ರಾಂತಿ ನಾಟಕವನ್ನು ನಿರ್ದೇಶಿಸಿದರು. ಈ ನಾಟಕಗಳ ಪ್ರಯೋಗಕ್ಕಾಗಿ ಕಾಲೇಜು ಬಹುದೊಡ್ಡ ಬಯಲು ರಂಗ ಮಂದಿರವನ್ನು ನಿರ್ಮಿಸಿತು. ಇಂತಹ ರಂಗತರಬೇತಿಗಳ ಪ್ರಯೋಜನ ಪಡೆದ ಕಾಲೇಜಿನ ವಿದ್ಯಾರ್ಥಿಗಳು ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ, ರಾಷ್ಟ್ರಮಟ್ಟಕ್ಕೂ ಆಯ್ಕೆಯಾಗಿದ್ದಾರೆ. ಶ್ರೀಪಾದ ಭಟ್ ನಿರ್ದೇಶನದ ಹೆಣದ ಬಟ್ಟೆ, ರಾಷ್ಟ್ರಮಟ್ಟಕ್ಕೂ ಆಯ್ಕೆಯಾಗಿತ್ತು. ಏಕಲವ್ಯ , ನ್ಯಾಯದ ಬಾಗಿಲಲ್ಲಿ , ಮುಖವಿಲ್ಲದವರು , ಕಳ್ಳಿಯಲ್ಲಿ ಕೆಂಪು ಹೂವು, ಯಾನ, ಕತ್ತಲೆ ದಾರಿ ದೂರ ಮುಂತಾದ ನಾಟಕಗಳು ಕಾಲೇಜು ವಿದ್ಯಾರ್ಥಿಗಳಿಂದ ಪ್ರದರ್ಶಿಸಲ್ಪಟ್ಟಿವೆ. ಇಂದಿಗೂ ಕಾಲೇಜಿನಲ್ಲಿ ರಜಾ ಕಾಲದ ರಂಗ ತರಬೇತಿ ಶಿಬಿರಗಳು ಜರುಗುತ್ತಿವೆ.

ನಾಗರಿಕ ಪತ್ರಿಕೆಯ ಸಂಪಾದಕ **ಕೃಷ್ಣಮೂರ್ತಿ ಹೆಬ್ಬಾರ** ಕುರಿ ತೇರು ನಾಟಕ ಪ್ರದರ್ಶನವನ್ನು ಸಂಘಟಿಸಿದ್ದಲ್ಲದೆ, ಕರ್ಕಿಯ ಯುವತಿಯರಿಗಾಗಿ ರಂಗ ತರಬೇತಿ ಶಿಬಿರವನ್ನು ಸಂಘಟಿಸಿದ್ದಾರೆ. ಅವರು ರಚಿಸಿ ನಿರ್ದೇಶಿಸಿದ 'ನೆರೆ ಹಾವಳಿ' ನಾಟಕ ಕೆಲವು ಪ್ರದರ್ಶನಗಳನ್ನು ಕಂಡಿದೆ.

ಹೊನ್ನಾವರದ ಸಮೀಪದ ಒಂದು ಹಳ್ಳಿ ಕೆಕ್ಕಾರು. ಅಲ್ಲಿಯ ರಂಗಾಸಕ್ತ ಯುವಕರು **ಸಿದ್ಧಿವಿನಾಯಕ ಮಿತ್ರ ಮಂಡಳಿ** ಎಂಬ ಹೆಸರಿನಡಿ ಅನೇಕ ರಂಗ ಪ್ರದರ್ಶನಗಳನ್ನು ನೀಡಿದೆ. ಚಿರಂಜೀವಿ ,ಸಾವಾದ ಕೊಲೆ, ಮತಾಂತರ, ಕರ್ನಾಟಕ ರಮಾರಮಣ ಈ ತಂಡದ ಬಹುಮುಖ್ಯ ಪ್ರದರ್ಶನಗಳು. ಕರ್ನಾಟಕ ನಾಟಕ ಅಕಾಡೆಮಿಸಹಯೋಗದಲ್ಲಿ 2002 ರಲ್ಲಿ ಒಂದು ತಿಂಗಳ ಕಾಲ ರಂಗ ತರಬೇತಿ ಶಿಬಿರ ನಡೆಸಿ 'ವೈಶಂಪಾಯನ ತೀರ' ಎಂಬ ನಾಟಕ ಪ್ರದರ್ಶಿಸಿದೆ. ತಂಡದ ಜಿ.ಡಿ.ಭಟ್ ಇವರಿಗೆ ಕಳೆದ ವರ್ಷ ಅಕಾಡೆಮಿ ಪ್ರಶಸ್ತಿ ದೊರಕಿದೆ.

ಹೊನ್ನಾವರ ಭಾಗದ ಇತ್ತೀಚಿನ ರಂಗ ಚಟುವಟಿಕೆಗಳಲ್ಲಿ **ಚಿಂತನ ರಂಗಧ್ಯಯನ ಕೇಂದ್ರ** ಪ್ರಮುಖ ಪಾತ್ರ ವಹಿಸುತ್ತಿದೆ. 1993–94 ರಲ್ಲಿ ಸಾಕ್ಷರತಾ ಆಂದೋಲನದ ಸಮಿತಿ ಹಾಗೂ ವಿಜ್ಞಾನ ಸಂಘಟನೆಗಳ ಜತೆ ಸೇರಿ ಹೊನ್ನಾವರದ ಅನೇಕ ಹಳ್ಳಿಗಳಲ್ಲಿ ಬೀದಿ ನಾಟಕಗಳನ್ನಾಡಿದೆ. 1905 ರಲ್ಲಿ ಎ.ಲೋಕೇಶರ ಅವತಾರ ಎಂಬ ನಾಟಕವನ್ನಾಡಿದೆ. ಹೊನ್ನಾವರದ ಕಾಲೇಜು ರಂಗಭೂಮಿಯ ಬೆಳವಣಿಗೆಯಲ್ಲಿ ಸಾಕಷ್ಟು ಪಾತ್ರ ವಹಿಸಿದೆ. ರಜಾ ಕಾಲದ ರಂಗ ತರಬೇತಿ ಶಿಬಿರವನ್ನು ನಡೆಸಿದೆ. ನಾಟಕ ಅಕಾಡೆಮಿಯ ಸಹಯೋಗದಿಂದ ಎರಡು ರಾಜ್ಯ ಮಟ್ಟದ ನಾಟಕೋತ್ಸವವನ್ನು ಸಂಘಟಿಸಿದೆ. ಜಿಲ್ಲೆಯಲ್ಲಿ ಮೊಟ್ಟ ಮೊದಲ ಮಕ್ಕಳ ರಂಗಭೂಮಿಯ ರೆಪರ್ಟರಿಯನ್ನು ಹೊಂದಿದೆ. 2003–2004 ರಲ್ಲಿ ಪ್ರಾಥಮಿಕ ಶಾಲೆಯ 4 ಪಠ್ಯವನ್ನು ಆಧರಿಸಿದ 4 ಪಾಠ ನಾಟಕಗಳನ್ನು ಉತ್ತರ ಕನ್ನಡ ಮತ್ತು ಹಾವೇರಿ ಜಿಲ್ಲೆಯಲ್ಲಿ ಒಟ್ಟು 100 ಪ್ರದರ್ಶನಗಳನ್ನು ನೀಡಿದೆ. 2004– 05 ರಲ್ಲಿ ರಂಗಾಯಣದ ಸ್ವೀಡಿಷ್ ಮಕ್ಕಳ ನಾಟಕ ಯೋಜನೆಯ ಅಡಿ 'ತುಟಿಯುಬ್ಬಿಸಿ ಸಿಳ್ಳೆ ಹಾಕು' ಎಂಬ ನಾಟಕವನ್ನು ಸಿದ್ಧಪಡಿಸಿಕೊಂಡು 15 ಪ್ರದರ್ಶನಗಳನ್ನು ನೀಡಿದೆ. 2004 ವೈಜ್ಞಾನಿಕ ವರ್ಷಾಚರಣೆಯ ಅಂಗವಾಗಿ ಉತ್ತರ ಕನ್ನಡ ಜಿಲ್ಲೆಯಾದ್ಯಂತ 10 ದಿನಗಳ ಕಾಲ ಬೀದಿ ನಾಟಕಗಳನ್ನು ಈ ತಂಡ ಪ್ರದರ್ಶಿಸಿದೆ. ಜೋಯ್ಡಾದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಂಗವಾಗಿ ಜಿಲ್ಲೆಯಾದ್ಯಂತ ಬೀದಿ ನಾಟಕ ಪ್ರದರ್ಶಿಸಿ ಜನರನ್ನು ಆಕರ್ಷಿಸಿದೆ.

ಹೊನ್ನಾವರದ **ಸ್ಫೂರ್ತಿ ರಂಗ ವೇದಿಕೆ** 1989 ರಲ್ಲಿ ಜಿಲ್ಲಾ ನಾಟಕೋತ್ಸವವನ್ನು ನಡೆಸಿದೆ. ಕಲಾಶ್ರೈಲಾ ಕವಲಕ್ಕಿ ತಂಡ ಹೊನ್ನಾವರ ಸಮೀಪದ ಕವಲಕ್ಕಿ ಊರಿನಲ್ಲಿ ಹುಟ್ಟಿಕೊಂಡಿದ್ದು 'ಸಾವಿರದ ಎಂಬತ್ನಾಲ್ಕು ತಾಯಿ', 'ಶಾಕುಂತಲಾ', ಸುಜಾತ ಮತ್ತು ಕಾಡಾನೆ ನಾಟಕಗಳನ್ನು ಪ್ರದರ್ಶಿಸಿದೆ.

## ಉತ್ತರ ಕನ್ನಡದ ಮಕ್ಕಳ ರಂಗಭೂಮಿ

'ಮಕ್ಕಳ ರಂಗಭೂಮಿ' ಎಂದು ನಾವು ಏನನ್ನು ವ್ಯಾಖ್ಯಾನಿಸುತ್ತೇವೆಯೋ ಆ ಪರಿಕಲ್ಪನೆಯಡಿ ಇಲ್ಲಿ ಕೆಲಸ ಆರಂಭವಾದದ್ದು 80 ರ ದಶಕದಲ್ಲಿ . ಅದಕ್ಕೂ ಮೊದಲು ಮಕ್ಕಳಿಗೂ ನಾಟಕಕ್ಕೂ ಸಂಬಂಧ ಇರಲಿಲ್ಲವೆಂದಲ್ಲ . ಆದರೆ ಆ ಸಂಬಂಧವನ್ನು ನಾವು 'ಮಕ್ಕಳ ರಂಗಭೂಮಿ' ಎಂದು ಮುದ್ರೆ ಹಾಕಿ 'ಅಧಿಕೃತ' ಗೊಳಿಸುವಂತಿಲ್ಲ.

ಹೊಸ ಶಿಕ್ಷಣದ ಆರಂಭದೊಡನೆ ಮಕ್ಕಳಿಗಾಗಿ ನಾಟಕ ಆರಂಭವಾಗಿದೆ. ಈ ಹಿಂದೆ ಮಕ್ಕಳ ನಾಟಕವೆಂದರೆ , ಶಾಲಾ ವಾರ್ಷಿಕ ಯೋಜನೆಯ ಅಡಿಯಲ್ಲಿ , ವರ್ಷದ ಕೊನೆಯಲ್ಲಿ ನಡೆಯುವ 'ಕರ್ಮ' ವಾಗಿತ್ತು . ಮಕ್ಕಳ ಪ್ರತಿಭೆಯನ್ನು ಪಾಲಕರಿಗೆಲ್ಲ ತೋರಿಸುವ , ಶಾಲಾ ಕೆಲಸಗಳ ಬಗ್ಗೆ ಸಮುದಾಯದ ಪ್ರಶಂಸೆ ಬಯಸಲು ಮಾಡುವ 'ಗ್ಯಾದರಿಂಗ್' ಗಳಿಗೇ ಅದು ಸೀಮಿತವಾಗಿತ್ತು. ಪ್ರತಿಭಾವಂತ ಶಿಕ್ಷಕರು ಎಲ್ಲಿರುತ್ತಾರೋ ಅಲ್ಲೆಲ್ಲ ಇಂಥ ಚಟುವಟಿಕೆಗಳು ಜರುಗುತ್ತಿದ್ದವು. ಗೌರೀಶ ಕಾಯ್ಕಿಣಿಯಂತಹ ಹಿರಿಯ ಸಾಹಿತಿಗಳೂ , ಅವರು ಶಿಕ್ಷಕರಿದ್ದಾಗ ಮಾಡಿದ ಮಕ್ಕಳ ನಾಟಕಗಳ ಬಗ್ಗೆ ಉಲ್ಲೇಖಿಸಿದ್ದಾರೆ.

ಗೋಪಾಲ ಕೃಷ್ಣ ನಾಯಕರು ಕುವೆಂಪು ಅವರ ನನ್ನಗೋಪಾಲ ನಾಟಕವನ್ನು ರಂಗಕ್ಕೆ ತಂದಿದ್ದರು. ಬಹಳ ಮುಖ್ಯ ಕೆಲಸ ಆರಂಭಿಸಿದ್ದು ಆರ್.ವಿ.ಭಂಡಾರಿ. ಜಿಲ್ಲೆಯ ಹಿರಿಯ ಸಾಹಿತಿ ಡಾ. ಆರ್.ವಿ. ಭಂಡಾರಿ ಮಕ್ಕಳ ಲೋಕವನ್ನು ಸಹಜವಾಗಿ ಪ್ರವೇಶಿಸಬಲ್ಲ ಸೂಕ್ಷ್ಮ ಸಂವೇದಿಗಳು. ಅವರು ತಾವು ಕೆಲಸ ನಿರ್ವಹಿಸುತ್ತಿದ್ದ ಶಾಲೆಗಳಲ್ಲಿ ಮಕ್ಕಳಿಗಾಗಿ ನಾಟಕ ಬರೆದು ಆಡಿಸುತ್ತಿದ್ದರು . 1984 ರಲ್ಲಿ ಆರ್.ವಿ ಯವರ ಮಕ್ಕಳ ನಾಟಕಗಳ ಸಂಕಲನ 'ಅಪ್ಪಿಕೋ ಮತ್ತು ಇತರ ನಾಟಕಗಳು' ಪ್ರಕಟವಾಯಿತು. ಇಲ್ಲಿಂದಲೇ ಮಕ್ಕಳ ನಾಟಕಗಳ ಪ್ರಯೋಗವನ್ನು 'ಆರಂಭ 'ಎನ್ನಬಹುದಾದರೂ 'ಅಧಿಕೃತವಾಗಿ' ಮಕ್ಕಳ ರಂಗಭೂಮಿ ಉದ್ಘಾಟನೆಗೊಂಡಿದ್ದು 1981 ರಲ್ಲಿ . ಮಹತ್ವದ ಎರಡು ಪ್ರಯತ್ನಗಳು ಜಿಲ್ಲೆಯ ಎರಡು ರಂಗ ತಂಡಗಳಿಂದ ಪ್ರಯೋಗಗೊಂಡಿತು. ಮಂಚಿಕೇರಿಯ ರಾಜರಾಜೇಶ್ವರಿ ತಂಡ ಶಿವರಾಮಕಾರಂತರ 'ಸಿಹಿಮೂಲಂಗಿ' ಎಂಬ ನಾಟಕವನ್ನು ಪ್ರದರ್ಶಿಸಿದರೆ ಶಿರಸಿಯ ರಂಗಸಂಗ ಆರ್.ವಿ.ಭಂಡಾರಿಯವರ ಮಕ್ಕಳ ನಾಟಕಗಳನ್ನು ರಂಗತರಬೇತಿ ಶಿಬಿರ ನಡೆಸಿ ಪ್ರಯೋಗಿಸಲು ಆರಂಭಿಸಿತು. ಇಲ್ಲಿಂದ

ಉತ್ತರಕನ್ನಡದಲ್ಲಿ ಅವ್ಯಾಹತವಾಗಿ ಮಕ್ಕಳ ನಾಟಕಗಳು ಪ್ರಯೋಗಿಸಲ್ಪಟ್ಟಿವೆ. ಈ ಜಿಲ್ಲೆಯ ಕೆಲವೇ ರಂಗಾಸಕ್ತರು ಯಾವ ಪ್ರಾಯೋಜಕತ್ವವೂ ಇಲ್ಲದೇ ಸುಮಾರು 150ಕ್ಕೂ ಹೆಚ್ಚುನಾಟಕಗಳನ್ನು ಶಿರಸಿ, ಹೊನ್ನಾವರ, ಮಂಚಿಕೇರಿ, ಅಂಬಿಕಾನಗರದ ಸುತ್ತ ಮುತ್ತ ಪ್ರಯೋಗಿಸಿದ್ದಾರೆ.

ಜಿಲ್ಲೆಯ ರಂಗಭೂಮಿಯಲ್ಲಿ ಹೊಸಪ್ರಯೋಗಗಳಿಂದ ಗಮನ ಸೆಳೆದ ಕಿರಣ ಭಟ್ ರ ಕರ್ಣಧಾರತ್ವದಲ್ಲಿ ಸಂಘಟಿತವಾದ ರಂಗಸಂಗ ಮಕ್ಕಳ ರಂಗಭೂಮಿಯನ್ನು ತನ್ನ 'ಬದ್ಧತೆ'ಯನ್ನಾಗಿ ಸ್ವೀಕರಿಸಿ ಮಕ್ಕಳ ರಂಗಭೂಮಿಯಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿದೆ. ಪಾಠನಾಟಕದ ಯೋಜನೆಯಡಿ ಶಾಲೆಗಳಲ್ಲಿ ಪಾಠಗಳನ್ನು ನಾಟಕವಾಗಿ ಪ್ರಯೋಗಿಸಿದೆ. ರಂಗವಿಕಾಸ ಯೋಜನೆಯಡಿ ಶಾಲೆಗಳಲ್ಲಿ ರಂಗತರಬೇತಿ ನಡೆಸಿ ನಾಟಕಗಳನ್ನಾಗಿಸಿದೆ. ನಾಲ್ಕು ಮಹತ್ವದ ಮಕ್ಕಳ ನಾಟಕೋತ್ಸವವನ್ನು ನಡೆಸಿದೆ.

ಜಿಲ್ಲೆಯ ಇನ್ನೊಂದು ಮಹತ್ವದ ರಂಗತಂಡವಾದ ಮಂಚಿಕೇರಿ ತಂಡ, ಕಾಡಿನರಾಣಿ ಪರಿಸರಪ್ರೇಮಿ, ಪುಷ್ಪರಾಣಿ, ಕೋಟುಗುಮ್ಮ, ಝುಂ ಝುಂ ಆನೆ ನಾಟಕಗಳನ್ನು ಪ್ರಯೋಗಿಸಿದೆ.

ಭಾರತ ಜ್ಞಾನವಿಜ್ಞಾನ ಸಮಿತಿ ಚಿಣ್ಣರ ಮೇಳದ ಸಂದರ್ಭದಲ್ಲಿ ಶ್ರೀಪಾದ ಭಟ್ ಅವರ ನೇತೃತ್ವದಲ್ಲಿ ಪಾಠನಾಟಕದ ತರಬೇತಿಯನ್ನು ನೂರಕ್ಕೂ ಹೆಚ್ಚು ಶಾಲೆಗಳಲ್ಲಿ ಸಂಘಟಿಸಿತು. ಚಿಂತನ ರಂಗ ಅಧ್ಯಯನ ಕೇಂದ್ರವು ಕಿರಣ ಭಟ್ ಮತ್ತು ಶ್ರೀಪಾದಭಟ್ ನಿರ್ದೇಶನದಲ್ಲಿ ಮಕ್ಕಳ ನಾಟಕ ರೆಪರ್ಟರಿಯನ್ನು ಆರಂಭಿಸಿದೆ. ಈ ರೆಪರ್ಟರಿ 2004ರಲ್ಲಿ ಉತ್ತರಕನ್ನಡ ಮಾತ್ರವಲ್ಲದೇ ಹಾವೇರಿ, ಶಿವಮೊಗ್ಗ ಮುಂತಾದಕಡೆ ನೂರಕ್ಕೂ ಹೆಚ್ಚು ಮಕ್ಕಳ ನಾಟಕಗಳನ್ನು ಪ್ರಯೋಗಿಸಿದೆ. ರಂಗಾಯಣ ಮತ್ತು ಸ್ವಿಡಿಷ್ ಯೋಜನೆಯಡಿ ಮಕ್ಕಳ ನಾಟಕಗಳನ್ನು ಜಿಲ್ಲೆಯಾದ್ಯಂತ ಪ್ರದರ್ಶಿಸುತ್ತಿದೆ.2010ರಲ್ಲಿ ರಾಷ್ಟ್ರೀಯ ನಾಟಕಶಾಲೆ ದೆಹಲಿಯಲ್ಲಿ 'ಮಕ್ಕಳ ಟ್ಯಾಗೋರ್' ಪ್ರದರ್ಶನ ನೀಡಿದೆ. ಹಿರಿಯ ರಂಗಕರ್ಮಿಗಳಾದ ಶ್ರೀ ಜಿ.ಯು.ಭಟ್, ನಾ.ಸು.ಭರತನಹಳ್ಳಿ, ಮುಂತಾದವರು ಅಪರೂಪಕ್ಕಾದರೂ ಗಂಭೀರವಾಗಿ ಮಕ್ಕಳ ನಾಟಕವನ್ನು ಪ್ರದರ್ಶಿಸಿದ್ದಿದೆ. ಕೆ.ಆರ್.ಪ್ರಕಾಶ ಅನೇಕ ಹಳ್ಳಿಗಳಲ್ಲಿ ಮಕ್ಕಳ ನಾಟಕ ಪ್ರಯೋಗಿಸಿದ್ದಾರೆ. ರಮಾನಂದ ಐನಕೈ ಅಲಿಬಾಬಾ ಮುಂತಾದ ನಾಟಕಗಳನ್ನು ಪ್ರಯೋಗಿಸಿದರೆ, ಮಗೆಗಾರಿನ ತಂಡ, ಸಿದ್ದಾಪುರದ ಗಣಪತಿ ಹುಲಿಮನೆ, ಗಣಪತಿ ಹಿತ್ಲಕೈ ಪ್ರತಿವರ್ಷ ಮಕ್ಕಳ ರಂಗಶಿಬಿರ ಆಯೋಜಿಸಿ ನಾಟಕವಾಡುತ್ತಿದ್ದಾರೆ. ಅಂಕೋಲಾದ ನಾಗಪತಿ ಹೆಗಡೆ, ಕಾನಗೋಡಿನ ಶ್ರೀಪಾದ ಹೆಗಡೆ, ಮೂರೂರಿನ ವಿನಾಯಕ ಭಟ್, ಕಡತೋಕಾದಲ್ಲಿ ಶ್ರೀನಿವಾಸ ನಾಯ್ಕ, ಮಕ್ಕಳ ರಂಗತರಬೇತಿ ನಡೆಸುತ್ತಲೇ ಬಂದಿದ್ದಾರೆ. ಮಾರಿಕಾಂಬಾ ಪ್ರೌಢಶಾಲೆ ಕಳೆದ ಎರಡು ವರ್ಷಗಳಿಂದ ವಿಜ್ಞಾನ ನಾಟಕಗಳಲ್ಲಿ ರಾಜ್ಯ,ರಾಷ್ಟ್ರಪ್ರಶಸ್ತಿಗಳಿಸುತ್ತಿದೆ.

ಹೀಗೆ ರಂಗಸಂಗದ ಪಾಠನಾಟಕಗಳು, ಬಿ.ಜಿ.ವಿ.ಎಸ್.ನ ಚಿಣ್ಣರಮೇಳಗಳು,

ಚಿಂತನ ರಂಗ ಅಧ್ಯಯನ ಕೇಂದ್ರದ ಪ್ರಯೋಗಗಳು ಈ ಜಿಲ್ಲೆಯಲ್ಲಿ ಶಿಕ್ಷಣವನ್ನೂ ರಂಗಭೂಮಿಯನ್ನೂ ಒಟ್ಟಾಗಿ ಬೆಸೆಯಲು ಪ್ರಯತ್ನಿಸಿದೆ. ಮಕ್ಕಳ ರಂಗಭೂಮಿ ಉತ್ತರಕನ್ನಡದ ರಂಗಭೂಮಿಯ ಮುಖ್ಯವಾಹಿನಿಯಲ್ಲಿದೆ.

## ಗ್ರಾಮೀಣ ನಾಟಕಗಳು

ಪ್ರತಿಯೊಂದು ತಾಲೂಕಾ ಕೇಂದ್ರ ಚಟುವಟಿಕೆಗಳನ್ನು ನೋಡಿದಾಗಲೂ 70 ರ ದಶಕದಿಂದ 80 ರ ದಶಕದ ನಡುವೆ ರಂಗಚಟುವಟಿಕೆಗಳ ಶೂನ್ಯವಿದೆ ಎಂಬ ಭ್ರಮೆ ಉಂಟಾಗುತ್ತದೆ , ಆದರೆ ಪರಿಸ್ಥಿತಿ ಹಾಗಿಲ್ಲ. ಈ ನಡುವೆ ಹಳ್ಳಿ ಹಳ್ಳಿಗಳಲ್ಲಿ ಯುವಕ ಸಂಘಗಳು ಕಂಪನಿ ಮಾದರಿಯ ಸಾಮಾಜಿಕ ನಾಟಕ ಕ್ವಚಿತ್ತಾಗಿ ಪೌರಾಣಿಕ ನಾಟಕಗಳನ್ನು ನಿರಂತರವಾಗಿ ಪ್ರದರ್ಶಿಸುತ್ತಲೇ ಬಂದಿದ್ದಾವೆ. ಉದಾಹರಣೆಗೆ ಭಟ್ಕಳದ ಸೋನಾರ ಕೇರಿಯಲ್ಲಿ 1956ರಲ್ಲಿ ಪಂಡು ಮಹಾಲೆ ಮುಂತಾದವರು ಆರಂಭಿಸಿದ **'ವಿರೂಪಾಕ್ಷ ಕಲಾಮಿತ್ರ ಮಂಡಳಿ'**ಇಂದಿಗೂ ನಾಟಕಗಳನ್ನು ಪ್ರಯೋಗಿಸುತ್ತಿದೆ. **ಶಿರಸಿ ಮಾರಿಕಾಂಬ ಗೆಳೆಯರ ಬಳಗ** ನವರಾತ್ರಿ ಸಮಯದಲ್ಲಿ ಪ್ರತಿ ವರ್ಷ ಒಂದೊಂದು ಸಾಮಾಜಿಕ ನಾಟಕಗಳನ್ನು ಕಳೆದ 20 ವರ್ಷಗಳಿಂದ ಆಡುತ್ತಲೇ ಬಂದಿದೆ. ಅಲ್ಲಿಯ ನಟ ಶಾಂತರಾಮ ನಾಯಕ 'ನವರಸ ನಾಯಕ' ಎಂದು ಪ್ರೇಕ್ಷಕರಿಂದ ಬಿರುದು ಗಳಿಸಿಕೊಂಡಿದ್ದಾನೆರೆ. ಸಾವಿರದ ಸಂಖ್ಯೆಯ ಪ್ರೇಕ್ಷಕರು ಪ್ರತಿವರ್ಷ ಅಲ್ಲಾಗುವ ನಾಟಕಗಳಿಗೆ ಈಗಲೂ ಕಾಯುತ್ತಾರೆ. ಈ ಪರಿಸ್ಥಿತಿ ಜಿಲ್ಲೆಯ ನಾಕಾರು ಹಳ್ಳಿಗಳಲ್ಲಿ ಈಗಲೂ ಇದೆ. ಸುಮಾರಾಗಿ 1962 ರ ಹೊತ್ತಿಗೆ ಪ್ರಚಾರಕ್ಕೆ ಬಂದ 'ಯುವಕ ಸಂಘ' ಎಂಬ ಸಂಸ್ಥೆ ಯುವಜನ ಮೇಳಗಳಿಗಾಗಿ ನಾಟಕಗಳನ್ನು ಆಡುತ್ತಲೇ, ಹಳ್ಳಿಗಳಲ್ಲಿಯ ಸಾಂಸ್ಕೃತಿಕ ಉತ್ಸವಗಳಿಗೆ ನೇತೃತ್ವ ವಹಿಸುತ್ತಿದೆ. ಪ್ರತಿವರ್ಷ ಊರಿನಲ್ಲಿ / ಶಾಲಾ ವಾರ್ಷಿಕೋತ್ಸವಗಳಲ್ಲಿ ಇವರಾಡುವ ಸಾಮಾಜಿಕ ನಾಟಕ, ನಾಟಕಗಳ ಸಂಖ್ಯೆ ಇದುವರೆಗಿನ ಪ್ರಸಿದ್ಧಿ ಪಡೆದ ರಂಗ ತಂಡಗಳ ಪ್ರದರ್ಶನ ಸಂಖ್ಯೆಗಿಂತ ಹೆಚ್ಚಿದೆ. ಗ್ರಾಮೀಣ ಭಾಗದಲ್ಲಿ ರಂಗಚಟುವಟಿಕೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವವರು ಇವರೇ ಆಗಿದ್ದಾರೆ. ಕರಾವಳಿಯಲ್ಲಿ ಕಾರವಾರದಿಂದ ಭಟ್ಕಳ ತನಕ, ಜನವರಿಯಿಂದ ಏಪ್ರಿಲ್ ವರೆಗೆ ಸುಮಾರು 100 ನಾಟಕಗಳಾದರೂ ಪ್ರದರ್ಶನಗೊಳ್ಳುತ್ತವೆ.

ಮಾರುತಿ ನಾಟ್ಯಸಂಘ ಶಿರಸಿ, ಗುಂಜಾವರ ಕಲಾಬಳಗ ಯಲವಳ್ಳಿ, ನರಸಿಂಹ ನಾಟಕ ಮಂಡಳಿ ಕನಸೆಗದ್ದೆ ಅಂಕೋಲಾ, ಜಟಗೇಶ್ವರ ನಾಟಕ ಮಂಡಳಿ ಮಂಜಗುಣಿ, ಚೌಡೇಶ್ವರಿ ನಾಟಕ ಮಂಡಳಿ ಹನುಮಟ್ಟಾ, ಹುಲಿದೇವ ಬೆಳಂಬಾರ, ಕಲಾದೇವಿ ನಾಟ್ಯ ಸಂಘ ಹಳಿಯಾಳ ಹೀಗೆ ಇವುಗಳ ಪಟ್ಟಿ ಬಹುದೊಡ್ಡದು. ಕಡತೋಕಾ ಸುರೇಶ ಭಟ್, ನವಿಲುಗೋಣ ವಿ.ಎಸ್.ಭಟ್, ಗೋಡೇಮಕ್ಕಿ ವಿಶ್ವನಾಥ, ಉದಯಭಂಡಾರಿ ಹಳದಿಪುರ, ಗುಂಡಿಬೈಲ್ ಸತ್ಯನರಾಯಣ ಇವರೆಲ್ಲ ನಾಟಕಗಳ ಸಂಗೀತಗಾರರಾಗಿ ತುಂಬ ಪ್ರಸಿದ್ಧಿಪಡೆದವರು.

# ವರ್ತಮಾನದಲ್ಲಿ ರಂಗ ಪ್ರಯೋಗದಲ್ಲಿ ತೊಡಗಿರುವ ತಂಡಗಳ ಮಾಹಿತಿ

## ಆಧುನಿಕ/ಹವ್ಯಾಸಿ/ರೆಪರ್ಟರಿ ಇತ್ಯಾದಿ

### 1. ಕರ್ನಾಟಕ ಸಂಘ, ಸಿದ್ದಾಪುರ

ನಾಡು ನುಡಿಯ ಅಭಿಮಾನದಿಂದ ಕನ್ನಡದ ನೆಲ ರಕ್ಷಣೆಗಾಗಿ 1947 ರಲ್ಲಿ ಹುಟ್ಟಿಕೊಂಡ ಸಂಘಟನೆ ಇದು. ನಾಟಕ, ಯಕ್ಷಗಾನ, ನೃತ್ಯ, ಸಾಹಿತ್ಯ, ಚಿಂತನೆ, ನಾಡಹಬ್ಬದ ಆಚರಣೆ- ಹೀಗೆ ವಿವಿಧ ಬಗೆಯಲ್ಲಿ ನುಡಿಹಬ್ಬವನ್ನು ಆಚರಿಸುತ್ತ ಬಂದಿದೆ. 1997 ರಲ್ಲಿ ಸಂಘ ಸುವರ್ಣ ಮಹೋತ್ಸವವನ್ನು ಆಚರಿಸಿದೆ. ಸ್ಮರಣ ಸಂಚಿಕೆ ಪ್ರಕಟಿಸಿದೆ. ದಿ.ಗೋವಿಂದ ಶಾನಭಾಗ, ರೂಪಸಿಂಗ ಗೌಡ, ಕೆ.ಸದಾಶಿವಪ್ಪ ಮುಂತಾದವರಲ್ಲದೇ ಮಾಜಿ ಮುಖ್ಯಮಂತ್ರಿ ದ.ರಾಮಕೃಷ್ಣ ಹೆಗಡೆಯಂತವರೂ ಈ ಸಂಘದ ಪದಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ.

ಪ್ರತಿ ವರ್ಷ ನಾಡಹಬ್ಬದಲ್ಲಿ ನಾಟಕ ಪ್ರದರ್ಶನ ಮಾಡುತ್ತಿದ್ದ ತಂಡ ನಾ. ಕಸ್ತೂರಿ, ದ.ರಾ. ಬೇಂದ್ರೆ, ಕುವೆಂಪು, ಅ.ನ.ಕೃ., ತ.ರಾ.ಸು., ಕಾರಂತ, ಶ್ರೀರಂಗ, ಲಂಕೇಶ ಕಂದಗಲ್, ಪರ್ವತವಾಣಿಯಂತಹ ಹಿರಿಯ ಸಾಹಿತಿಗಳ ಅಲ್ಲಸೇ ಶಾ.ಮಂ. ಕೃಷ್ಣರಾಯರು, ದಿವಸ್ಪತಿ ಹೆಗಡೆ, ಆರ್.ಕೆ. ಹೊನ್ನೆಗುಂಡಿ ಮುಂತಾದ ಜಿಲ್ಲೆಯ ಪ್ರಮುಖ ಸಾಹಿತಗಳ ನಾಟಕಗಳೆಲ್ಲ ಇಲ್ಲಿ ಪ್ರಯೋಗಕ್ಕೆ ಒಳಗಾಗಿದೆ.

## ಪ್ರದರ್ಶಿಸಿದ ಕೆಲವು ಪ್ರಸಿದ್ಧ ನಾಟಕಗಳು

ಪ್ರಪಂಚ ಪಾಣಿಪತ್, ದುರ್ಗದ ದುರಂತ, ಕಣ್ಣೀರ ಕಾಣಿಕೆ, ಮಿಥ್ಯಮೇವ ಜಯತೆ, ನಾಟಕದಲ್ಲಿ ನಾಟಕ, ಬಹದ್ದೂರ ಗಂಡ, ಸೇಡಿನ ಕಿಡಿ, ನೆಂಟರೋ ಗಂಟುಕಳ್ಳರೋ, ಋಣಾನುಬಂಧ, ಬಂಡಲ್ ಬಹಾದ್ದೂರ, ಯಾರು ಹಿತವರು ನಿನಗೆ, ಗಗ್ಗಯ್ಯನ ಗಡಿಬಿಡಿ, ದೇವರ ಕಣ್ಣು, ಮಾತೃ ದೇವೋಭವ, ಅಣ್ಣ ತಮ್ಮ, ಎಚ್ಚಮ ನಾಯಕ, ಅಂಗುಲಿ ಮಾಲ, ಕಾಬೂಲಿವಾಲಾ, ಸೈರಂಧ್ರಿ, ನೃಪತುಂಗ, ಮಾತೃವಾತ್ಸಲ್ಯ, ಹೃದಯ ದೇಗುಲ, ಕನಕನ ಕಿಂಡಿ, ದುರಂತ, ಮೃತ್ಯು ಸಿಂಹಾಸನ, ಜ್ವಾಲಾ, ಸಂಸಾರ ನೌಕೆ, ವಾತ್ಸಲ್ಯ, ಯಾರ ಹೆಂಡ್ತಿ, ಮಾಮೂಲು, ಕಣ್ಣೀರು, ಮದುವೆಯ ಮನೆಹಾಳೋ, ಮಲ್ಲಿಗೆ ಅರಳೆ, ಕಲೆಯ ಕೊಲೆ, ಶುದ್ಧ ಶುಂಟಿ, ಪರಿವರ್ತನೆ, ರೇಣುಕಾ ಮಹಾತ್ಮೆ,

ಸಾಮ್ರಾಟ್ ಅಶೋಕ, ಸಾಹೇಬರು ಬರುತ್ತಾರೆ. ಬುದ್ಧಂ ಶರಣಂ ಗಚ್ಛಾಮಿ.

## ನೃತ್ಯ ನಾಟಕಗಳು

### 1. ಮೋಹಿಸಿ ಬಸ್ಮಾಸುರ, ದಕ್ಷಯಜ್ಞ, ಕುಮಾರ ಸಂಭವ.

ಸಂಘದ ಈ ಪ್ರದರ್ಶನಗಳು ಜಿಲ್ಲೆಯಲ್ಲಿ ಮಾತ್ರವಲ್ಲದೇ ಧಾರವಾಡ, ಶಿವಮೊಗ್ಗ ಮುಂತಾದ ಕಡೆ ಯಶಸ್ವಿ ಪ್ರದರ್ಶನ ಕಂಡಿವೆ.

ನಾಡಿನ ಬೇರೆ ಬೇರೆ ಕಲಾ ತಂಡಗಳನ್ನು ಕರೆಸಿ ಪ್ರದರ್ಶನ ಏರ್ಪಡಿಸುತ್ತಿದ್ದ ಈ ಸಂಘ ಮಾಸ್ಟರ್ ಹಿರಣ್ಣಯ್ಯ ಮಿತ್ರಮಂಡಳಿ, ನೀನಾಸಂ, ಮುಂಬಯಿ ಆರ್.ಡಿ. ಕಾಮತರ ಹವ್ಯಾಸಿ ಕಲಾಬಳಗ, ಧಾರವಾಡದ ಅಂತರಂಗ ಕೂಟ, ಹುಬ್ಬಳ್ಳಿಯ ಆರ್ಟ್ಸ್ ಸರ್ಕಲ್, ಶಿರಸಿ ಕಲಾ ತಂಡಗಳನ್ನು ಸಿದ್ದಾಪುರಕ್ಕೆ ಆಹ್ವಾನಿಸಿ ಜನತೆಗೆ ನಾಟಕ ತೋರಿಸಿದೆ.

ಸಂಘದ ನಾಡಹಬ್ಬ ಹಾಗೂ ಇನ್ನಿತರ ಸಂದರ್ಭಗಳಲ್ಲಿ ನಾಡಿನ ನಾಮಾಂಕಿತರು ಇಲ್ಲಿಗೆ ಆಗಮಿಸಿದ್ದರು. ಕುವೆಂಪು, ಪು.ತಿ. ನರಸಿಂಹಾಚಾರ್, ಪ್ರಭು ಶಂಕರ, ಶ್ರೀರಂಗ, ಇನಾಂದಾರ, ಎಸ್.ವಿ. ಪರಮೇಶ್ವರ ಭಟ್, ವಿ. ಸೀತಾರಾಮಯ್ಯ, ಸರೋಜಿನಿ ಮಹಿಷಿ, ಪರ್ವತವಾಣಿ, ದ.ರಾ.ಬೇಂದ್ರೆ, ಅಡಿಗರು, ನಿರಂಜನ, ಆರ್.ಡಿ.ಕಾಮತ, ಬೀ.ಚಿ., ಶಿವರಾಮಕಾರಂತ, ಗೌರೀಶ ಕಾಯ್ಕಿಣಿ, ಮಾಗಡಿ ದಂಪತಿಗಳು, ಹಿರಣ್ಣಯ್ಯ, ಪಾಟಿಲ ಪುಟ್ಟಪ್ಪ, ಹಂ.ಪ.ನಾ., ಕಣವಿ, ಬಿ.ವಿ. ಕಾರಂತ, ರಾಮಚಂದ್ರ ಶರ್ಮ– ಮುಂತಾದ ಅನೇಕ ಮಹನೀಯರನ್ನು ನೋಡುವ ಕೇಳುವ ಸೌಭಾಗ್ಯವನ್ನು ಜನತೆಗೆ ಒದಗಿಸಿದೆ.

ಕುವೆಂಪು, ಪು.ತಿ.ನ. ಕಾರಂತ, ಬೀ.ಚಿ., ಬಿ.ಎಚ್. ಶ್ರೀಧರ, ಕೆ.ಕೆ. ರಮಣಿ, ವೃಷಬೇಂದ್ರ ಸ್ವಾಮಿ, ಕೆ.ಎ. ವೆಂಕಟರಾಮಯ್ಯ, ಅಂಕೋಲೆಕರ್. ಆರ್.ಟಿ. ಹೆಗಡೆ – ಮುಂತಾದ ಮಹನೀಯರನ್ನು ಸನ್ಮಾನಿಸಿ ಸಂತೋಷಪಟ್ಟಿದೆ.

**ಸಂಘದ ಕಲಾವಿದರು:** ಪ್ರತಿವರ್ಷ ನಾಡ ಹಬ್ಬದ ಅಂಗವಾಗಿ ವಿಜಯದಶಮಿಯ ದಿನ ಸಂಘದ ಕಾಣಿಕೆಯಾಗಿ ಸಂಘದ ಕಲಾವಿದರೇ ಪ್ರದರ್ಶಿಸುತ್ತಾ ಬಂದಿದ್ದಾರೆ. ಈ ಮೇಲೆ ಕಾಣಿಸಿದ ಅಧ್ಯಕ್ಷರು, ಕಾರ್ಯಾಧ್ಯಕ್ಷರು, ಉಪಾಧ್ಯಕ್ಷರು, ಗೌ. ಕಾರ್ಯದರ್ಶಿ, ಕಾರ್ಯದರ್ಶಿಗಳೆಲ್ಲರೂ ಸಂಘದ ಕಲಾವಿದರೇ ಒಂದಿಲ್ಲೊಂದು ನಾಟಕದಲ್ಲಿ ಅಭಿನಯಿಸಿ ರಂಜಿಸಿದ್ದಾರೆ.

ಇವರೊಡನೆ ಕಲಾಸಕ್ತಿ ಹೊಂದಿದ್ದ ಶಿಕ್ಷಣ ಇಲಾಖೆ, ಅಂಚೆ ಇಲಾಖೆ, ಲೋಕೋಪಯೋಗಿ ಇಲಾಖೆ, ತೋಟಗಾರಿಕೆ ಇಲಾಖೆ, ವಿದ್ಯುಚ್ಛಕ್ತಿ ಇಲಾಖೆ ರೆವೆನ್ಯೂ, ಪಂಚಾಯತ ಸಿಬ್ಬಂದಿಗಳೂ ಆಗಾಗ ಬೇರೆ ಬೇರೆ ನಾಟಕಗಳಲ್ಲಿ ಅಭಿನಯಿಸಿ ಸಂಘದ ಹಿರಿಮೆಗೆ ಪಾತ್ರರಾಗಿದ್ದಾರೆ. ಸಂಘವನ್ನು ಕಟ್ಟಿದ ಗೋವಿಂದ ಶಾನಭಾಗರು ಸ್ವತಃ

ಕಲಾವಿದರು ಸಂಗೀತಜ್ಞರು, ಉತ್ತಮ ನಿರ್ದೇಶಕರು. ಅವರ ನಿರ್ದೇಶನದಲ್ಲಿ ನಾಟಕಗಳೆಲ್ಲವೂ ಜನಮೆಚ್ಚುಗೆ ಪಡೆದಿದ್ದವು. ಅಭಿನಯಿಸುತ್ತಿದ್ದ ಕಲಾಕಾರರೆಂದರೆ-

ಶೇಷಗಿರಿ ಚಿತ್ರಕ, ರಾಮದಾಸ ಅಂಬಳ್ಳಿ, ವಾಸುದೇವ ಅಂಬಳ್ಳಿ, ದಿನಕರ ಅಂಕೋಲೆಕರ, ವಿಶು ಅಂಕೋಲೆಕರ, ಶ್ರೀಪತಿ ಪಟೇಲ, ಶಿವಣ್ಣ, ಅಣ್ಣಪ್ಪ ಚಿತ್ರಕ, ಗಣಪತಿರಾವ್ ಶಿರೂರ್, ಶಿವಯೋಗಿ ಜಪಾಟಿ, ಕಾಶೀನಾಥ ರಾಯರು, ಸಂಜೀವ ರಾಯ್ಕರ, ಎನ್.ಆರ್.ಹೆಗಡೆ, ದೊಡ್ಡಣ್ಣಯ್ಯ ಗೌಡರ್, ನಾಗಶೆಟ್ಟಿ, ಆರ್.ಟಿ.ಕೊಂಡ್ಲಿ, ಗಂಗಾಧರ ಬೇಟಗೇರಿ, ವಾಮನ ರಾವ್ ಬೆಟಗೇರಿ, ಹರಿಶ್ಚಂದ್ರ ಫಾತರ ಫೇಕರ, ಗೋಪಾಲ ಶಾನಭಾಗ, ಚೈತನ್ಯ ಹೆಗಡೆ, ಕಾಲಿಯಾ ಮರ್ದನ್ ಭಟ್ಟ, ಆಗ್ನೇಲ ಫರ್ನಾಂಡಿಸ್, ವಸಂತ ಬೆಟಗೇರಿ, ಕೆ.ಎ.ಭಟ್ಟ, ಆರ್.ಎಸ್. ಹೆಗಡೆ, ಎನ್. ಮಂಜಪ್ಪ, ನಂದಕುಮಾರ ಪೈ, ಚಂದ್ರಶೇಖರ, ಶ್ರೀಕಾಂತ ಹೆಗಡೆ, ಬಿ.ಜೆ. ನಾಯ್ಕ, ಸದಾನಂದ ಭಟ್ಟ, ವೀರಭದ್ರ ಹೊಸರ, ಶ್ರೀಧರ ಹೆಗಡೆ ಹುಲಿಮನೆ, ಬಿಳಗಿ, ಶ್ರೀನಿವಾಸ ಹೊನ್ನೆಗುಂಡಿ, ಬಿ.ಎಂ. ಪೈ, ಬಸ್ತ್ಯಾಂವ ಲೀಮಾ, ಎ.ಕೆ. ಖಾನ್, ಕೃಷ್ಣಮೂರ್ತಿ ಮುಗದೂರ, ಗಣಪತಿ ಹೆಗಡೆ ಹುಲಿಮನೆ, ಮಂಜುನಾಥ ಡಿ., ಶಶಿಧರ ಗೌಡ, ಚೈತನ್ಯ ಹೊಸುರ, ಶಂಕರ ಭಟ್ಟ, ಬಿ.ಎಂ. ನಾಯ್ಕ, ನಾಗರಾಜ ಡೋಗ್ರ, ಷಣ್ಮುಖ ಎಂ.ಎಂ. ಗಜಾನನ ಭಟ್ಟ ಹೆಗ್ಗಾರಳ್ಳಿ ಕುಸುಮಾಕರ ದೋಶೆಟ್ಟಿ ಮುಂತಾದವರು.

**ಮಹಿಳೆಯರು:** ರಾಧಾಬಾಯಿ ಶಾನಭಾಗ, ಮಂಜುಳಾ ಬಾಳಿಗಾ, ಜಯಶ್ರೀ ರಾಯ್ಕರ ಸರೋಜಾ ಫಾತರ ಫೇಕರ, ಕುಸುಮಾ ಫಾತರ ಫೇಕರ, ಗೀತಾ ಶಾನಭಾಗ, ಸುಮಿತ್ರಾ ಶೇಟ್, ಶೈಲಾ ಮಹಾಲೆ, ಮಂಜುಳಾ ರಾಯ್ಕರಗ, ಅನೂಷಾ ಭಟ್ಟ, ಶಾಂತಾ ರಾಯ್ಕರ, ಚೇತನಾ ಹೆಗಡೆ, ರಚನಾ ಹೆಗಡೆ, ಸಾವಿತ್ರಿ ಭಟ್ಟ, ರಶ್ಮಿ ಹೆಗಡೆ, ರಶ್ಮಿ ನಾಯ್ಕ, ಗೌತಮಿ ಹೊಸೂರ, ರೋಹಿಣಿ ಹಳದಿಪುರ, ಶ್ಯಾಮಲಾ ಶೆಟ್ಟಿ

ಈ ಮೊದಲಾದವರು ಸಂಘದ ಹಲವಾರು ನಾಟಕ, ನೃತ್ಯ ನಾಟಕಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಹಿನ್ನೆಲೆಯಲ್ಲಿ ಹಾಡಿದ್ದಾರೆ, ಸಂಗೀತ ನೀಡಿದ್ದಾರೆ.

ಸಂಪರ್ಕ ವಿಳಾಸ:
**ಆರ್.ಕೆ. ಹೊನ್ನೆಗುಂಡಿ**
ಸಿದ್ದಾಪುರ, ಉ.ಕ.

## 2. ಶ್ರೀ ಸಿದ್ಧಿವಿನಾಯಕ ನಾಟ್ಯ ಕಲಾ ಸಂಘ, ಗೋಳಿ

1956ರಲ್ಲಿ ರಂಗಾಸಕ್ತ ಯುವಕರು ಸೇರಿ ಮುರ್ಡೇಶ್ವರ ಮಾಧವರಾಯರ ನೇತೃತ್ವದಲ್ಲಿ ಈ ತಂಡ ಕಟ್ಟಿದರು. ಅಂದಿನಿಂದ ಅವ್ಯಾಹತವಾಗಿ ಇಂದಿನವರೆಗೂ ನಾಟಕಗಳು ನಡೆಯುತ್ತಲೇ ಬಂದಿವೆ. ರಾಮಚಂದ್ರ ಹೆಗಡೆ ಹಾರುಗಾರರ ನೇತೃತ್ವದ ಈ ಊರಿನ ತಂಡ ಆರು ತಿಂಗಳುಗಳ ಕಾಲ ರಂಗದ ಕೆಲಸದಲ್ಲಿ ತೊಡಗಿಕೊಂಡು ನಾಟಕ ಸಿದ್ಧಪಡಿಸುತ್ತದೆ. ಸಾವಿರ ಸಾವಿರ ಪ್ರೇಕ್ಷಕರು ಸುಮಾರು 10 ದಿನಗಳ ಕಾಲ ನಡೆಯುವ ಪ್ರದರ್ಶನದಲ್ಲಿ ತೊಡಗಿಕೊಳ್ಳುತ್ತಾರೆ. ಸಕಲ ರಂಗ ಪರಿಕರವನ್ನೂ ಸ್ವತಹ ತಯಾರಿಸುವ ಹಾರುಗಾರ ಹೆಗಡೆಯವರ ಮನೆ ರಂಗ ತರಬೇತಿ ಪಡೆಯುವವರಿಗೊಂದು ಮಿನಿ ವಿಶ್ವವಿದ್ಯಾಲಯವೇ ಸರಿ. ತಮ್ಮ ಇಳಿವಯಸ್ಸಿನಲ್ಲೂ ಅವರು ಸಿಂಧೂರ ವಧೆ, ಗಣಪತಿ ಮಹಾತ್ಮೆ ನಾಟಕವನ್ನು ರಂಗಕ್ಕೆ ತರುವುದರಲ್ಲಿ ಮಗ್ನರಾಗಿದ್ದರು. ಈಗ ನಾಟಕದ ಕಾಯಕವನ್ನು ಶಂಕರಹೆಗಡೆ ಹಾರೂಗಾರರು ಮುನ್ನಡೆಸುತ್ತಿದ್ದಾರೆ.

**ಪ್ರಮುಖ ನಾಟಕಗಳು:** ಸಂಸಾರ ನೌಕೆ, ಉತ್ತರ ಭೂಪ, ಚಿತ್ತೂರ ಪದ್ಮಿನಿ, ಅಭಿಮನ್ಯು, ಉಷಾ ಸ್ವಯಂವರ, ವಸ್ತ್ರಾಪಹರಣ, ಕುರುಕ್ಷೇತ್ರ, ಕೃಷ್ಣಾರುಡಿ, ಚೌತಿಚಂದ್ರ, ಪಾಂಡವಾಶ್ವಮೇಧ, ಪಾರ್ವತಿ ಕಲ್ಯಾಣ, ಭೂಕೈಲಾಸ ಇತ್ಯಾದಿ.

**ಕಲಾವಿದರು:** ರಾಮಚಂದ್ರ ಹೆಗಡೆ ಹಾರುಗಾರ, ಶ್ರೀಪತಿ ಭಟ್, ದತ್ತಾತ್ರೇಯ ಹೆಗಡೆ, ಗಣಪತಿ ಹೆಗಡೆ, ಮಂಜುನಾಥ ಹೆಗಡೆ, ಗಜಾನನ ಹೆಗಡೆ, ಲಕ್ಷ್ಮೀನಾರಾಯಣ ಹೆಗಡೆ, ಸತ್ಯ ನಾರಾಯಣ ಭಟ್ಟ, ಗಣಪತಿ ಭಟ್, ಗೋವಿಂದ ಹೆಗಡೆ, ರಾಮಕೃಷ್ಣ ಭಟ್, ಮಾಧವ ಹೆಗಡೆ, ಮುಂತಾದವರು – ಊರಿನ ನೂರಾರು ಯುವಕರು

ಸಂಗೀತದಲ್ಲಿ ಎಸ್.ಎಂ. ಹೆಗಡೆ, ಮಂಜುನಾಥ ಹೆಗಡೆ, ಆರ್.ವಿ. ಹೆಗಡೆ, ಗಣಪತಿ ಹೆಗಡೆ.

ಸಂಪರ್ಕ ವಿಳಾಸ:
ರಾಮಚಂದ್ರ ಹೆಗಡೆ ಹಾರೂಗಾರ
ಗೋಳಿ, ಶಿರಸಿ, ಉ.ಕ.

### 3. ಶ್ರೀ ಮಹಾಗಣಪತಿ ನಾಟ್ಯಕಲಾ ಸಂಘ, ಮಗೇಗಾರು

ಸಿದ್ದಾಪುರ ತಾಲೂಕಿನಿಂದ 6 ಕಿ.ಮೀ. ದೂರದ ಪುಟ್ಟ ಊರು ಮಗೇಗಾರು. ಕಂಪನಿ ನಾಟಕಗಳಿಂದ ಪ್ರಭಾವಿತರಾದ ಇಲ್ಲಿಯ ಸಮಾನ ಮನಸ್ಕರು 1957 ರಲ್ಲಿ ಈ ಸಂಘ ಹುಟ್ಟುಹಾಕಿದರು. ಸ್ಥಾಪಕ ಅಧ್ಯಕ್ಷರು ದಿ.ರಾಮಯ್ಯ ಹೆಗಡೆ. ಆರಂಭದ ದಿನಗಳ ನಾಟಕ ನಿರ್ದೇಶಕರು ರಾಮಜ್ಜನವರು. ಊರ ದೇವಸ್ಥಾನದ ಆವಾರದಲ್ಲಿ ಪ್ರತಿವರ್ಷ ತಪ್ಪದೇ ಇಂದಿನವರೆಗೂ ನಿಷ್ಠೆಯಿಂದ ನಾಟಕ ಪ್ರದರ್ಶನ ಮಾಡಿಕೊಂಡು ಬರುತ್ತಿದೆ. ಶ್ರೀಪಾದ ಹೆಗಡೆ ಮಗೇಗಾರು ಈಗಿನ ಅಧ್ಯಕ್ಷರು. ಊರಿನವರ ಸಹಕಾರದಿಂದ ತಂಡ ಚಿನ್ನದ ಹಬ್ಬವನ್ನೂ ಆಚರಿಸಿದೆ. ಸಂಘ ಇದುವರೆಗೂ ಪೌರಾಣಿಕ ಸಂಗೀತ ನಾಟಕ, ಇತಿಹಾಸಿಕ, ನಾಟಕ, ಸಾಮಾಜಿಕ, ನವ್ಯ, ದೇಶ ಭಕ್ತಿಪರನಾಟಕ ಹೀಗೇ ವೈವಿಧ್ಯಮಯ ಪ್ರದರ್ಶನಗಳನ್ನು ಕಟ್ಟಿಕೊಟ್ಟಿದೆ. ಮಕ್ಕಳ ನಾಟಕಗಳನ್ನೂ ಸಂಘಟಿಸಿದೆ. ಭೌಮಾಸುರ, ಚಿತ್ರಾಂಗದಾ, ಸೌಭಾಗ್ಯ ಲಕ್ಷ್ಮೀ, ರಕ್ತ ಮುಕುಟ, ರಕ್ತದೀಪ ಮುಂತಾದ ನಾಟಕಗಳನ್ನಲ್ಲದೇ ವಿ.ಜಿ. ಭಟ್ ಅವರ ಪ್ರಚಂಡ ಕೌಶಿಕ, ಅಜೇಯ ರಾವಣ ನಾಟಕಗಳನ್ನೂ, ಶ್ರೀಪಾದ ಹೆಗಡೆ ಮಗೇಗಾರು ಅವರು ಬರೆದ ದೇವಿಯ ದೀವಿಗೆ, ಕಳೆದು ಹೋಗುವವರು, ಮಾತನಾಡುವವರು ಮುಂತಾದ ನಾಟಕಗಳಿಂದ ಪ್ರಸಿದ್ಧಿ ಪಡೆದಿದೆ. 'ದೇವಿಯ ದೀವಿಗೆ' ಇದು ಸಿದ್ದಾಪುರ ತಾಲೂಕಿನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಕಥನವಾಗಿದ್ದು ಧಾರವಾಡ ಆಕಾಶವಾಣಿಯಿಂದಲೂ ಪ್ರಸಾರ ಕಂಡಿದೆ. ಚಿನ್ನದ ಹಬ್ಬದ ನೆನಕೆಗಾಗಿ 'ಹೊನ್ನ ಹಾದಿ' ಎಂಬ ವಿಶೇಷ ಸ್ಮರಣಿಕೆಯನ್ನು ಪ್ರಕಟಿಸಿದೆ.

ಮಕ್ಕಳಿಗಾಗಿ ನಾಟಕ ಸಂಘಟಿಸಿ, ತರಬೇತಿ ನೀಡಿ 'ಜಿಪುಣ ಮೈದಾಸ' 'ಟಿಂಗರ ಬುಡ್ಡಣ್ಣ' ಮುಂತಾದ ನಾಟಕಗಳನ್ನು ಶ್ರೀಪಾದ ಹೆಗಡೆ, ಗಣಪತಿಹೆಗಡೆ ಮುಂತಾದವರ ನೇತೃತ್ವದಲ್ಲಿ ಪ್ರಯೋಗಿಸಿದೆ.

ಅಭಿನಯಿಸಿದ ನಾಟಕಗಳು : ಬಸ್ಮಾಸುರ, ಚಿತ್ರಾಂಗದಾ, ಸೌಭಾಗ್ಯಲಕ್ಷೀ, ರಕ್ತಮುಕುಟ, ರಕ್ತದೀಪ, ಪ್ರಚಂಡ ಕೌಶಿಕ, ಅಜೇಯ ರಾವಣ, ಅಗ್ನಿಶಿಲೆ, ದೈವ ದುರಂತ ಕರ್ಣ, ಉಷಾ ಸ್ವಯಂವರ, ರಕ್ತರಾತ್ರಿ, ವಿಶ್ವಾಮಿತ್ರ ಮೇನಕೆ, ಚವತಿ ಚಂದ್ರ, ರೇಣುಕಾ ಮಹಾತ್ಮೆ, ದಾನ ಶೂರ ಕರ್ಣ, ದೇವಿಯ ದೀವಿಗೆ, ಜಿಪುಣ ಮೈದಾಸ್, ಟಿಂಗರ್ ಬುಡ್ಡಣ್ಣ, ಕಳೆದು ಹೋಗುವವರು, ಮಾತನಾಡುವವರು, ವಚನ ಬಂಧನ, ಚಾಣಕ್ಯ, ಕಲಿ ಕಂಠೀರವ.

ಕಲಾವಿದರು : ಶ್ರೀ ಅನಂತ ಪರಮಯ್ಯ ಹೆಗಡೆ ಭಾನ್ಕುಳಿ, ಶ್ರೀ ಗೋಪಾಲ ಪರಮಯ್ಯ ಹೆಗಡೆ ಭಾನ್ಕುಳಿ.

ಶ್ರೀ ಗಣಪತಿ ಹೆಗಡೆ ಭಾನ್ಕುಳಿ, ಶ್ರೀ ಜಯರಾಮ ಹೆಗಡೆ ಭಾನ್ಕುಳಿ, ಶ್ರೀ ವೆಂಕಟರಮಣ ಹೆಗಡೆ ಭಾನ್ಕುಳಿ, ಶ್ರೀ ಪರಮೇಶ್ವರ ಹೆಗಡೆ ಭಾನ್ಕುಳಿ, ಶ್ರೀ ಮಹಾಬಲೇಶ್ವರ ಹೆಗಡೆ ಗಮನಿ, ಶ್ರೀ ಭಾಸಕ್ರ ಹೆಗಡೆ ಗಮವಿ, ಕು! ರಾಮಚಂದ್ರ ಹೆಗಡೆ ಗಮನಿ, ಶ್ರೀ ವಿ.ಟಿ. ಹೆಗಡೆ ಗಮನಿ, ಶ್ರೀ ದತ್ತಾತ್ರೇಯ ಹೆಗಡೆ ಕರ್ಮನೆ, ಪಾಂಡುರಂಗ ಹೆಗಡೆ

ಕರ್ಮನೆ, ಶ್ರೀ ವಿಠ್ಠಲ ಹೆಗಡೆ ಕರ್ಮನೆ, ಶ್ರೀ ರಾಮಚಂದ್ರ ಹೆಗಡೆ ಕರ್ಮನೆ, ಶ್ರೀ ಗಿರೀಶ ಹೆಗಡೆ ಕರ್ಮನೆ, ಶ್ರೀ ರಾಘವೇಂದ್ರ ಹೆಗಡೆ ಕರ್ಮನೆ, ಶ್ರೀ ಸುಧೀಂದ್ರ ಹೆಗಡೆ.

ವತ್ಸಲಾ, ಶ್ಯಾಮಲಾ, ಪದ್ಮಾ, ಕಲಾವತಿ, ಪುಷ್ಪಾ, ತಾರಾ, ಅನ್ನಪೂರ್ಣ, ಅಮರಜಾ, ಮಂಗಳಗೌರಿ, ಲಕ್ಷ್ಮೀ, ಸುಷ್ಮಾ, ಜ್ಯೋತಿ, ಹೇಮಲತಾ, ದಿವ್ಯಾ ಮುಂತಾದವರು

ಸಂಗೀತ : ಶ್ರೀ ನಾರಾಯಣ ಮಾಸ್ತರ ಮುಗದೂರು, ಶ್ರೀ ರಾಮಕೃಷ್ಣ ಬೊಮ್ಮಯ್ಯ ಭಟ್ಟ ಹೆಗ್ಗಾರಳ್ಳಿ,

ದಿ| ಆರ್.ಟಿ. ಕೊಂಡ್ಲಿ, ಶ್ರೀ ಸುಬ್ರಾಯ ಭಟ್ ಕೊಡಗೀಬೈಲು, ಶೀ ನರಸಿಂಹ ಮೂರ್ತಿ ಹೆಗಡೆ ಮಗೇಗಾರು, ಶ್ರೀ ರಾಜೇಂದ್ರ ಹೆಗಡೆ ಕೊಳಗಿ, ಶ್ರೀ ರಾಮಚಂದ್ರ ಗಣೇಶ ಹೆಗಡೆ ಗಡಿಗದ್ದೆ.

ಸಂಪರ್ಕ ವಿಳಾಸ:
**ಶ್ರೀಪಾದ ಹೆಗಡೆ ಮೊಗೆಗಾರು**
ಸಿದ್ದಾಪುರ, ಉ.ಕ.

## 4. ಶ್ರೀ ಸಿದ್ಧಿವಿನಾಯಕ ಯುವಕ ಸಂಘ, ಕೆಕ್ಕಾರು

1972 ರಲ್ಲಿ ಆರಂಭವಾದ ಸಂಘ ಇದು. ಆರಂಭದಲ್ಲಿ ಯುವ ಜನೋತ್ಸವದ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನಗಳಿಸುತ್ತ ಬಂದ ಈ ತಂಡ ಬಹು ಬೇಗ ಜಿಲ್ಲೆಯ ಒಂದು ಪ್ರಮುಖ ಹವ್ಯಾಸಿ ರಂಗ ತಡವಾಗಿ ಬೆಳೆಯಿತು. ಸಾಮಾಜಿಕ ಜವಾಬ್ದಾರಿಯ ಹಲವು ರಂಗ ಚಟುವಟಿಕೆಯನ್ನೂ ನಡೆಸಿತು. ಜಿಲ್ಲೆಯ ಅರಣ್ಯ ರಕ್ಷಕರೊಬ್ಬರ ಕೊಲೆಯ ಪ್ರತಿಭಟನೆಯಾಗಿ ಜಿಲ್ಲೆಯಾದ್ಯಂತ 'ಸಾವಾದ ಕೊಲೆ' ಎಂಬ ನಾಟಕವನ್ನು ಪ್ರದರ್ಶಿಸಿತು. ಇತ್ತೀಚೆಗೆ ಸುತ್ತಮುತ್ತಲಿನ ಹಾಲಕ್ಕಿ ಸಮುದಾಯವನ್ನೂ ಒಳಗೊಂಡಂತೆ ನೂರಾರು ಜನರನ್ನು ಕಲಾವಿದರನ್ನಾಗಿಸಿ 'ಗೀತರಾಮಾಯಣ'ವನ್ನು ಪ್ರಯೋಗಿಸಿದೆ. ಶ್ರೀ ಜಿ.ಡಿ. ಭಟ್ ಕೆಕ್ಕಾರು ಅವರು ಇದರ ಬೆನ್ನೆಲುಬಾಗಿದ್ದಾರೆ.

**ಪ್ರಮುಖ ನಾಟಕಗಳು:** ನಾಳೆ ಯಾರಿಗೂ ಇಲ್ಲ, ಚಿರಂಜೀವಿ, ಸಂತೆಯಲ್ಲಿ ಸತ್ತವರು, ಸಾವಾದ ಕೊಲೆ, ಹುತ್ತ, ಮತಾಂತರ ಕರ್ನಾಟಕ ರಮಾರಮಣ, ಗೀತರಾಮಾಯಣ

**ಕಲಾವಿದರು:** ಜಿ.ಡಿ. ಭಟ್, ಶ್ರೀಪಾದ ಶಾಸ್ತ್ರಿ, ರಾಮಚಂದ್ರ ಶೆಟ್ಟಿ, ಗಣೇಶ ಶೆಟ್ಟಿ, ಡಿ.ಜಿ. ಭಂಡಾರಿ, ಕೆ.ಎ. ಜಯಪ್ರಕಾಶ, ಎಂ.ಎ. ಭಟ್, ಎನ್.ಎ.ಭಟ್, ಎಂ.ಟಿ.ಭಟ್, ಅನಂತ ನಾಯ್ಕ, ಆರ್.ಎ. ಭಟ್, ಎಸ್.ಕೆ. ಭಟ್, ಅರುಣ ಭಂಡಾರಿ, ವಿನೋದ ಭಂಡಾರಿ, ಜಿ.ವಿ. ಶೆಟ್ಟಿ ಮುಂತಾದವರು.

ಸಂಪರ್ಕ ವಿಳಾಸ:
**ಶ್ರೀ ಜಿ.ಡಿ. ಭಟ್**
ಕೆಕ್ಕಾರು, ಹೊನ್ನಾವರ, ಉ.ಕ.

## 5. ಜೋಕುಮಾರ ಸ್ವಾಮಿ ಕಲಾಬಳಗ, ಅಂಬಿಕಾನಗರ

ನಾಡಿನ ಹೆಸರಾಂತ ನಾಟಕಕಾರ ಹೂಲಿ ಶೇಖರರ ನೇತೃತ್ವದಲ್ಲಿ ಪ್ರಾರಂಭಗೊಂಡ ಈ ಸಂಘಟನೆ 1947 ರಲ್ಲಿ 'ಕಾಳಿ ಕಲಾ ಬಳಗ' ಎಂಬ ಹೆಸರಿನಿಂದ ಆರಂಭಗೊಂಡು 1975 ರಲ್ಲಿ ಈ ಹೆಸರು ಪಡೆದುಕೊಂಡಿತು. ನಾಟಕ ಪ್ರದರ್ಶನ, ನಾಟಕೋತ್ಸವ, ನಾಟಕ ಸ್ಪರ್ಧೆ, ವಿಚಾರ ಸಂಕಿರಣ ಮುಂತಾದ ಹಲವು ಚಟುಚಟಿಕೆಯನ್ನು ನಡೆಸುತ್ತ ಜಿಲ್ಲೆಯ ಗಡಿ ಭಾಗದಲ್ಲಿ ರಂಗ ವ್ಯಾಕರಣವನ್ನು ಪರಿಚಯಿಸುತ್ತ ಬಂದಿದೆ. ನಾಡಿನ ಬೇರೆ ಬೇರೆ ಕಡೆ 150ಕ್ಕೂ ಹೆಚ್ಚು ಪ್ರದರ್ಶನ ನೀಡಿದೆ.

**ತಂಡದ ಪ್ರಮುಖ ನಾಟಕಗಳು:** ಕಲ್ಯಾಣದೊಳ್ಲೊಂದು ಕ್ರಾಂತಿ, ಸ್ವಾಮಿಗಳ ಸ್ವಾಮಾರ, ಭೂತ ಬಂತು ಭೂತ, ಹುತ್ತವ ಬಡಿದರೆ, ಒಥೆಲೊ, ದಫನ್, ಗಾಂಧೀನಗರ, ಸುಯೋರ್ಧನ, ಅಹಿ ರಾವಣ, ಮಂದಾರ ಹೂ, ಗುದಮುರಗಿ ಮುಂತಾದವು.

**ಕಲಾವಿದರು:** ಜೈರಾಮ ಭಟ್, ಟಿ.ಎಂ. ಚಂದ್ರಶೇಖರ, ಶಿವಪುತ್ರಪ್ಪ ಹೂಲಿ, ವಿ.ಪಿ. ಗಾಂವಕರ್, ಟಿ.ಎಸ್. ಬಸವಯ್ಯ, ರಾಮಚಂದ್ರ ಕೆರೆಮಾರ್ಕಂಡೆ, ಪಿ.ಎಸ್. ಅಪರಂಜಿ, ಪಾಂಡುರಂಗ ಕರ್ಜಗಿ, ಶಾಹಾ ಅಹಮದ್, ಶ್ರೀನಿವಾಸ ಮೂರ್ತಿ, ಎಚ್.ಆರ್. ಪ್ರಕಾಶ.

ಸಂಪರ್ಕ ವಿಳಾಸ:
**ಜೈರಾಮ ಭಟ್**
ಎಚ್.ಪಿ.ಎಸ್. ಮಾದರಿ ಶಾಲೆ ಅಂಬಿಕಾನಗರ
(ಕೆ.ಪಿ.ಸಿ.) ಹಳಿಯಾಳ

## 6. ರಂಗ ಸಮೂಹ, ಮಂಚಿಕೇರಿ

80ರ ದಶಕದಲ್ಲಿ ಮಂಚಿಕೇರಿಯಲ್ಲಿ ಆಧುನಿಕ ರಂಗ ಪ್ರಜ್ಞೆಯನ್ನು ಗ್ರಾಮೀಣ ಪರಿಸರದಲ್ಲಿ ಬೆಳೆಸಲು ರಂಗಾಸಕ್ತರೆಲ್ಲ ಒಂದಾಗಿ ನಾಟಕ ಆಡಲಾರಂಭಿಸಿದರು. ಅಲ್ಲಿ ರಂಗಭೂಮಿ ಹೊಸ ದಿಕ್ಕು ಪಡೆದು ರಂಗ ಚಳುವಳಿಯನ್ನೇ ಆರಂಭಿಸಿತು. ರಾಮಕೃಷ್ಣ ಭಟ್ಟ ದುಂಡಿ, ಜಿ.ಟಿ.ಭಟ್ಟ ಮುಂತಾದವರೆಲ್ಲ ಸೇರಿ ಕೇಳು ಜನಮೇಜಯ, ಬಾಕಿ ಇತಿಹಾಸದಂತಹ ನಾಟಕಗಳನ್ನು ಆಡಿದರು. ನಂತರ ನೀನಾಸಂ ಜೊತೆ ಸಂಬಂಧ ಪಡೆದು ಅದರ ನೆರವಿನಿಂದ 1981 ರಲ್ಲಿ ಜಿಲ್ಲೆಗೆ ಪ್ರಥಮ ಎನ್ನಬಹುದಾದ ರಂಗ ಮಂದಿರವನ್ನು ಕಟ್ಟಿಕೊಂಡಿತು. ಜಯಸಿದ್ಧನಾಯಕ, ಹಯವದನ, ಅಂತಿಗೊನೆ, ಸಂದರ್ಭ, ಕಾಕನಕೋಟೆ, ಆಷಾಡದ ಒಂದು ದಿನ, ಬೆಟ್ಟದರಸು, ವಿದಿಶೆಯ ವಿದೂಷಕ, ಸೂರ್ಯ ಶಿಖಾರಿ, ಮಿಡ್ ಸಮರ್ ನೈಟ್ ಡ್ರೀಮ್ಸ್, ಪಂಚರಾತ್ರ, ಲಯ, ಅಗ್ನಿ ವರ್ಣ, ಕತ್ತಲೆ ದಾರಿ ದೂರ, ಕಂತು, ಪುಂಟಿಲಾ, ಯುದ್ಧಭಾರತ, ಅಂತಿಗೊನೆ, ಸಿರಿಸಂಪಿಗೆ, ಕಪ್ಪುಜನ ಕೆಂಪು ನೆರಳು, ಚೋರ ಚರಣದಾಸ, ಮಾಳವಿಕಾಗ್ನಿ ಮಿತ್ರ ಹೀಗೆ ಅನೇಕ ನಾಟಕಗಳನ್ನು ಈ ತಂಡ ಪ್ರದರ್ಶಿಸಿದೆ. ಭಾಸನಿಂದ ಠಾಗೂರರವರೆಗೆ ಮಹಾನ್ ನಾಟಕಕಾರರ ನಾಟಕಗಳೆಲ್ಲ ಈ ಹಳ್ಳಿಯಲ್ಲಿ ಆಡಲ್ಪಟ್ಟಿವೆ. ಚಿದಂಬರ ರಾವ್ ಜಂಬೆ, ಕೆ.ವಿ. ಅಕ್ಷರ, ರಘುನಂದನ, ಐತಾಳ, ಕೆ.ಜಿ. ಕೃಷ್ಣಮೂರ್ತಿ ಮುಂತಾದ ಅನೇಕ ನಿರ್ದೇಶಕರು ಇಲ್ಲಿ ಕೆಲಸ ಮಾಡಿದ್ದಾರೆ. ನೀನಾಸಂ ಸಹಕಾರದೊಡನೆ ಮಂಚಿಕೇರಿಯಲ್ಲಿದ್ದ ಸಿದ್ಧಿ ಜನಾಂಗದ ಹಾಡಿಗಳಲ್ಲಿ ರಂಗಶಿಬಿರ ಏರ್ಪಡಿಸಿ ಅವರಿಂದ ನಾಟಕಗಳನ್ನಾಡಿಸಿದೆ. ಸಿದ್ಧಿಯರ ಬದುಕಿಗೊಂದು ಸಾಂಸ್ಕೃತಿಕ ಆಯಾಮ ನೀಡಿ ಸತ್ತವರ ಕತೆಯಲ್ಲ, ಕಪ್ಪು ಜನ ಕೆಂಪು ನೆರಳು, ಪುಂಟಿಲ ಎಂಬ ನಾಟಕಗಳನ್ನಾಡಿಸಿ ಕನ್ನಡ ನಾಟಕ ರಂಗಕ್ಕೆ ಅವರನ್ನು ಪರಿಚಯಿಸಿದೆ. ರಾಜ್ಯಾದ್ಯಂತ ಮಾತ್ರವಲ್ಲ ರಾಜ್ಯದ ಹೊರಗಡೆ ಸಹ ನಾಟಕಗಳನ್ನು ಪ್ರದರ್ಶಿಸಿದ ಕೀರ್ತಿ ಈ ಸಂಘದ್ದು. ಅಕಾಡೆಮಿಯ ಸಹಕಾರದೊಂದಿಗೆ 1982 ಮತ್ತು 1986 ರಲ್ಲಿ ನಾಟಕೋತ್ಸವಗಳನ್ನು ಸಂಘಟಿಸಿದೆ. ಕಳೆದ 30 ವರ್ಷಗಳಿಂದ ರಂಗ ನಿರಂತರತೆಯನ್ನು ಕಾಪಾಡಿಕೊಂಡು ಬಂದ ತಂಡ ಇದು. ಹಲವು ಮಹತ್ವದ ವಿಚಾರ ಸಂಕೀರಣಗಳನ್ನೂ ಈ ಸಂಘಟನೆ ಆಯೋಜಿಸಿದೆ.

ಜಿಲ್ಲೆಯ ಮಕ್ಕಳ ರಂಗಭೂಮಿಯನ್ನು ಪ್ರಭಾವಿಸಿದ ಈ ತಂಡ ರಂಗ ತರಬೇತಿ ನಡೆಸಿ 'ಪಂಜರ ಶಾಲೆ', ಕಾಡಿನ ರಾಣಿ – ಪರಿಸರ ಪ್ರೇಮಿ', ಸಿಹಿ ಮೂಲಂಗಿ, ಝುಂ ಝುಂ ಆನೆ, ಕೋಟುಗುಮ್ಮ ಮುಂತಾದ ನಾಟಕಗಳನ್ನು ಪ್ರಯೋಗಿಸಿದೆ.

ಕಲಾವಿದರು: ಜಿ.ಟಿ. ಭಟ್, ರಾಮಕೃಷ್ಣ ಭಟ್ ದುಂಡಿ, ವೆಂಕಟರಮಣ ಶಾಸ್ತ್ರಿ, ವೆಂಕಟ್ರಮಣ ಹೆಗಡೆ, ಎಂ.ಜಿ. ಭಟ್, ವಾಸುಕಿ ಹೆಗಡೆ, ಶೈಲಾ ಭಟ್, ಪ್ರತಿಭಾ ಹೆಗಡೆ, ವಿದ್ಯಾ ಭಟ್, ಸರಸ್ವತಿ ಭಟ್, ಶಶಿಕಲಾ ಭಟ್, ದಾಕ್ಷಾಯಿಣಿ ಸಿದ್ಧಿ, ಪರಶುರಾಮ ಸಿದ್ಧಿ, ಗಿರೀಶ ಸಿದ್ಧಿ, ಸುರೇಶ ಸಿದ್ಧಿ, ತಿಮ್ಮಿ ಸಿದ್ಧಿ, ರಘುಪತಿ ಹೆಗಡೆ, ಸುಬೋಧ

ಹೆಗಡೆ, ರಾಮಾ ವಾಸ್ಕರ, ನಾರಾಯಣ ಭಟ್, ನಾಗೇಂದ್ರ ಹೆಗಡೆ, ರಮೇಶ ಹೆಗಡೆ, ಶಿವಾನಂದ ಹೆಗಡೆ, ಕಿರಣ ಹೆಗಡೆ, ತಿಮ್ಮಪ್ಪ ಭಾಗ್ವತ, ಪ್ರಸನ್ನ ವೈದ್ಯ, ನಾರಾಯಣ ಶೇರೂಗಾರ, ನಾಗಪತಿ ಶಾಸ್ತ್ರಿ, ಶ್ರೀಕಾಂತ ಹೆಗಡೆ, ವೆಂಕಣ್ಣ ಉಮ್ಮಚಗಿ, ನಾಗರಾಜ ಹೆಗಡೆ, ಶ್ರೀಪಾದ ಭಟ್ಟ, ಎಂ.ಕೆ. ಭಟ್ಟ, ಶಾಂತಾರಾಮ ಹೆಗಡೆ, ಗಣಪತಿ ಭಟ್ಟ

ಸಂಪರ್ಕ ವಿಳಾಸ:
**ರಾಮಕೃಷ್ಣ ಭಟ್**
ದುಂಡಿ ರಂಗಸಮೂಹ ಮಂಚಿಕೇರಿ, ಯಲ್ಲಾಪುರ, ಉ.ಕ.

## 7. ರಾಘವೇಂದ್ರ ರಂಗಸಂಗ, ಅಂಕೋಲಾ

ಸಾಹಿತಿ, ಪ್ರಕಾಶಕ, ಸಂಘಟಕ ವಿಷ್ಣು ನಾಯಕರಿಂದ ಸ್ಥಾಪನೆಗೊಂಡ ಈ ತಂಡ ಅಂಕೋಲಾದ ರಂಗಭೂಮಿಯನ್ನು ನಿರಂತರವಾಗಿ ಇಟ್ಟಿದೆ. ಸುತ್ತಮುತ್ತಲ ಹಾಲಕ್ಕಿ ಸಮುದಾಯವನ್ನೂ ರಂಗದ ಒಡಲೊಳಗೆ ತಂದು ಸಾಮಾಜಿಕ ನಾಟಕಗಳನ್ನಾಡುತ್ತ ನಿಧಾನವಾಗಿ ಪ್ರಗತಿಪರ ನಾಟಕಗಳನ್ನು ಆರಂಭಿಸಿತು. ಬೀದಿ ನಾಟಕಗಳನ್ನು ಪ್ರಸಿದ್ಧಪಡಿಸಿ ಅದನ್ನು ತನ್ನ ಪ್ರಮುಖ ಅಭಿವ್ಯಕ್ತಿಯನ್ನಾಗಿ ಮಾಡಿಕೊಂಡಿತು. ಸಾಹಿತ್ಯ ಪ್ರಕಾಶನದ ಅಂಗವಾಗಿ ಈ ಸಂಘಟನೆ ನಾಟಕಗಳನ್ನು ಆಡುತ್ತಲೇ ಇದೆ.

**ಪ್ರಯೋಗಿಸಿದ ಪ್ರಮುಖ ನಾಟಕಗಳು:** ಮದುವೆ ಮಾರ್ಕೆಟ್, ವಾತ್ಸಲ್ಯ, ಮಾರಿಕೊಂಡವರು, ಹದ್ದುಗಳು, ಬರಬಿದ್ದ ನೆಲದಲ್ಲಿ, ರಾಕ್ಷಸರು, ಅಯ್ನೋರ ಪೂಜೆ, ಹೆಣ್ಣಲ್ಲವೇ ನಿಮ್ಮ ತಾಯಿ, ಮಾಡಿದ್ದುಣ್ಣೋ ಮಾರಾಯ, ಇವ ನಮ್ಮವ – ಇತ್ಯಾದಿ.

ಸಂಪರ್ಕ ವಿಳಾಸ:
**ವಿಷ್ಣು ನಾಯ್ಕ**
ಅಂಬಾರಕೊಡ್ಲು, ಅಂಕೋಲಾ, ಉ.ಕ.

## 8. ನಾಗರಿಕ ವೇದಿಕೆ, ಹೊನ್ನಾವರ

ನಾಗರಿಕ ಪತ್ರಿಕೆಯ ಸಂಪಾದಕರಾದ ಕೃಷ್ಣಮೂರ್ತಿ ಹೆಬ್ಬಾರರ ನೇತೃತ್ವದ ರಂಗ ವೇದಿಕೆ ಇದು. ಕ್ರಿಯಾಶೀಲರಾದ ಹೆಬ್ಬಾರರು ಬಹಳ ಮೊದಲೇ 'ನೆರೆಹಾವಳಿ' ಎಂಬ ನಾಟಕ ಬರೆದು ನಿರ್ದೇಶಿಸಿ, ನಟಿಸಿ ಜಿಲ್ಲೆಯಲ್ಲಿ ಹೆಸರಾದವರು. ಪತ್ರಿಕೆಯ ಹೆಸರಿನಲ್ಲಿ ರಂಗ ಚಟುವಟಿಕೆಗಳನ್ನು ಆಗಾಗ ನಡೆಸುತ್ತ ಬರುತ್ತಿದ್ದಾರೆ. ಕರ್ಕಿಯಲ್ಲಿ

ಯುವತಿಯರಿಗಾಗಿ ರಂಗ ತರಬೇತಿ ಶಿಬಿರವನ್ನು ಸಂಘಟಿಸಿದ್ದಾರೆ, ಕಿರಣ ಭಟ್ ನಿರ್ದೇಶನದಲ್ಲಿ ಕುರಿತೇರು ಎಂಬ ನಾಟಕವನ್ನು ಸಂಘಟಿಸಿ, ನಟಿಸಿದ್ದಾರೆ. ಸಾಕ್ಷರತಾ ಆಂದೋಲನದಲ್ಲಿ ಬೀದಿ ನಾಟಕ ತಂಡ ಕಟ್ಟಿಕೊಂಡು ಹೊನ್ನಾವರದ ಹಳ್ಳಿ ಹಳ್ಳಿಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಜಿ.ಕೆ. ಶೇಟ್‌ರಂತಹ ಹಲವು ಕಲಾವಿದರು ಈ ತಂಡದಲ್ಲಿ ಕೆಲಸ ನಿರ್ವಹಿಸಿದ್ದಾರೆ.

ಸಂಪರ್ಕ ವಿಳಾಸ:
**ಕೃಷ್ಣಮೂರ್ತಿ ಹೆಬ್ಬಾರ**
ಸಂಪಾದಕರು, ನಾಗರಿಕ ಪತ್ರಿಕೆ, ರಥಬೀದಿ, ಹೊನ್ನಾವರ.

**9. ಸೀತಾರಾಮ ಶಾಸ್ತ್ರಿ ಹುಲಿಮನೆ ಪ್ರತಿಷ್ಠಾನ, ಸಿದ್ದಾಪುರ**

ರಂಗದ ಹುಲಿ ಸೀತಾರಾಮ ಶಾಸ್ತ್ರಿಯವರ ನೆನಪಿನಲ್ಲಿ 1986ರಲ್ಲಿ ನೊಂದಣಿಗೊಂಡ ಈ ಸಂಘ ನಾಟಕ ಪ್ರದರ್ಶನ, ನಾಟಕೋತ್ಸವ, ರಂಗ ತರಬೇತಿ, ಮುಂತಾದ ರಂಗ ಸಂಬಂಧೀ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಸಿದ್ದಾಪುರ ಮಾತ್ರವಲ್ಲದೇ ಮೈಸೂರು, ಬೆಂಗಳೂರು ಮುಂತಾದ ಕಡೆ ನಾಟಕ ಪ್ರದರ್ಶಿಸಿದೆ. ನಾಡಿನ ಕಲೆಗಾಗಿ ದುಡಿದವರನ್ನು ಸನ್ಮಾನಿಸುತ್ತಿದೆ. 2005-06ರಲ್ಲಿ ಸೀತಾರಾಮ ಶಾಸ್ತ್ರಿಯವರ ಜನ್ಮ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದೆ. ರಂಗ ಸಂಚಿಕೆ ಪ್ರಕಟಿಸಿದೆ.

ಇದುವರೆಗೆ ಟಿಪ್ಪು ಸುಲ್ತಾನ, ವೀರ ಪನ್ನಾದಾಸಿ, ವರದಕ್ಷಿಣೆ, ಸಂಧ್ಯಾಕಾಲ, ಪ್ರಚಂಡ ಭಾರ್ಗವ, ನರವೀರ ಪಾರ್ಥ, ಒಂದಕ್ಕೆ ಒಂದೂವರೆ, ಕಲೆಯ ಕೊಲೆ, ಸಾಯೋ ಆಟ, ಪಾಣಿಗ್ರಹಣ, ಠಾಣೆಯಲ್ಲೊಂದು ಸೂತ್ರೋದಯ ನಾಟಕಗಳನ್ನಲ್ಲದೇ ಮಕ್ಕಳಿಗಾಗಿ ದೇವರೆಲ್ಲಿದ್ದಾನೆ, ಗಾಂಪಾಯಣ, ಹೊಟ್ಟೆಯಲ್ಲಿ ಹೊಕ್ಕ ವಿಧಿ, ಏಕಲವ್ಯ, ವಿಧಿಯ ಪ್ರತಾಪ, ಆಲದ ಮರದ ಆತ್ಮಕತೆ, ಪಂಜರ ಶಾಲೆ, ಶುನಶ್ಯೇಪ, ಉದ್ಧಾರ, ಕುದುರೆ ಮೊಟ್ಟೆ, ನನ್ನ ಗೋಪಾಲ ನಾಟಕಗಳನ್ನು ಪ್ರದರ್ಶಿಸಿದೆ.

ಕಲಾವಿದರು: ಶ್ರೀಧರ ಹೆಗಡೆ ಹುಲಿಮನೆ, ಪ್ರಭಾಕರ ಹೆಗಡೆ ಕನ್ನಳ್ಳಿ, ಜಯಂತ ಕಲ್ಲಾರೆಮನೆ, ನಾಗರಾಜ ಡೋಂಗ್ರೆ, ರಾಜಾರಾಂ ಭಟ್ಟ, ಕೃಷ್ಣಮೂರ್ತಿ ಹೆಗಡೆ, ರವೀಂದ್ರ ಭಟ್ಟ ಐನಕೈ, ಪುರುಷೋತ್ತಮ ಹೆಗಡೆ ಮುಗದೂರು, ಭಾರತಿ ಭಟ್ಟ ಐನಕೈ, ಶ್ರೀ ಶೈಲಾ ಭಟ್ಟ ಹುಲಿಮನೆ, ವಿನಾಯಕ ಹೆಗಡೆ ಹೊಲಗಡಿಕೊಪ್ಪ, ಮಂಜುನಾಥ ಹೆಗಡೆ ಗೌರಿಗುಂಡಿ, ಗಣಪತಿ ಹೆಗಡೆ ಹುಲಿಮನೆ, ಶ್ರೀಧರ ಭಟ್ಟ ವಡ್ಡಿನಗದ್ದೆ, ಜಯರಾಂ ಹೆಗ್ಗಾರಳ್ಳಿ, ಸುಬ್ರಹ್ಮಣ್ಯ ಮುಗದೂರು, ಶಿರಾಮ ಭಟ್ಟ ಕೊಪ್ಪ, ದಿ.ಕೇಶವ ಹೆಗಡೆ ಕೊಲಗಿ.

ಸಂಪರ್ಕ ವಿಳಾಸ:
**ಶ್ರೀ ಸೀತಾರಾಮ ಶಾಸ್ತ್ರಿ**
ಹುಲಿಮನೆ ಸ್ಮಾರಕ ಪ್ರತಿಷ್ಠಾನ , ರವೀಂದ್ರನಗರ, ಸಿದ್ದಾಪುರ ಉ.ಕ. 581355

## 10. ರಂಗ ಬಳಗ ಮತ್ತೀಘಟ್ಟ, ಶಿರಸಿ

ಯಾಣ ಎಂಬ ಪ್ರವಾಸಿ ಕೇಂದ್ರದ ಸಮೀಪದ ಊರು ಮತ್ತಿಘಟ್ಟ, ಶಿರಸಿ ತಾಲೂಕು ಕೇಂದ್ರದಿಂದ ಒಂದುವರೆ ಗಂಟೆ ದೂರದ ಪ್ರಕೃತಿ ಸೌಂದರ್ಯದ ಈ ಊರು, ನಾಗರಿಕ ಸೌಲಭ್ಯಗಳಿಲ್ಲದ ಮಲೆನಾಡಿನ ಹಲವಾರು ಹಳ್ಳಿಗಳಲ್ಲಿ ಒಂದೆಂಬಂತೆ ಇದ್ರೂ ಹಾಗಾಗದೇ ನಾಡಿನ ಗಮನ ಸೆಳೆದಿರುವದು ತನ್ನ ರಂಗ ಚಟುವಟಿಕೆಗಳಿಂದ.

ರಂಗಬಳಗ ಹುಟ್ಟಿಕೊಂಡಿದ್ದು 1995–96ರಲ್ಲಿ, ರಸ್ತೆಗಳಿಲ್ಲದ, ಬಸ್ ಸೌಲಭ್ಯಗಳಿಲ್ಲದ, ದೂರವಾಣಿ ಸಂಪರ್ಕವಿಲ್ಲದ ಕುಗ್ರಾಮ ಎಂದೇ ನಾಗರಿಕ ಸಮುದಾಯ ಹೇಳಬಹುದಾಗಿದ್ದ ಈ ಊರಿನಲ್ಲಿ ಸಾಂಸ್ಕೃತಿಕ ಶ್ರೀಮಂತಿಕೇನೂ ಕಡಿಮೆ ಇರಲಿಲ್ಲ. ಆಗಾಗ ಸಾಮಾಜಿಕ ನಾಟಕಗಳು ಜರುಗುತ್ತಿದ್ದವು. ಆದರೆ ಕೆ.ಆರ್. ಪ್ರಕಾಶ ಹಾಗೂ ವಿ.ಆರ್. ಹೆಗಡೆಯಂತಹ ಸಾಹಸಿಗಳು ಊರ ಹಲವು ಯುವಕರನ್ನು ಸೇರಿಸಿಕೊಂಡು ಈ ಸಂಘಟನೆ ಶುರುಮಾಡಿ ರಂಗನಿರಂತರತೆ ಜತೆ ರಂಗ ಸಾಹಸ ಯಾತ್ರೆಗಳನ್ನೂ ಕೈಗೊಂಡರು. 95ರಿಂದ ಇದುವರೆಗೆ ನಾಟಕ ಪ್ರದರ್ಶನ, ರಂಗ ತರಬೇತಿ, ಬೇಸಿಗೆ ಶಿಬಿರಗಳು, ರಂಗೋತ್ಸವಗಳು, ಬೀದಿ ನಾಟಕ ತಿರುಗಾಟ, ಯಕ್ಷಗಾನ ಪ್ರದರ್ಶನಗಳು, ವಿಚಾರ ಸಂಕೀರ್ಣಗಳು – ಹೀಗೆ ಮತ್ತು ಹಲವು ಚಟುವಟಿಕೆಗಳನ್ನು ಸಂಘ ನಡೆಸಿದೆ. ದಶಮಾನೋತ್ಸವದ ಸಂದರ್ಭದಲ್ಲಿ ಅರ್ಥಪೂರ್ಣ ರಂಗತೋರಣ ಎಂಬ ಸಂಚಿಕೆಯನ್ನೂ ಪ್ರಕಟಿಸಿದೆ.

ಈ ರಂಗಬಳಗದ ಹೆಸರನ್ನು ರಾಜ್ಯಮಟ್ಟದಲ್ಲಿ ವಿಸ್ತರಿಸಿದ ಕೆಲವು ವಿಶಿಷ್ಟ ರಂಗ ಪ್ರಯೋಗಗಳು ಹೀಗಿವೆ. ರಂಗ ಸಾಧ್ಯತೆಗಳನ್ನು ವಿಸ್ತರಿಸುವ ಆಶಯದಲ್ಲಿ ಇದು ಹಲವು ರಂಗ ಸಾಹಸಗಳನ್ನು ಕೈಗೊಂಡಿದೆ. ನದಿಯಲ್ಲಿ ನಾಟಕ ಎನ್ನುವ ಪರಿಕಲ್ಪನೆಯಡಿ ಶಿವಾನಂದ ಕಳವೆ ಅವರು ರಚಿಸಿದ 'ಇ–ಮೇಲ್ ನಲ್ಲಿ ಕಟ್ ಹಕ್ಲು' ಎಂಬ ನಾಟಕವನ್ನು ಮತ್ತಿಘಟ್ಟದ ಹಸೆಹಳ್ಳವನ್ನು ವೇದಿಕೆಯನ್ನಾಗಿಸಿ ಪ್ರಯೋಗಿಸಿದೆ. ಸಮುದ್ರದಲ್ಲಿ ನಾಟಕ ಎಂಬ ಪರಿಕಲ್ಪನೆಯಡಿ ಗೋಕರ್ಣದ ಓಂ ಬೀಚನ್ನು ವೇದಿಕೆಯಾಗಿಸಿ ಮಾನಸ ಹೆಗಡೆಯವರು ರಚಿಸಿದ 'ಆವರ್ತನ' ಎಂಬ ನಾಟಕ ಪ್ರಯೋಗಿಸಿದೆ. ಪ್ರಪಾತದಲ್ಲಿ ನಾಟಕ ಎಂಬ ಪರಿಕಲ್ಪನೆಯಡಿ ದಿವಾಕರ ಹೆಗಡೆಯವರ 'ಉದ್ಧಾರ' ನಾಟಕ ಪ್ರಯೋಗಿಸಿದೆ. ಮಳೆಯಲ್ಲಿ ನಾಟಕ ಎಂಬ ಪರಿಕಲ್ಪನೆಯಡಿ ದಿವಾಕರ ಹೆಗಡೆಯವರ 'ಲಿವಿಂಗ್ ಟುಗೆದರ್' ನಾಟಕ, ಕೆರೆಯಲ್ಲಿ ನಾಟಕ ಪರಿಕಲ್ಪನೆಯಡಿ ದಿವಾಕರ ಹೆಗಡೆಯವರ 'ಒಡ್ಡು' ನಾಟಕ, ಗವಿಯಲ್ಲಿ ನಾಟಕ ಪರಿಕಲ್ಪನೆಯಡಿ ಯಾಣದ ಗವಿಯಲ್ಲಿ ಸುಬ್ರಾಯ ಮತ್ತಿಹಳ್ಳಿ ರಚಿಸಿದ 'ಗವಿ ಮತ್ತು ಭವಿ' ನಾಟಕವನ್ನೂ ಪ್ರದರ್ಶಿಸಿದೆ. ಮತ್ತಿಗಟ್ಟದ ಈ ರಂಗಬಳಗದ ನಾಟಕಗಳೆಲ್ಲವನ್ನೂ ಕೆ.ಆರ್. ಪ್ರಕಾಶ ನಿರ್ದೇಶಿಸಿದ್ದಾರೆ.

ರಂಗ ಬಳಗ ಪ್ರದರ್ಶಿಸಿದ ಪ್ರಮುಖ ನಾಟಕಗಳು: ಸಂಗ್ರಾಮದ ಆ ಗಳಿಗೆ, ನ್ಯಾಯದ ಬಾಗಿಲಲ್ಲಿ, ನೆರೆಹಾವಳಿ, ದತ್ತೂ ಮಾಣಿಯ ಮದುವೆ ಪ್ರಸಂಗ, ಬೆಳ್ಳಕ್ಕಿಗಳ ಲೋಕದಲ್ಲಿ, ವಿಡ್ಡಾಯಣ, ಹೆಣದ ಬಟ್ಟೆ, ಮಹಾರಾತ್ರಿ, ಪಾಪದ ಹೂವು ಪೂಲನ್, ಸಂಭವಾಮಿ

ಯುಗೆ ಯುಗೆ, ಇ ಮೇಲ್ನಲ್ಲಿ ಕಟ್ ಹಕ್ಲು, ಸಂಸಾರದಲ್ಲಿ ಸನಿದಪ, ಪರಿವರ್ತನೆ, ಅವ್ಯಕ್ತ, ಆವರ್ತನ, ಲಿವಿಂಗ್ ಟುಗೆದರ್, ಮುಂತಾದವು. ಅಲ್ಲದೇ ಈ ತಂಡ ಅಪ್ಪಾ ದೇಶ, ಇದು ಎಂಥಾ ಲೋಕವಯ್ಯ, ರಾಣಿ ಜಲಜಾಕ್ಷಿ, ಹರಿವ ನದಿ ತೀರದಲ್ಲಿ ಮುಂತಾದ ಬೀದಿ ನಾಟಕಗಳನ್ನೂ ಪ್ರದರ್ಶಿಸಿದೆ.

ರಂಗ ಬಳಗ ಮತ್ತಿಘಟ್ಟ ಮಕ್ಕಳಿಗಾಗಿ ರಂಗತರಬೇತಿ ಶಿಬಿರ ನಡೆಸಿ ಹಲವಾರು ಮಕ್ಕಳ ನಾಟಕಗಳನ್ನು ಪ್ರದರ್ಶಿಸಿದೆ. 2001 ರಿಂದ ಆರಂಭಗೊಂಡ ಅಲ್ಲಿನ ರಂಗಚಟುವಟಿಕೆ ಇನ್ನೂ ಮುಂದುವರಿದಿದೆ. ಕೆ.ಆರ್. ಪ್ರಕಾಶ ನಿರ್ದೇಶನದಲ್ಲಿ ಅಂಧೇರ ನಗರಿ ಚೌಪಟ್ ರಾಜ, ನಕ್ಕಳಾ ರಾಜಕುಮಾರಿ, ಪಂಜರದಲ್ಲಿ ಹುಲಿ, ಹೆಡ್ಡಾಯಣ ಮುಂತಾದ ನಾಟಕಗಳು ಹೆಸರಾಗಿವೆ.

**ತಂಡದ ನಾಟಕಗಳಲ್ಲಿ ಭಾಗವಹಿಸಿದ ಕಲಾವಿದರು:** ಬೇರೆ ಬೇರೆ ನಾಟಕಗಳಲ್ಲಿ ಭಾಗವಹಿಸಿದ ಕಲಾವಿದರ ಸಂಖ್ಯೆಯು ನೂರೈವತ್ತನ್ನೂ ದಾಟುತ್ತದೆ. ರಂಗಬಳಗದ ನಾಟಕಗಳಿಗೆ ನಿರ್ದೇಶಕರಾದ ಶ್ರೀ ಕೆ.ಆರ್. ಪ್ರಕಾಶ ಬಹುತೇಕ ನಾಟಕಗಳಲ್ಲಿ ಪಾತ್ರವನ್ನೂ ಮಾಡಿದ್ದಾರೆ. ಇನ್ನುಳಿದಂತೆ ಶ್ರೀ ಶ್ರೀಪಾದ ಪಾಟೀಲ್, ಶ್ರೀ ಮಂಜು ಸಭಾಹಿತ, ಶ್ರೀ ಶೇಖರ ಮರಾಠಿ, ಶ್ರೀ ಸತೀಶ ಭಟ್ಟ ಉಂಚಳ್ಳಿ, ಶ್ರೀ ವಿ.ಆರ್. ಹೆಗಡೆ, ಶ್ರೀ ಶ್ರೀಪತಿ ಹೆಗಡೆ, ಶ್ರೀ ರಮೇಶಸಭಾಹಿತ, ಶ್ರೀ ಸುಬ್ರಾಯ ಸಿದ್ದಿ, ಶ್ರೀ ವಿ.ಡಿ. ನಾಯ್ಕ, ಶ್ರೀ ನಾಗಪತಿ ಭಟ್ಟ, ಶ್ರೀ ಶಶಿಧರ ಭಟ್ಟ ಡೊಂಬೇಸರ, ಶ್ರೀ ಅನಂತಕುಮಾರ ಹೆಗಡೆ, ಶ್ರೀ ಶಾಂತಾರಾಮ ಹೆಗಡೆ ಶೀಗೆಹಳ್ಳಿ, ಶ್ರೀ ನೀರ್ನಳ್ಳಿ ರಾಮಕೃಷ್ಣ, ಕು. ಅನಿತಾ ಟಿ.ಆರ್. ಬೆಂಗಳೂರು, ಡಾ. ಈ.ಜಿ. ಹೆಗಡೆ ಕುಮಟಾ, ಶ್ರೀ ಶ್ರೀನಿವಾಸ ಭಾಗ್ವತ್, ಶ್ರೀ ಸುಬ್ರಾಯ ಮರಾಠಿ, ಕು.ಜೆ.ವಿ. ಮಮತಾ, ಕು. ಸೌಜನ್ಯ ಹೆಗಡೆ, ಕು. ಪ್ರತಿಮಾ ಭಟ್ಟ, ಕು. ಶ್ವೇತಾ ಅವಧಾನು. ಕು. ದೇವಕಿ ನಾಯ್ಕ, ಕು. ಶ್ವೇತಾ ಭಟ್ಟ, ಕು. ಚೈತ್ರಾ ಹೆಗಡೆ, ಶ್ರೀ ಪ್ರೀತಮ್ ಬಾರಕೂರ್, ಕು. ವೃಂದಾ ಭಟ್, ಶ್ರೀ ನಾಗರಾಜ ಹೆಗಡೆ, ಮುಂತಾದವರು.

**ಸಂಗೀತ ಮತ್ತು ರಂಗ ಸಜ್ಜಿಕೆ:** ಶ್ರೀ ಮಧು ಭಟ್ಟ ಭೈರುಂಬೆ, ಪಂ.ಎಮ್.ಪಿ. ಹೆಗಡೆ ಪಡಿಗೇರಿ, ಶ್ರೀ ಸುರೇಶ ಹಕ್ಕೀಮನೆ, ಶ್ರೀ ರಾಮಕೃಷ್ಣ ಶಾಸ್ತ್ರಿ, ಶ್ರೀ ಶ್ರೀನಿವಾಸ ಬಾಳೆಗದ್ದೆ, ಶ್ರೀ ರಾಘವ ಹೆಗಡೆ ಕಾರಗದ್ದೆ, ಕು. ಶುಭಾ ಹೆಗಡೆ ಬಣಗಾರು, ಶ್ರೀ ಹಿತೇಂದ್ರ ಶಾಸ್ತ್ರಿ, ಶ್ರೀ ರಮಾನಂದ ಹೆಗಡೆ ಹೊಸಗದ್ದೆ, ಶ್ರೀ ಕೆ.ಪಿ. ಹೆಗಡೆ ಮಾನಿಗದ್ದೆ, ಶ್ರೀ ಮಹೇಶ ಹೆಗಡೆ ತಾರಗೋಡ, ಕು.ದೀಪ್ತಿ ಭಟ್ಟ, ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಶೇಖರ ಭಟ್ಟ, ಶ್ರೀ ಗಿರೀಶ ಹೆಗಡೆ ಮುಂತಾದವರು.

ಸಂಪರ್ಕ ವಿಳಾಸ:
**ಶ್ರೀ ವಿ.ಆರ್. ಹೆಗಡ**
ಅಧ್ಯಕ್ಷರು, ರಂಗಬಳಗ ಮತ್ತಿಘಟ್ಟಾ, ಶಿರಸಿ, ಉ.ಕ. 9448575828

## 11. ಒಡ್ಡೋಲಗ, ಹಿತ್ಲಕ್ಕೈ

1998ರಲ್ಲಿ ಸಿದ್ದಾಪುರದ ಗ್ರಾಮೀಣ ಭಾಗದಲ್ಲಿ ಸ್ಥಾಪಿತವಾದ ಸಂಸ್ಥೆ ಇದು. ನೀನಾಸಂ ಪದವೀದರ ಗಣಪತಿ ಹೆಗಡೆ ಹಿತ್ಲಕ್ಕೈ ಇದನ್ನು ಆರಂಭಿಸಿದರು. ಆಧುನಿಕ ರಂಗಭೂಮಿಯನ್ನು ಗ್ರಾಮೀಣ ಪ್ರದೇಶದಲ್ಲಿ ಪರಿಚಯಿಸುತ್ತ ಗ್ರಾಮೀಣ ಕಲಾಪ್ರಕಾರಗಳನ್ನು ಒಳಗೊಳ್ಳುತ್ತ ರಂಗ ಪಾಕವೊಂದನ್ನು ಸಿದ್ದಪಡಿಸುವ ಆಶಯ ಹೊತ್ತ ಈ ತಂಡ ನಾಟಕ ಪ್ರಯೋಗ, ಯಕ್ಷಗಾನ ಪ್ರದರ್ಶನ, ಗೊಂಬೆಯಾಟ, ಮಕ್ಕಳ ರಂಗ ತರಬೇತಿ, ಶ್ರಾವಣ ಸಂಜೆಯ ಕಾರ್ಯಕ್ರಮಗಳು, ಸಂಗೀತ, ತಾಳ ಮದ್ದಲೆ, ನೃತ್ಯ ಕಾರ್ಯಕ್ರಮ – ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ವರ್ಷದುದ್ದಕ್ಕೂ ಸಂಘಟಿಸುತ್ತ ಬಂದಿದೆ. ಪ್ರತಿ ವರ್ಷ ಹೊಸ ನಾಟಕ ಸಿದ್ಧಪಡಿಸಿಕೊಂಡು ತಿರುಗಾಟ ನಡೆಸುತ್ತದೆ. ನಾಡಿನ ಬೇರೆ ಬೇರೆ ಕಲಾ ತಂಡಗಳನ್ನು ಕರೆಯಿಸಿ ಪ್ರದರ್ಶನ ಏರ್ಪಡಿಸುತ್ತದೆ.

**ಶ್ರೀಮನ್ ಮೂಕವಾಗಿತ್ತು, ಯಜ್ಞ, ಅಂಧಯುಗ, ಭಟ್ಟರ ಮಗಳು, ಸೀರೆ, ರುದ್ರ ಭೀಮ ನಾಟಕವು, ಧಾಂ ಧೂಂ ಸುಂಟರಗಾಳಿ, ಚಕೋರಿ, ಪೀರಭೂಪನ ಪ್ರಸಂಗ, ಗಾರ್ಬೆಜ್ ಸಿಟಿಯಲ್ಲಿ ಬೆತ್ತಲೆ ಮನುಷ್ಯ, ಸಂತೆ** – ಮುಂತಾದ ನಾಟಕಗಳನ್ನು ಈ ತಂಡ ಪ್ರದರ್ಶಿಸಿದೆ.

ಈ ತಂಡಕ್ಕಾಗಿ ಗಣಪತಿ ಹಿತ್ಲಕ್ಕೈ ಅವರೊಂದಿಗೆ ನಟರಾಜ ಹೊನ್ನವಳ್ಳಿ, ಗುರುರಾಜ ಮಾರ್ಪಳ್ಳಿ, ಪ್ರಕಾಶ ಗರುಡ, ಮಾಲತೇಶ ರಾಮದುರ್ಗ ಮುಂತಾದವರು ನಿರ್ದೇಶನ ಮಾಡಿದ್ದಾರೆ. ಗಣಪತಿ ಹಿತ್ಲಕ್ಕೈ ಅವರ ಪತ್ನಿ ಪ್ರಜ್ಞಾ ಹೆಗಡೆ ಸಹ ನೀನಾಸಂ ಕಲಾವಿದರಾಗಿದ್ದು ತಂಡದ ಏಳಿಗೆಯಲ್ಲಿ ಸಕ್ರಿಯ ಪಾತ್ರವಹಿಸುತ್ತಿದ್ದಾರೆ.

**ಕಲಾವಿದರು:** ವಿಜಯಾ ಡಿ. ನಾಯ್ಕ, ರಾಘವೇಂದ್ರ ನಾಲಿಗಾರ, ನಂದನ ಹೆಗಡೆ ಮಗೇಗಾರ, ಎಚ್.ಎಲ್. ವೇಣು, ಅಸ್ಲಂ ವಿ. ಸಿದ್ದಾಪುರ, ಶೇಷಗಿರಿ ಭಟ್ಟ ಗುಂಜಗೋಡು, ವಿನಾಯಕ ಹೆಗಡೆ ಪೇಟೆಸರ, ಗಣಪತಿ ಹೆಗಡೆ ಗುಂಜಗೋಡ, ರೇಖಾ ಹೆಗಡೆ, ಅಣ್ಣಪ್ಪ ಎಸ್, ಮಧುಕೇಶ್ವರ ಭಟ್, ಪರಮೇಶ್ವರ ಹೆಗಡೆ, ರಾಮಚಂದ್ರ ಹೆಗಡೆ, ಶರೀಫ, ಸುಬ್ರಹ್ಮಣ್ಯ ಇಳಿಮನೆ, ಶಂಕರ ಮೂರ್ತಿ ಅವರಗುಪ್ಪ, ಉಮೇಶ ನಾಯ್ಕ, ತೇಜೇಶ ನಾಯ್ಕ – ಅನೇಕ ಮಕ್ಕಳು – ಮುಂತಾದವರು.

ಸಂಗೀತ ನೆರವು – ಶ್ರೀಪಾದ ಹೆಗಡೆ ಸೋಮನಮನೆ, ಶಶಿಭೂಷಣ ಹೆಗಡೆ, ವಿನಾಯಕ ಹೆಗಡೆ, ಸುಮಂಗಲಾ ಹೆಗಡೆ, ಶ್ರೀಕಾಂತ ಹಣಜಿಬೈಲು, ರಾಜೇಂದ್ರ ಹೆಗಡೆ, ನಾಗರಾಜ ದೋಂಗ್ರೆ ಮುಂತಾದವರು.

ಸಂಪರ್ಕ ವಿಳಾಸ:
**ಶ್ರೀ ಗಣಪತಿ ಹೆಗಡೆ ಹಿತ್ಲಕ್ಕೈ**
ಗೋಳಗೋಡ, ಸಿದ್ದಾಪುರ, ಉ.ಕ. 9482187801

## 12. ರಂಗ ಸೌಗಂಧ ವಡ್ಡಿನಗದ್ದೆ, ಸಿದ್ದಾಪುರ

ಉತ್ತರಕನ್ನಡ ಜಿಲ್ಲೆಯ ಮೊದಲ ಹಾಗೂ ಕೊನೆಯ ವೃತ್ತಿ ಕಂಪನಿಯಾದ 'ಶ್ರೀ ಜಯ ಕರ್ನಾಟಕ ನಾಟಕ ಸಂಘ ಸಿದ್ದಾಪುರ' ಸ್ಥಾಪಿಸಿ ದೇಶಾದ್ಯಂತ ತಿರುಗಾಟ ನಡೆಸಿ, ತಮ್ಮ ಅಭಿನಯದಿಂದಾಗಿ ಬದುಕಿರುವಾಗಲೇ ದಂತಕತೆಯಾಗಿ, ಭಾರತದ ಮೊದಲ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದರಿಂದ ರಾಷ್ಟ್ರಪ್ರಶಸ್ತಿ ಸ್ವೀಕರಿಸಿದ ಮಹಾನ್ ನಟ ದಿ. ಹುಲಿಮನೆ ಸೀತಾರಾಮ ಶಾಸ್ತ್ರಿ ಇವರ ಮಗ ಶ್ರೀ ಶ್ರೀಧರ ಹೆಗಡೆ ಹುಲಿಮನೆ ಹಾಗೂ ಮೊಮ್ಮಗ ಗಣಪತಿ ಹೆಗಡೆ ಹುಲಿಮನೆ ಇವರ ನೇತೃತ್ವದಲ್ಲಿ ಸ್ಥಾಪನೆಗೊಂಡ ರಂಗ ತಂಡ ಇದು. ಇದೀಗ ಪೂರ್ಣಾವಧಿ ರೆಪರ್ಟರಿಯಾಗಿ ನಿಂತಿರುವ ಈ ತಂಡಕ್ಕೆ ಮಾರ್ಗದರ್ಶಕರಾಗಿ ರಾಷ್ಟ್ರೀಯ ನಾಟಕ ಶಾಲೆಯ ಪದವೀಧರರಾದ ಶ್ರೀ ಗೋಪಾಲಕೃಷ್ಣ ನಾಯರಿಯವರಿದ್ದಾರೆ.

ನಾಟಕವೊಂದನ್ನು ಸಿದ್ದಪಡಿಸಿಕೊಂಡು ತಿರುಗಾಟ ನಡೆಸುವುದು, ನಾಟಕೋತ್ಸವ ನಡೆಸುವುದು, ರಂಗ ತರಬೇತಿ ನಡೆಸುವುದು, ಮಕ್ಕಳಿಗಾಗಿ ವಿಶೇಷ ತರಬೇತಿ ಆಯೋಜನೆ ಹೀಗೆ ಹಲವು ಗುರಿಗಳನ್ನು ಹೊಂದಿದೆ. ಅದರಂತೆ ಕಾರ್ಯವೆಸಗುತ್ತ ಬಂದಿದೆ. ನಾಡಿನ ಹಲವು ಉತ್ಸವಗಳಲ್ಲಿ ಪಾಲ್ಗೊಂಡು ಪ್ರದರ್ಶನ ನೀಡಿದೆ. ರಾಷ್ಟ್ರಮಟ್ಟದ ನಾಟಕೋತ್ಸವ, ವಿಚಾರ ಸಂಕಿರಣಗಳನ್ನು ಸಂಘಟಿಸಿದೆ.

ಈವರೆಗೆ **ವರದಕ್ಷಿಣೆ, ವೀರ ಪನ್ನಾದಾಸಿ, ಮೃಚ್ಛಕಟಿಕ, ಅಂಧಕಾರ, ಶಬರ ಶಂಕರವಿಲಾಸ, ಇದುಕಾರಣ, ಬೇವಿನ ಮರದಮ್ಮ,ಮಾಯಾ ಸರೋವರ, ಅದ್ವಾನಪುರ** – ಮುಂತಾದ ಪೌರಾಣಿಕ, ಸಾಮಾಜಿಕ, ಪರಿಸರ ಕಾಳಜಿಯ ಹೀಗೆ ವಿವಿಧ ಬಗೆಯ ನಾಟಕಗಳನ್ನು ನೀಡಿದೆ.

ಮಕ್ಕಳ ಲೋಕ ಎಂಬ ಹೆಸರಿನಲ್ಲಿ ಪ್ರತಿವರ್ಷ ಮಕ್ಕಳ ರಂಗ ತರಬೇತಿ ನಡೆಸುತ್ತ ಮಕ್ಕಳ ರಂಗಭೂಮಿಯಲ್ಲಿ ವಿಶೇಷ ಸೇವೆ ಸಲ್ಲಿಸುತ್ತ ಬಂದ ಈ ತಂಡ ಇದುವರೆಗೆ ರಣ ದುಂದುಭಿ, ಸಾಕ್ಷಾತ್ಕಾರ, ಕಿತ್ತೂರ ಕೇಸರಿ, ಗುರುದಕ್ಷಿಣೆ, ಭಕ್ತಧ್ರುವ, ಗುಳಿಗೇ ಗುಮ್ಮ, ಪಂಜರದ ಗಿಳಿ, ಒಂದು ಮರದ ಕತೆ, ಕುಹೂ ಕುಹೂ ಕೋಗಿಲೆ, ಧ್ರುವತಾರೆ ಮುಂತಾದ ನಾಟಕಗಳನ್ನು ಪ್ರದರ್ಶಿಸಿದೆ.

**ಪ್ರಮುಖ ಕಲಾವಿದರು:** ಶ್ರೀಧರ ಹೆಗಡೆ ಹುಲಿಮನೆ, ಗಣಪತಿ ಹೆಗಡೆ ಹುಲಿಮನೆ, ಪ್ರಭಾಕರ ಹೆಗಡೆ ಕನ್ನಳ್ಳಿ, ರಾಜಾರಾಂ ಭಟ್ಟ ಹೆಗ್ಗಾರಳ್ಳಿ, ಗಣಪತಿ ಹೆಗಡೆ ಗುಂಜಗೋಡು, ಕೃಷ್ಣಮೂರ್ತಿ ಹೆಗಡೆ ಮುಗದೂರು, ಅಜಿತ ಭಟ್ ಹೆಗ್ಗಾರಳ್ಳಿ, ಜಯಶ್ರೀ ಹೆಗಡೆ ಹುಲಿಮನೆ, ಭರತ್ ಬಿ.ಎಚ್. ರಾಮು, ಅಂಕೋಲೇಕರ್, ರಮಾನಂದ ಹೆಗಡೆ, ಸಿಂಧೂರ ಹೆಗಡೆ, ಸಂಜ್ಞಾ ಕೊಳಗಿ, ಪ್ರಭಾ ಭಟ್ಟ ಕೊಪ್ಪ, ಪ್ರವೀಣ ಹೆಗಡೆ ಗುಂಜಗೋಡು, ಸುನೀತಾ ಹೊನ್ನೆಗುಂಡಿ, ಅಲ್ಲದೇ ಅನೇಕ ಬಾಲ ಕಲಾವಿದರೂ ಇದ್ದಾರೆ.

ಸಂಗೀತದಲ್ಲಿ ಜಯರಾಂ ಭಟ್ಟ ಹೆಗ್ಗಾರಳ್ಳಿ, ರಾಜೇಂದ್ರ ಕೊಳಗಿ, ಲತಾ ಮೊಗೇರ, ಸಂಜಯ ಬಿಳಗಿ, ನವೀನ ಸಿದ್ದಾಪುರ ಮುಂತಾದವರು ನೆರವು ನೀಡುತ್ತಿದ್ದಾರೆ.

ಸಂಪರ್ಕ ವಿಳಾಸ:
**ಶ್ರೀ ಗಣಪತಿ ಹೆಗಡೆ ಹುಲಿಮನೆ**, ನಿರ್ದೇಶಕರು,
ರಂಗ ಸೌಗಂಧ, ವಡ್ಡಿನಗದ್ದೆ, ಸಿದ್ದಾಪುರ ಉ.ಕ. 9901619325

## 13. ಕೊಂಕಣಿ ಕಲಾ ಮಂಡಳ, ಶಿರಸಿ

ಉತ್ತರಕನ್ನಡದಲ್ಲಿ ಕಳೆದ ಮೂರು ದಶಕಗಳಿಂದ ಕೊಂಕಣಿ ಮತ್ತು ಕನ್ನಡದಲ್ಲಿ ನಾಟಕಗಳನ್ನು ರಚಿಸಿ ಆಡುತ್ತ ಬಂದ ನಾಟಕಾಸಕ್ತ ಮಿತ್ರರ ಒಕ್ಕೂಟ ಇದು. ನಾಟಕಕಾರ ನಿರ್ದೇಶಕ ವಾಸುದೇವ ಶಾನಭಾಗ ಮತ್ತವರ ಸ್ನೇಹಿತರು 1998 ರಲ್ಲಿ ಈ ಸಂಸ್ಥೆ ಸ್ಥಾಪಿಸಿದರು. ಆರಂಭದಲ್ಲಿ ಕೊಂಕಣಿ ಭಾಷೆಯಯ ಕಾರ್ಯಕ್ರಮ ನೀಡುತ್ತಿದ್ದ ತಂಡ ನಂತರ ಕನ್ನಡ ಭಾಷೆಯಲ್ಲಿಯೂ ಹಲವು ನಾಟಕಗಳನ್ನು ಪ್ರದರ್ಶಿಸಿತು. ಸಂಗೀತ ವಿದೂಷಿ ಡಾ.ಶೈಲಾ ಮಂಗಳೂರು, ಜಗದೀಶ ನಾ., ನೇಪಥ್ಯ ತಜ್ಞೆ ಶ್ರೀಮತಿ ಪುತ್ತಣ್ಣ, ನೃತ್ಯ ಪಟು ವಿದೂಷಿ ವನಿತಾ ಕುಲಕರ್ಣಿ ಮುಂತಾದ ತಜ್ಞರು ಈ ತಂಡದಲ್ಲಿದ್ದಾರೆ. ಈ ತಂಡದ ನೃತ್ಯ ರೂಪಕಗಳು ನಾಡಿನ ಹಲವು ಕಡೆ ಪ್ರದರ್ಶನಗೊಂಡು ಮೆಚ್ಚುಗೆಗಳಿಸಿದೆ. ದೂರ ದರ್ಶನದಲ್ಲಿ ಪ್ರಸಾರಗೊಂಡಿದೆ. ವಾಸುದೇವ ಶಾನಭಾಗರು ರಚಿಸಿದ ಹಲವು ರೇಡಿಯೋ ನಾಟಕಗಳನ್ನು ಪ್ರಸಾರ ಮಾಡಿದೆ. ಮಕ್ಕಳಿಗಾಗಿ ಹಲವು ನಾಟಕಗಳನ್ನು ಪ್ರದರ್ಶಿಸಿದೆ.

**ಪ್ರದರ್ಶಿಸಿದ ನಾಟಕಗಳು:** ಕತ್ತಲೆಯಿಂದ ಬೆಳಕಿನೆಡೆಗೆ, ಅನಿರೀಕ್ಷಿತ, ಸುಯೋದನ, ಪ್ರತಿಕಾರ, ಆದರ್ಶ, ಯಮಲೋಕದಲ್ಲಿ ಮಾನವರು,ಪಂಜರಶಾಲೆ ಇತ್ಯಾದಿ.

ಸಂಪರ್ಕ ವಿಳಾಸ:
**ವಾಸುದೇವ ಶಾನಭಾಗ**
ಕೊಂಕಣಿ ಕಲಾ ಮಂಡಳ, ಜಯನಗರ
ಟಿ.ಎಸ್.ಎಸ್. ರಸ್ತೆ, ಶಿರಸಿ ಉ.ಕ.

## 14. ಅಂಕ ಸಂಸಾರ

ಉತ್ತರಕನ್ನಡ ಜಿಲ್ಲೆಯ ತಾಲೂಕಿನ ಗ್ರಾಮೀಣ ಕಲಾವಿದರನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಸಂಘಟನೆ 2000ನೇ ಸಾಲಿನಲ್ಲಿ ಉದ್ಘಾಟನೆಗೊಂಡಿತು. ನೀನಾಸಂ ಪದವೀಧರ ರಮಾನಂದ ಐನಕೈ ಇದರ ಸಂಸ್ಥಾಪಕರು. ತಂಡದಲ್ಲಿ ಕೃಷಿಕರು, ನ್ಯಾಯವಾದಿಗಳು, ಪತ್ರಕರ್ತರು, ಉದ್ಯಮಿಗಳು ಹೀಗೆ ಬೇರೆ ಬೇರೆ ವೃತ್ತಿಯ ಕಲಾವಿದರಿದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ 150ಕ್ಕೂ ಹೆಚ್ಚಿನ ವೈವಿಧ್ಯಮಯ ಕಾರ್ಯಕ್ರಮ ಸಂಘಟಿಸಿದ ಈ ಸಂಸ್ಥೆ ನಾಟಕೋತ್ಸವ, ಸಂಗೀತ ಸಮ್ಮೇಳನ, ಶಿಬಿರಗಳು, ಮಕ್ಕಳ ರಂಗ ತರಬೇತಿ ಮುಂತಾದವನ್ನು ನಡೆಸಿದೆ. ರಮಾನಂದ ಐನಕೈ ನಿರ್ದೇಶನದಲ್ಲಿ ಉದ್ಭವ, ಸಾಯೋ ಆಟ, ಕುಬಿ ಮತ್ತು ಇಯಾಲ, ದೆವ್ವದ ಕಾಟ, ಪ್ರಶಸ್ತಿ ಪ್ರದಾನ ಮುಂತಾದ ನಾಟಕಗಳನ್ನು ಪ್ರದರ್ಶಿಸಿದೆ. ನಾಡಿನ ಹಲವು ಕಡೆ ಈ ತಂಡ ಪ್ರದರ್ಶನ ನೀಡಿದೆ. ಕಳೆದ ವರ್ಷದಿಂದ ರೆಪರ್ಟರಿ ಆರಂಭಿಸಿ 'ಅಂಧಯುಗ'ನಾಟಕವನ್ನು ನಾಡಿನಾದ್ಯಂತ ಹಾಗೂ ನಾಡಿನ ಹೊರಗೂ ಪ್ರದರ್ಶಿಸಿದೆ.

**ಕಲಾವಿದರು:** ಅನಂತ ಭಟ್ ಹುಳಗೋಳ, ಸದಾನಂದ ಭಟ್ ನಿಡಗೋಡು, ನಾಗರಾಜ ಜೋಶಿ, ಸತೀಶ ಹೆಗಡೆ, ಸುರೇಶ್ಚಂದ್ರ ಹೆಗಡೆ, ಗಿರಿಧರ ಕಬ್ನಳ್ಳಿ, ಉಷಾ ಐನಕೈ, ಪರಾಶರ ಐನಕೈ, ಮಿತಾಕ್ಷರ ಐನಕೈ, ಶಂಭು ಹೆಗಡೆ ಸೋಮನಹಳ್ಳಿ, ರಾಘವ ಹೆಗಡೆ ಕಾರಗದ್ದೆ.

ಸಂಪರ್ಕ ವಿಳಾಸ:
**ರಮಾನಂದ ಐನಕೈ ಅಂಕ ಸಂಸಾರ,**
ಯಕ್ಷಸೃಷ್ಟಿ, ತಾರಗೋಡು, ಶಿರಸಿ ಉ.ಕ.

## 15. ಮಿಯಾರ್ಡ್ಸ್ ಮೇದಿನಿ ರಂಗ ಅಧ್ಯಯನ ಕೇಂದ್ರ

ಕೆ.ಆರ್.ಪ್ರಕಾಶರ ನೇತೃತ್ವದಲ್ಲಿ ಹುಟ್ಟಿಕೊಂಡ ಈ ತಂಡ ಪ್ರಕಾಶರ ಪರಿಸರ ರಂಗಭೂಮಿಯ ಪರಿಕಲ್ಪನೆಯನ್ನು ಮುಂದುವರಿಸಿ ಅನೇಕ ವಿಶಿಷ್ಟಪ್ರಯೋಗಮಾಡಿದೆ. ಬದುಕು ಜಟಕಾಬಂಡಿ ನಾಟಕವನ್ನು ಕಂದಕದಲ್ಲಿ ಪ್ರಯೋಗಿಸಿದರೆ, ಯಲ್ಲಾಪುರದ ಅಜ್ಜಿಗುಂಡಿ ಜಲಪಾತದಲ್ಲಿ ಅಜ್ಜಿಗುಂಡಿ.ಕಾಮ್ ಎಂಬ ನಾಟಕವನ್ನು , ನೆಲಬಾವಿಯಲ್ಲಿ 'ಒಂದು ಬಾವಿಯ ಕತೆ' ನಾಟಕವನ್ನೂ, ಷೇರ್ ಮಾರುಕಟ್ಟೆಯಲ್ಲಿ ಗಂಗೆ ನಾಟಕವನ್ನು ಶಾಲ್ಮಲಾ ನದಿಯಲ್ಲಿ ಪ್ರದರ್ಶಿಸಿದೆ. 'ಅಜ್ಜಿಗುಂಡಿ. ಕಾಮ್' ನಾಟಕ ಜಲಪಾತದಲ್ಲಿಯೇ ಪ್ರಯೋಗಗೊಂಡು 'ಲಿಮ್ಕಾ ಬುಕ್ ಆಫ್ ರೆಕಾರ್ಡ್' ಸೇರಿ ದಾಖಲೆ ಸೃಷ್ಟಿಸಿದೆ.

**16. ಸಂಹತಿ ಟ್ರಸ್ಟ್, ಮಂಚಿಕೇರಿ**

2006ರಲ್ಲಿ ಆರಂಭಗೊಂಡ ಈ ಸಂಘಟನೆ ಜಿಲ್ಲೆಯ ಹವ್ಯಾಸಿ ರಂಗತಂಡಗಳಿಗೊಂದು ಹೊಸ ಸೇರ್ಪಡೆ. ವರ್ಷಕ್ಕೊಂದು ನಾಟಕ ಸಿದ್ಧಪಡಿಸಿ ಪ್ರದರ್ಶನ ನೀಡುತ್ತ ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಕ್ರಮ ಸಂಘಟಿಸುತ್ತ ಬಂದ ಈ ತಂಡದ ಪ್ರಮುಖ ಪ್ರಯೋಗಗಳು – 'ಸತ್ತವರ ನೆರಳು', 'ಸಾಹೇಬರು ಬರುತ್ತಾರೆ', 'ಬಕ', 'ಬೆಪ್ಪುತಕ್ಕಡಿ ಬೋಳೆ ಶಂಕರ', 'ಇಳೆ ಎಂಬ ಕನಸು' ನಾಟಕಗಳನ್ನು ಪ್ರದರ್ಶಿಸಿದೆ.

**ಸಂಸ್ಥೆಯ ಕಲಾವಿದರು:** ವಾಸುಕಿ ಹೆಗಡೆ, ವೆಂಕಟರಮಣ ಹೆಗಡೆ, ಗಣಪತಿ ಭಟ್, ನವೀನ ಹೆಗಡೆ, ರಾಜು ಹೆಗಡೆ, ಸುಬೋಧ ಹೆಗಡೆ, ಗಣಪತಿ ಶಾಸ್ತ್ರಿ, ರಾಮಕೃಷ್ಣ ಹೆಗಡೆ, ನಾಗೇಂದ್ರ ಹೆಗಡೆ, ವಾಣಿ ಹೆಗಡೆ, ಶಾಂತಾರಾಮ ಹೆಗಡೆ.

ಸಂಪರ್ಕ ವಿಳಾಸ :
**ನವೀನ ಆರ್. ಹೆಗಡೆ**
ಬೆದೆಹಕ್ಲ, ಹಾಸಣಗಿ, ಯಲ್ಲಾಪುರ
ಉ.ಕ. 9449786058

**17. ಸಿದ್ದಿ ಟ್ರಸ್ಟ್ ದೇವರ, ಕಲ್ಲಳ್ಳಿ**

ಸಿದ್ದಿ ಜನಾಂಗದ ಸಾಂಸ್ಕೃತಿಕ ವೇದಿಕೆ ಇದು. ಈ ವರೆಗೆ ಕೋಟೆಮನೆ, ಪೋಲೀಸ್ ಸ್ಟೇಷನ್, ಚೋರ ಚರಣದಾಸ, ಮೂರು ಕಾಸಿನ ಸಂಗೀತ ನಾಟಕ ಈ ನಾಟಕಗಳನ್ನು ಪ್ರದರ್ಶಿಸುತ್ತಿದೆ.

ಪ್ರತಿವರ್ಷ 'ಕುಣಿಯೋಣು ಬಾರಾ' ಎಂಬ ಬೇಸಿಗೆ ಶಿಬಿರವನ್ನು ಆಯೋಜಿಸಿ ಮಕ್ಕಳ ನಾಟಕಗಳನ್ನು ಪ್ರದರ್ಶಿಸುತ್ತಿದೆ.

**18. ಗುರು ಬಳಗ, ಮಳಗಿ**

2006ರಲ್ಲಿ ಹುಟ್ಟಿಕೊಂಡ ಅಪರೂಪದ ಸಂಘಟನೆ ಇದು. ಮಕ್ಕಳನ್ನು ಪ್ರೀತಿಸುವ ಶಿಕ್ಷಕರು, ಶೈಕ್ಷಣಿಕ ಚಟುವಟಿಕೆಯೊಂದಿಗೆ ಸಾಮಾಜಿಕ ಜವಾಬ್ದಾರಿಯನ್ನೂ ನಿರ್ವಹಿಸಲು ಕಟ್ಟಿಕೊಂಡ ವೇದಿಕೆ. ಇದರ ಧ್ಯೇಯ ವಾಕ್ಯ 'ಮಕ್ಕಳೆಮಗೆ ಬದುಕು' ಕ್ರಿಯಾಶೀಲ ಶಿಕ್ಷಕ ನಾರಾಯಣ ಭಾಗ್ವತ್ ಮತ್ತು ಅವರ ಸ್ನೇಹಿತರು ಸೇರಿ ಈ ತಂಡ ಕಟ್ಟಿದ್ದಾರೆ. ಮಳಗಿ ಸುತ್ತಮುತ್ತಲಿನ ಶಾಲೆಯ ಮಕ್ಕಳನ್ನು ಸೇರಿಸಿ ರಂಗ ತರಬೇತಿ ನಡೆಸಿದ್ದಾರೆ. ಪಾಠ ನಾಟಕಗಳನ್ನು ಪ್ರಯೋಗಿಸಿದ್ದಾರೆ. ಕಲಾ ಶಿಕ್ಷಣದ ತರಬೇತಿ ನಡೆಸಿದ್ದಾರೆ.

ಇದುವರೆಗೆ **ಕಾಗೆ – ನರಿ, ಮೊದಲು ಕೆಲಸ ಮಾಡುವೆ, ಜಾಣಕೋಳಿ, ಮುದುಕನೂ ಹುಲಿಯೂ, ನಕ್ಕಳಾ ರಾಜ ಕುಮಾರಿ, ಅಜ್ಜಿ ಕತೆ, ರಾಣಿ ಅಬ್ಬಕ್ಕ, ಜಾಣ ಮೊಲ, ನ್ಯಾಯದ ಬಾಗಿಲಲ್ಲಿ** ನಾಟಕಗಳ ಪ್ರದರ್ಶನ ಮಾಡಿದ್ದಾರೆ.

ಪ್ರದೀಪ ಕುಲಕರ್ಣಿ, ಪಿ.ಎಸ್. ಚಲವಾದಿ, ಸುರೇಶ ನಾಯ್ಕ, ರಾಮಚಂದ್ರ ಚಿತ್ರಗಾರ ಇವರೆಲ್ಲ ನಾರಾಯಣ ಭಾಗವತರೊಂದಿಗೆ ರಂಗ ಕರ್ಮದಲ್ಲಿ ತೊಡಗಿದ್ದಾರೆ.

ಸಂಪರ್ಕ ವಿಳಾಸ:
**ನಾರಾಯಣ ಭಾಗ್ವತ**
ಸರ್ಕಾರಿ ಕಿರಿಯ ಮಹಾವಿದ್ಯಾಲಯ ಮಳಗಿ
ಮುಂಡಗೋಡು, ಉ.ಕ.

**19. ಸಹ್ಯಾದ್ರಿ ಕಲಾತಂಡ, ಜೊಯ್ಡಾ**

2006ರಲ್ಲಿ ಈ ತಂಡ ಆರಂಭಗೊಂಡಿತು. ಅರಣ್ಯ ತಾಲೂಕಾದ ಜೊಯ್ಡಾದಲ್ಲಿ ಸಂಪರ್ಕಗಳೇ ಕಷ್ಟವಾಗಿರುವ ಹೊತ್ತಿನಲ್ಲಿ ಈ ತಂಡ ಅನೇಕ ಬೀದಿ ನಾಟಕಗಳನ್ನು ಪ್ರದರ್ಶಿಸಿದೆ. ಪ್ರಮುಖವಾಗಿ ಪರಿಸರ ಪ್ರಜ್ಞೆಯನ್ನು ಜನರಲ್ಲಿ ಬೆಳೆಸುವ ನಾಟಕಗಳನ್ನು ಜಿಲ್ಲೆಯಲ್ಲಿ ಮಾತ್ರವಲ್ಲದೇ ನಾಗರಬಾವಿ, ಮೈಸೂರು ಮುಂತಾದ ಕಡೆ ಪ್ರದರ್ಶಿಸಿದೆ.

ಸಂಪರ್ಕ ವಿಳಾಸ:
**ನರಸಿಂಹ ಚಾಪಖಂಡ,** ಜೊಯ್ಡಾ ಉ.ಕ.

**20. ಸಿದ್ದರಾಜ ಕಲಾತಂಡ, ಡೇರಿಯಾ ಜೊಯ್ಡಾ**

ಘನಶ್ಯಾಮ ಡೇರೇಕರ್ ನೇತೃತ್ವದಲ್ಲಿ ಕಾರ್ಯಾರಂಭ ಮಾಡಿರುವ ಈ ತಂಡ ಹುಟ್ಟಿದ್ದು 2006 ರಲ್ಲಿ. ಬೀದಿ ನಾಟಕಗಳನ್ನು ತನ್ನ ಅಭಿವ್ಯಕ್ತಿಯ ಮುಖ್ಯ ಮಾಧ್ಯಮವನ್ನಾಗಿಸಿಕೊಂಡ ಈ ತಂಡ ಅರಣ್ಯ ಇಲಾಖೆಯ ಜತೆ ಕೈಗೂಡಿಸಿ ಹಲವು ಕಾರ್ಯಕ್ರಮ ಸಂಘಟಿಸಿದೆ.

ಸಂಪರ್ಕ ವಿಳಾಸ:
**ಘನಶ್ಯಾಮ ಡೇರೇಕರ್**
ಡೇರಿಯಾ, ಜೊಯ್ಡಾ, ಉ.ಕ.

## 21. ಚಿಂತನ ರಂಗ ಅಧ್ಯಯನ ಕೇಂದ್ರ, ಉತ್ತರಕನ್ನಡ

ನಾಡಿನಲ್ಲೆಲ್ಲ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ, ಪುಸ್ತಕ ಚಳುವಳಿಯ ಮೂಲಕ ಗುರುತಿಸಿಕೊಂಡ ಚಿಂತನ ಉತ್ತರಕನ್ನಡ ಇದರ ಅಂಗ ಸಂಸ್ಥೆ ಇದು. ಆರೋಗ್ಯಕರ ಸಮಾಜದ ಆಶಯಗಳನ್ನು ರಂಗಭೂಮಿಯ ಮೂಲಕ ಸಾಧಿಸುವ ಆಶಯ ಈ ಕೇಂದ್ರಕ್ಕಿದೆ. ರಂಗಭೂಮಿಗೆ ಸಂಬಂಧಿಸಿದ ತಾತ್ವಿಕ ಚಿಂತನೆಗಳನ್ನು ನಡೆಸುತ್ತಲೇ ಪ್ರಯೋಗಗಳ ಮೂಲಕ ಅವುಗಳನ್ನು ಗಟ್ಟಿಗೊಳಿಸುವ ಪ್ರಯತ್ನಗಳನ್ನು ತಂಡ ನಡೆಸುತ್ತದೆ. ಇದಕ್ಕಾಗಿ ಮಕ್ಕಳಿಗೆ, ಕಾಲೇಜು ವಿದ್ಯಾರ್ಥಿಗಳಿಗೆ, ನೌಕರರಿಗೆ, ಶಿಕ್ಷಕರಿಗೆ, ಅಂಗನವಾಡಿ ಕಾರ್ಯಕರ್ತರಿಗೆ ಹೀಗೆ ಬೇರೆ ಬೇರೆ ಸ್ತರದ ಸಮುದಾಯದವರಿಗೆ ರಂಗ ತರಬೇತಿ ನಡೆಸಿದೆ. ವಿವಿಧ ಸಂದರ್ಭಗಳಲ್ಲಿ – ಅಸ್ಪೃಶ್ಯತೆ, ಜನಜಾಗೃತಿ, ವಿಜ್ಞಾನ ವರ್ಷಾಚರಣೆ, ಸಾಹಿತ್ಯ ಸಮ್ಮೇಳನಕ್ಕೆ ಕರೆ, ಅಕ್ಷರ ಆಂದೋಲನ, – ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ಬೀದಿ ನಾಟಕಗಳನ್ನು ಪ್ರಯೋಗಿಸಿದೆ. ರಂಗೋತ್ಸವಗಳನ್ನು ಆಯೋಜಿಸಿದೆ. ರಾಜ್ಯ, ರಾಷ್ಟ್ರಮಟ್ಟದ ವಿಚಾರ ಸಂಕೀರಣಗಳನ್ನು ಸಂಘಟಿಸಿದೆ. ಉತ್ತರ ಕನ್ನಡ ಜಿಲ್ಲೆಯ ರಂಗಭೂಮಿಯ ದಾಖಲೆಗಳನ್ನು ಸಿದ್ಧಪಡಿಸಿದೆ.

ರಂಗ ಮುಖೇನ ಶಿಕ್ಷಣಕ್ಕೆ ಒತ್ತು ನೀಡುತ್ತ ಬಂದ ಸಂಸ್ಥೆಯ ಸದಸ್ಯರು ಸುಮಾರು 20 ವರ್ಷಗಳ ರಂಗಾನುಭವವನ್ನು ಬಳಸಿ ಚಿಂತನ ಮಕ್ಕಳ ನಾಟಕ ರೆಪರ್ಟರಿ ಪ್ರಾರಂಭಿಸಿದ್ದಾರೆ. 2003ರಲ್ಲಿ ಅಧಿಕೃತ ರಂಗ ತಿರುಗಾಟ ಆರಂಭಿಸಿ ಪಾಠ ನಾಟಕಗಳನ್ನು ಜಿಲ್ಲೆಯ 100 ಕಡೆ ಶಾಲೆಗಳಲ್ಲಿ ಪ್ರಯೋಗಿಸಿದ್ದಲ್ಲದೇ ಮುಂದೆ ವರ್ಷಕ್ಕೊಂದು ನಾಟಕ ತಯಾರಿಸಿ ಜಿಲ್ಲೆ ಹಾಗೂ ರಾಜ್ಯದ ಹಲವು ಕಡೆ ಪ್ರದರ್ಶಿಸಿದೆ. ರಂಗಾಯಣ ಸ್ವಿಡಿಷ್ ಯೋಜನೆಯಲ್ಲಿ ಪಾಲ್ಗೊಂಡು ಹಲವು ರಂಗ ಚಟುವಟಿಕೆಗಳನ್ನು ಸಂಘಟಿಸಿದೆ. 20 ವರ್ಷಗಳ ಕಾಲ ಮಕ್ಕಳಿಗಾಗಿ ಬೇಸಿಗೆ ಶಿಬಿರ ಏರ್ಪಡಿಸಿದೆ.

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಜಶ್ನೆ ಬಚಪನ್ ಉತ್ಸವದಲ್ಲಿ ಮಕ್ಕಳರವೀಂದ್ರ ನಾಟಕ ಪ್ರದರ್ಶಿಸಿದ್ದಾರೆ.

**ಪ್ರಯೋಗಿಸಿದ ಪ್ರಮುಖ ನಾಟಕಗಳು:**

- ಬೀದಿ ನಾಟಕ ಜಾಥಾಗಳಲ್ಲಿ – ನೀರ ಹಕ್ಕು, ಕೆರೆ ಉಳಿಸಿ, ಮಕ್ಕಳಿವರೇನಮ್ಮ ಬಲಿ, ಉತ್ತರಕಾಣದ ಕನ್ನಡ, ಕೆರೆ ಉಳಿಸಿ, ಉತ್ತರ ದಿಕ್ಕಿನ ರಾಣಿ, ಹೀಗೊಂದು ಅತ್ಯಾಚಾರ, ಬಿದಿರು, ಬದುಕಿಗೆ ಬೆಳಕು ಇತ್ಯಾದಿ
- ರೆಪರ್ಟರಿಗಾಗಿ – ಪಾಠ ನಾಟಕಗಳು, ತುಟಿ ಉಬ್ಬಿಸಿ ಶಿಳ್ಳೆಹಾಕು, ಖರೇ ಚರಣದಾಸ ಎಂಬ ಕಳ್ಳ, ರಂಗಿನಾಟ, ಪಾಪು ಬಾಪು ಆದ ಕಥೆ, ಬೆಳಕು ಹಂಚಿದ ಬಾಲಕ, ಬೆಳಕಿನೆಡೆಗೆ, ಮಕ್ಕಳ ರವೀಂದ್ರ
- ದೊಡ್ಡವರಿಗಾಗಿ – ಯಾನ, ಊರ್ಮಿಳಾ, ಗೋಸುಂಬೆ ಇತ್ಯಾದಿ

**ಕಲಾವಿದರು:** ಅನಂತ ನಾಯ್ಕ, ದಾಮೋದರ ನಾಯ್ಕ, ಸಂತೋಷ ನಾಯ್ಕ, ಸುಬ್ರಮಣ್ಯ ನಾಯ್ಕ, ಗೋಪಾಲ ಹಳ್ಳೇರ, ಆರ್.ಕೆ. ರವಿಕುಮಾರ, ಶ್ರೀನಿವಾಸ ನಾಯ್ಕ, ಪ್ರಶಾಂತ ಭಂಡಾರಿ, ಪದ್ಮಾ ಗೌಡ, ಸಂತೋಷ ಆಚಾರಿ, ರಾಜು ಪಾಟೀಲ, ಮಂಜು ಚಾಂದ್ರಾಣಿ, ದೀಪಾ ನಾಯ್ಕ, ರಾಧಾ ಮಡಿವಾಳ, ಜಿ.ಟಿ. ಹಳ್ಳೇರ, ನಾಗವೇಣಿ ಮೇಸ್ತ, ಶಂಕರ ಗೌಡ, ಎನ್.ಕೆ. ಭಟ್, ನಯನ ಚಾಂದ್ರಾಣಿ, ಶೀತಲ ಭಟ್, ಶ್ರವಣ ಭಟ್, ಮಂಜು ಕಡ್ಲೆ, ಮಂಜು ಮತದಕೇರಿ, ನಹುಷ ಶರ್ಮ, ನಾರಾಯಣ ಹೆಗಡೆ, ಭಾಸ್ಕರ ನಾಯ್ಕ, ಕುಮಾರಿ ಸೀಮಾ ಹೆಗಡೆ, ಚಂದನಾ ಹೆಗಡೆ, ಚಿನ್ಮಯ ಹೆಗಡೆ, ನಾಗೇಂದ್ರ ಹೆಗಡೆ, ನವಮಿ ಭಟ್, ಸೌಭಾಗ್ಯ ಭಟ್, ಸೂರಜ ಪೋರಿಗಡಗಾರ, ಎಂ. ಸಂದೇಶ, ವಿದ್ಯಾಧರ ನಾಯ್ಕ, ರಾಮಚಂದ್ರ ನಾಯ್ಕ, ನೇತ್ರ ಪೂಜಾರಿ,

ತಂಡದ ಮ್ಯಾನೇಜರ್ ಮತ್ತು ರಂಗ ಸಜ್ಜಿಕೆ: ದಾಮೋದರ ನಾಯ್ಕ ಹೊನ್ನಾವರ
ಸಂಗೀತ; ಡಾ. ಶ್ರೀಪಾದ ಭಟ್, ಸತ್ಯನಾರಾಯಣ ನಾಯ್ಕ, ವಿಶ್ವನಾಥ ಗೋಡೆಮಕ್ಕಿ
ತಾಂತ್ರಿಕ ಸಹಾಯ: ಚಂದ್ರು ಉಡುಪಿ ಶಿರಸಿ, ಮಂಜು ಚಾಂದ್ರಾಣಿ
ವಿನ್ಯಾಸ – ನಿರ್ದೇಶನ : ಕಿರಣ ಭಟ್ ಮತ್ತು ಡಾ. ಶ್ರೀಪಾದ ಭಟ್

ಸಂಪರ್ಕ ವಿಳಾಸ :
**ಡಾ. ವಿಠ್ಠಲ ಭಂಡಾರಿ**
ಅಧ್ಯಕ್ಷರು, ಉಪನ್ಯಾಸಕರು
ಎಂ.ಜಿ.ಸಿ. ಕಾಲೇಜು
ಸಿದ್ದಾಪುರ, ಉ.ಕ. 9008520205

## 22. ಸಂಗಾತಿ ರಂಗಭೂಮಿ, ಅಂಕೋಲಾ

ಈ ಸಾಂಸ್ಕೃತಿಕ ಸಂಸ್ಥೆಯು ಕಳೆದ 10 ವರ್ಷಗಳಿಂದ ಸಾಂಸ್ಕೃತಿಕ ಮತ್ತು ಸಮಾಜಿಕ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾ ಬಂದಿರುತ್ತದೆ. ರಂಗ ತರಬೇತಿಯ ಜತೆ ಆಧುನಿಕ ಶೈಲಿಯ ನೃತ್ಯ, ಭರತನಾಟ್ಯ, ಯಕ್ಷಗಾನ, ಸಂಗೀತ , ಚಿತ್ರಕಲೆ , ಹೀಗೆ ವಿವಿಧ ತರಬೇತಿಗಳನ್ನೂ ನೀಡುತ್ತ ಪ್ರತಿ ವರ್ಷ 250 – 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಇದರ ಪ್ರಯೋಜನ ನೀಡಿದೆ. 2010ರಲ್ಲಿ ಮತ್ತು 2013ರಲ್ಲಿ ವಿಶೇಷ ರಂಗಶಿಬಿರ ಸಂಯೋಜಿಸಿ ಮಕ್ಕಳಿಂದಲೂ, ದೊಡ್ಡವರಿಂದಲೂ ನಟಕ ಪ್ರಯೋಗ ಸಿದ್ದಪಡಿಸಿ ಹಲವುಕಡೆ ಪ್ರದರ್ಶಿಸಿದೆ.

ಪಿ. ಲಂಕೇಶರ 80ನೇ ವರ್ಷದ ಆಚರಣೆ ಅಂಗವಾಗಿ ಲಂಕೇಶರ "ಕ್ರಾಂತಿ ಬಂತು, ಕ್ರಾಂತಿ" ಎಂಬ ನಾಟಕವನ್ನು ಕೆ.ರಮೇಶರ ನಿರ್ಮಾಣದಲ್ಲಿ, ಉಮೇಶ ಪಟೀಲರ ನಿರ್ದೇಶನದಲ್ಲಿ ಸಿದ್ದಪಡಿಸಿ ಅಗಷ್ಟ 9 2014 ರಂದು ಉದ್ಘಾಟಿಸಿ ರಾಜ್ಯದ

25 ಕ್ಕೂ ಹೆಚ್ಚು ಜಿಲ್ಲೆಯಲ್ಲಿ 80 ಪ್ರದರ್ಶನ ನೀಡಲಾಗಿದೆ. 80ನೇ ಪ್ರದರ್ಶನ ಲಂಕೇಶ ಅವರ 80 ನೇ ವರ್ಷಾಚರಣೆ ದಿನವಾದ ಮಾರ್ಚ 8ರಂದು ಬೆಂಗಳೂರಿನಲ್ಲಿ ಪ್ರದರ್ಶನ ನೀಡಿರುತ್ತದೆ.

ಅರಣ್ಯ ಇಲಾಖೆ, ಜಲಾನಯನ ಇಲಾಖೆ, ಆರೋಗ್ಯ ಇಲಾಖೆ, ತಾಲೂಕ ಪಂಚಾಯತ ಆಯೋಜನೆಯಡಿಯಲ್ಲಿ ಪರಿಸರ ಆಂದೋಲನ, ಸ್ವಚ್ಛತಾ ಆಂದೋಲನ, ಸಾಕ್ಷರತಾ ಆಂದೋಲನ, ನೀರಿನ ಸದ್ಬಳಕೆ ಜಾಗೃತಿ, ಸಾರಾಯಿ ಮತ್ತು ಇನ್ನಿತರ ದುಶ್ಚಟ ವಿರೋಧಿ ಬೀದಿ ನಾಟಕಗಳನ್ನು ಪ್ರದರ್ಶಿಸಿರುತ್ತದೆ. ಕರ್ನಾಟಕ ನಟಕ ಅಕಾಡೆಮಿಯ ಸಹಯೋಗದಲ್ಲಿ 2016ರ ವಿಶ್ವರಂಗಭೂಮಿಯನ್ನೂ ಸಂಘಟಿಸಿದೆ.

ಸಂಪರ್ಕ ವಿಳಾಸ:
**ಕೆ. ರಮೇಶ ಅಂಕೋಲಾ**
ಪತ್ರಕರ್ತರು, ಕಾರ್ಯಾಧ್ಯಕ್ಷರು ಸಂಗಾತಿ
ರಂಗಭೂಮಿ, ಅಂಕೋಲಾ
ಮೋ: 9902043452

## 23. ಶ್ರೀ ಗುರು ಜಿಲ್ಲಾ ರಂಗಭೂಮಿ ಕಲಾವಿದರ ವೇದಿಕೆ, ಉತ್ತರಕನ್ನಡ

ಅಳಿದು ಹೋಗುತ್ತಿರುವ ಕಂಪನಿ ನಾಟಕಗಳ ಮಾದರಿಯನ್ನು ಕಾಪಿಟ್ಟುಕೊಳ್ಳುತ್ತ, ಉತ್ತರಕನ್ನಡದಾದ್ಯಂತ ಹಂಚಿಹೋಗಿರುವ ಇಂತಹ ಕಲಾ ಸಂಸ್ಥೆಗಳನ್ನು ಒಂದೇ ವೇದಿಕೆಯಡಿತಂದು ದಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಸಂಘಟಿಸುತ್ತ ಬಂದ ವೇದಿಕೆ ಇದು. ಉತ್ತರ ಕನ್ನಡದ ಎಲ್ಲ ತಾಲೂಕುಗಳಲ್ಲಿಯೂ ಅಧಿಕೃತ ಶಾಖೆಗಳನ್ನು ತೆರೆದು ಅದರ ಮೂಲಕ ಕಲಾವಿದರನ್ನು ಒಟ್ಟುಗೂಡಿಸುವ ಪ್ರಯತ್ನವೂ ಸಾಗಿದೆ. ಈಲ್ಲಾ ರಂಗಭೂಮಿಯ ಇತಿಹಾಸವನ್ನು ಸಂಕಲಿಸುವ ಕೆಲಸಕ್ಕೂ ಮುಂದಾಗಿದೆ. ಹಲವು ಸಾಮಾಜಿಕ ನಾಟಕಗಳ ಡಿ.ವಿ.ಡಿ.ಗಳನ್ನೂ ಹೊರತಂದಿದೆ.

ಸಂಪರ್ಕವಿಳಾಸ:
**ಜಯರಾಮಭಟ್**
ಅಧ್ಯಕ್ಷರು ಮತ್ತು ದಿಲೀಪ ದೊಡ್ಮನಿ ಕಾರ್ಯದರ್ಶಿಗಳು
ಶ್ರೀಗುರು ಜಿಲ್ಲಾ ಕಲಾವಿದರ ವೆದಿಕೆ, ಯಲ್ಲಾಪುರ, ಉತ್ತರಕನ್ನಡ

**ಕೆ.ಆರ್.ಪ್ರಕಾಶ ರಂಗ ಪ್ರಶಸ್ತಿ:** ನದಿ, ಹಳ್ಳ, ಜಲಪಾತ, ಸಮುದ್ರ, ಸ್ಮಶಾನ, ಪ್ರಪಾತ, ಬಾವಿ, ಕಂದಕ, ಮರ, ಕೆರೆ, ಗುಹೆ ಹೀಗೇ ನಿಸರ್ಗರಂಗಭೂಮಿ ಪರಿಕಲ್ಪನೆ, ಏಕೈಕವ್ಯಕ್ತಿ ಪ್ರಯೋಗ ಕಲ್ಪನೆ,ಮಕ್ಕಳನಾಟಕ,ಬೀದಿನಾಟಕ ಹೀಗೆ ವಿವಿಧ ವಿಭಾಗಗಳಲ್ಲಿ ರಂಗಪ್ರಯೋಗಗಳನ್ನು 33 ವರ್ಷಗಳಿಂದಲೂ ನಡೆಸುತ್ತಲೇ ಬಂದಿರುವ ಕೆ.ಆರ್.ಪ್ರಕಾಶರ ಹೆಸರಿನಲ್ಲಿ ಮಿಯಾರ್ಡ್ಸ್ ಮೇದಿನಿ ರಂಗ ಅಧ್ಯಯನ ಕೇಂದ್ರ ಹಾಗೂ ಮತ್ತಿಘಟ್ಟ ರಂಗ ಬಳಗ 2008ರಿಂದ ಆರಂಭಿಸಿದ 'ಕೆ.ಆರ್.ಪ್ರಕಾಶ ರಂಗ ಪ್ರಶಸ್ತಿ' ಉತ್ತರಕನ್ನಡದಲ್ಲಿ ನೀಡಲಾಗುತ್ತಿದ್ದು ಇದುವರೆಗೆ ಶ್ರೀ ನಾಗರಾಜ ಕೋಟೆ, ಶ್ರೀ ದಿವಾಕರ ಹೆಗಡೆ ಕೆರೆಹೊಂಡ, ಸಿ.ಬಸವಲಿಂಗಯ್ಯ, ಲಕ್ಷ್ಮೀ ಚಂದ್ರಶೇಖರ, ಮಂಡ್ಯರಮೇಶ, ಡಿ.ಎಸ್.ಚೌಗಲೆ, ಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆ ಮುಂತಾದವರಿಗೆ ಈ ಪ್ರಶಸ್ತಿಗಳು ಲಭಿಸಿವೆ.

ಸಂಪರ್ಕ ವಿಳಾಸ:
**ಕೆ.ಆರ್.ಪ್ರಕಾಶ**
ಮೇದಿನಿ ರಂಗ ಅಧ್ಯಯನ ಕೇಂದ್ರ
ಶಿರಸಿ, ಉ.ಕ.

## 24. 'ವಾರಿಧಿ' ಕುಮಟ

ನೀನಾಸಂ ಪದವೀಧರರಾದ ಶ್ರೀಕಾಂತ ಕುಮಟಾ ನೇತೃತ್ವದಲ್ಲಿ ಸಂಘಟಿತಗೊಂಡ ಈ ಸಂಘಟನೆ 2010ರಲ್ಲಿ ಉದ್ಘಾಟನೆಗೊಂಡು ಪ್ರತಿವರ್ಷ ಮಕ್ಕಳ ರಂಗತರಬೇತಿ, ಕಾಲೇಜು ರಂಗ ತರಬೇತಿಗಳನ್ನು ನಡೆಸುತ್ತ ಬರುತ್ತಿದೆ. ಅಂಧೇರನಗರಿ, ಪುಣ್ಯಕೋಟಿ, ಪಂಜರಶಾಲೆ, ಕಿಂದರಜೋಗಿ, ನಿಧಿಯ ರಹಸ್ಯ ಮುಂತಾದ ಮಕ್ಕಳ ನಾಟಕಗಳನ್ನಲ್ಲದೇ ಯುವಕರಿಗಾಗಿ ಕಾಕನಕೋಟೆ, ನ್ಯಾಯದಬಾಗಿಲಲ್ಲಿ, ದಲಿತಲೋಕ, ಗಾಳಕ್ಕೆಬೀಳದ ಕೊಳದ ಚಂದ್ರ ಮುಂತಾದ ನಾಟಕವನ್ನಾಡಿದೆ.

ಸಂಪರ್ಕವಿಳಾಸ:
**ಶ್ರೀ ಶ್ರೀಕಾಂತ ರಾಮ ಪಟಗಾರ**
ಸಂಡಳ್ಳಿ, ಕೊಡಂಬಳ್ಳಿ, ಕುಮಟಾ, ಉ.ಕ.

## ವಿಶೇಷ ತರಬೇತಿ ಪಡೆದಿರುವ ನಟರು

### ಜಿಲ್ಲೆಯಲ್ಲಿ ನೀನಾಸಂ ಪದವಿ ಪಡೆದ ಕಲಾವಿದರು (2010ರ ವರೆಗೆ)

| | |
|---|---|
| ವೀಣಾ ಕೆ.ಎನ್ ಕಲಗಾರು | 1983–84 |
| ನಾಗರಾಜ ಆರ್.ಜೋಶಿ ಸೋಂದಾ ಶಿರಸಿ | 1984–85 |
| ರಮಾನಂದ ಹೆಗಡೆ ಆರ್ ಐನಕೈ ಸಿದ್ದಾಪುರ | 1984–85 |
| ವನಜಾಕ್ಷಿ ಹೆಗಡೆ ಕೊಳಗಿ ಸಿದ್ದಾಪುರ | 1984–85 |
| ಈಶ್ವರ ಸಿ. ನಾಯಕ ನೆಜ್ಜೂರು ಸಿದ್ದಾಪುರ | 1986–87 |
| ಶೋಭಾ ಹೆಗಡೆ ಶಿರಸಿ | 1987–88 |
| ರಜನಿ ಭಟ್ ಕೆರೆಕೈ ಶಿರಸಿ | 1988–89 |
| ಗಣಪತಿ ಬಿ. ಹೆಗಡೆ ಹಿತ್ಲಕೈ ಸಿದ್ದಾಪುರ | 1989–90 |
| ಮಹಾಬಲೇಶ್ವರ ಧೀರನ್ ಧಾರೇಶ್ವರ ಕಡೆಕೊಡಿ | 1989–90 |
| ಗಜಾನನ ವಿ. ಹೆಗಡೆ ಬೆಣ್ಣೆಮನೆ ಹೊನ್ನಾವರ | 1990–91 |
| ಪಾಂಡುರಂಗ ಭಟ್ ಕೆ. ಹೊನ್ನಾವರ | 1990–91 |
| ಉಮಾಮಹೇಶ್ವರ ಹೆಗಡೆ ಯಲ್ಲಾಪುರ | 1990–91 |
| ಮಕ್ತಾರ್ ಅಹಮದ್ ಎಚ್.ಪಠಾಣ ಯಲ್ಲಾಪುರ | 1991–92 |
| ಗಜಾನನ ಟಿ. ನಾಯ್ಕ ಹೊನ್ನಾವರ | 1994–95 |
| ಶಕುಂತಲಾ ಎನ್. ಹೆಗಡೆ ಶಿರಸಿ | 1995–96 |
| ಸವಿತಾ ಹಾಣಿಗೌಡ ಹೊನ್ನಾವರ | 1996–97 |
| ನಾರಾಯಣ ಜಿ. ಶೇರುಗಾರ ಮಂಚಿಕೇರಿ ಯಲ್ಲಾಪುರ | 1997–98 |
| ಕಿರಣ ನಾಯಕ ಹೊನ್ನಾವರ | 1999–2000 |
| ರಾಜೇಶ ಎಸ್.ಭಟ್ ಕಾನಗೋಡು ಯಲ್ಲಾಪುರ | 2000–2001 |
| ಅನಿತಾ ಅಣ್ಣಯ್ಯ ಯಾಜಿ ಹೊನ್ನಾವರ | 2001–02 |
| ಸುಮಿತ್ರಾ ರಮೇಶ ನಾಯ್ಕ ಅವರ್ಸಾ ಅಂಕೋಲಾ | 2001–02 |
| ಗಣಪತಿ ಗೌಡಾ ಹೊನ್ನಾವರ | 2002–03 |
| ಗೀತಾ ಪಿ.ಸಿದ್ದಿ ಯಲ್ಲಾಪುರ | 2002–03 |

| | |
|---|---|
| ರೇಣುಕಾ ಸಿದ್ದಿ ಹಾಸಣಗಿ ಯಲ್ಲಾಪುರ | 2003–04 |
| ಶ್ರೀಕಾಂತ ಕುಮಟಾ | 2004–05 |
| ರಾಘವೇಂದ್ರ ಅನಂತ ದೇಶ ಭಂಡಾರಿ ಶಿರಸಿ | 2005–06 |
| ದಾಕ್ಷಾಯಿಣಿ ಎಚ್ ಸಿದ್ದಿ ದೇವರಕಲ್ಲಳ್ಳಿ ಯಲ್ಲಾಪುರ | 2007–08 |
| ವಿನಾಯಕ ಎಸ್.ಎಂ. ನವಿಲುಗೋಣ ಹೊನ್ನಾವರ | 2007–08 |
| ಪ್ರಶಾಂತ ದುಮ್ಮಿಂಗ್ ಸಿದ್ದಿ ಹಾಸಣಗಿ ಯಲ್ಲಾಪುರ | 2008–09 |
| ವಿಜಯಾ ನಾಯ್ಕ ಸಿದ್ದಾಪುರ | 2009–10 |
| ಚಂದ್ರಹಾಸ ಕೃಷ್ಣ ಭಂಡಾರಿ ಚಿತ್ರಗಿ ಕುಮಟಾ | 2010–11 |

**ಹಂಪಿ ವಿಶ್ವವಿದ್ಯಾಲಯದ ಡಿಪ್ಲೋಮಾ ಪದವಿ ಪಡೆದವರು**

| | |
|---|---|
| ಶಿವಕುಮಾರ ಹೊನ್ನಾವರ | 2007–08 |
| ದಾಮೋದರ ನಾಯ್ಕ ಹೊನ್ನಾವರ | 2007–08 |
| ಗಣಪತಿ ಹುಲಿಮನೆ ಸಿದ್ದಾಪುರ | 2007–08 |
| ನಾರಾಯಣ ಭಾಗ್ವತ ಶಿರಸಿ | 2008–09 |
| ಸಂತೋಷ ನಾಯ್ಕ ಹಳದೀಪುರ ಹೊನ್ನಾವರ | 2007–08 |
| ಶ್ರೀನಿವಾಸ ನಾಯ್ಕ ಮಾಡಗೇರಿ ಹೊನ್ನಾವರ | 2008–09 |
| ಪ್ರಶಾಂತ ಪಟಗಾರ ಹೊನ್ನಾವರ | 2007–08 |
| ನರಸಿಂಹ ಕೋಮಾರ ಯಲ್ಲಾಪುರ | 2008–09 |
| ವಿಶ್ವನಾಥ ಹಿರೇಮಠ ಮುಂಡಗೋಡು | 2008–09 |
| ಸುಬ್ಬು ಗೌಡ ಹೊನ್ನಾವರ | 2008–09 |

**ರಂಗ ಅಧ್ಯಯನ ಕೇಂದ್ರ ಕುಂದಾಪುರದಿಂದ ಡಿಪ್ಲೋಮಾ ಪದವಿ ಪಡೆದವರು**

| | |
|---|---|
| ಮಹೇಶ ಆಚಾರಿ ಮಂಕಿ ಹೊನ್ನಾವರ | 2007–08 |
| ರಾಘವೇಂದ್ರ ಆಚಾರಿ ಹಡಿನಬಾಳ | 2007–08 |

## ನೇಪಥ್ಯ ತಂತ್ರಜ್ಞರು

### ರಂಗಪರದೆ/ಉಡುಪು/ಪರಿಕರ ಒದಗಿಸುವ ಸಂಸ್ಥೆಗಳು/ವ್ಯಕ್ತಿಗಳು

- ರಂಗ ಸಂಪದ
  ಕೆ.ಎಚ್.ಬಿ. ಕಾಲನಿ, ಶಿರಸಿ
  ಮುಖ್ಯಸ್ಥರು : ಸವಿತಾ ಸದಾನಂದ ಶಾನಭಾಗ (ಪುತ್ತಣ್ಣ) ಶಿರಸಿ
  40 ವರ್ಷಗಳಿಂದ ಸೇವೆ

- **ಶ್ರೀ ಮಹಾಗಣಪತಿ ಡ್ರಾಮಾ ಸೀನ್ಸ ಹಂದಿಗೋಣ, ಕುಮಟಾ.**
  ಕಳೆದ 22 ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿದೆ.
  ಮುಖ್ಯಸ್ಥರು : ನಾಗೂ ಮುಕ್ರಿ, 9448525934

- **ಗಣೇಶ ಡ್ರಾಮಾ ಡೆಕೋರೇಟರ್ಸ ಹೊಲನಗದ್ದೆ, ಕುಮಟಾ**
  12 ವರ್ಷಗಳಿಂದ ಸೇವೆ ಸಲ್ಲಿಸುತ್ತಿದೆ.
  ಹನುಮಂತ ಎಚ್. ಪಟಗಾರ 08386–261619

- ಗೋಪಾಲ ಕೃಷ್ಣ ಡ್ರಾಮಾ ಸೀನ್ಸ ಕುಲ್ಕೊಡ, ಹೊನ್ನಾವರ
  6 ವರ್ಷಗಳಿಂದ ಸೇವೆ
  ವಿಷ್ಣುದಾಸ ಭಂಡಾರಿ, ದೂ. 9481953526

- ಶ್ರೀ ಗುರು ರಾಘವೇಂದ್ರ ವಸ್ತ್ರ ಹಾಗೂ ವರ್ಣಾಲಂಕಾರ ಮಿರ್ಜಾನ್, ಕುಮಟಾ
  15 ವರ್ಷಗಳಿಂದ ಸೇವೆ ದೂ. 9886815646

- **ಚೈತ್ರ ವರ್ಣಾಲಂಕಾರ ಹೆಗಡೆ, ಕುಮಟಾ**
  10 ವರ್ಷಗಳ ಸೇವೆ ದೂ. 96203862

- **ಹೇಮಂತ ಗೌಡ ಶೆಟಗಾಳಿ ದಾಂಡೇಲಿ**
  12 ವರ್ಷಗಳ ಸೇವೆ

- **ರಂಗಭೂಮಿಕಾ, ದಾಮೋದರ ನಾಯ್ಕ, ಬಸ್ ಸ್ಟ್ಯಾಂಡ್ ಹತ್ತಿರ, ಹೊನ್ನಾವರ**
  10 ವರ್ಷದಿಂದ ಸೇವೆ

- **ಸತೀಶ ಶೆಟ್ಟಿ**
  ಬೆನಕಾ ವಸ್ತ್ರ ಹಾಗೂ ವರ್ಣಾಲಂಕಾರ, ಗುಣವಂತೆ, ಹೊನ್ನಾವರ
  ದೂ. 9343361464

- **ಮೇಘ ಎಂಟರ್ ಪ್ರೈಸಸ್ ಸೀನರಿ ಮತ್ತು ಡ್ರೆಸ್ ಸಪ್ಲೈಯರ್ಸ**
  ಶ್ರೀ ರಮೇಶ್ ಮೇಲಿನ ಇಡಗುಂಜಿ, ಹೊನ್ನಾವರ

- **ಹನುಮಂತ ಪಟಗಾರ ಹೊಳೆಗದ್ದೆ, ಕುಮಟಾ**
  ಅಶೋಕ ಅಂಬಿಗ ದೀವಗಿ ಕುಮಟಾ

## ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಂಗ ನಿರ್ದೇಶಕರು

(ಆಧುನಿಕ ರಂಗಭೂಮಿಯನ್ನು ಅನುಲಕ್ಷಿಸಿ)

- ವಿಷ್ಣು ನಾಯ್ಕ ಸಾಹಿತಿಗಳು ಅಂಬಾರಕೊಡ್ಲ ಅಂಕೋಲಾ, 9448145370
- ಜಿ.ಯು. ಭಟ್ ವರದಿಗಾರರು ಉದಯವಾಣಿ ಹೊನ್ನಾವರ, 9448009399
- ವಾಸುದೇವ ಶಾನಭಾಗ ಕೊಂಕಣಿ ಕಲಾಮಂಡಳ ಶಿರಸಿ, 9448756277
- ರಾಮಕೃಷ್ಣ ಭಟ್ ದುಂಡಿ ಮಂಚಿಕೇರಿ ಯಲ್ಲಾಪುರ, 08419254545
- ಕಿರಣ ಭಟ್ ಮೈಕ್ರೋವೇವ್ ಸ್ಟೇಷನ್ ಕಾರವಾರ, 9448010763
- ಕೃಷ್ಣಮೂರ್ತಿ ಹೆಬ್ಬಾರ ಸಂಪಾದಕರು ನಾಗರಿಕ ಹೊನ್ನಾವರ
- ರಮಾನಂದ ಐನಕೈ ಶಿರಸಿ, 9449912270
- ಕೆ.ಆರ್. ಪ್ರಕಾಶ ಶಿರಸಿ, 9242121340
- ಜಿ.ಡಿ. ಭಟ್ ಕೆಕ್ಕಾರ ಹೊನ್ನಾವರ
- ಗಣಪತಿ ಹಿತ್ಲಕೈ ಸಿದ್ದಾಪುರ, 9482187801
- ಗಣಪತಿ ಹುಲಿಮನೆ ಸಿದ್ದಾಪುರ, 9901619325
- ದಾಮೋದರ ನಾಯ್ಕ ಹೊನ್ನಾವರ, 9480561800
- ಚಂದ್ರು ಉಡುಪಿ ಶಿರಸಿ, 9035774899
- ಶ್ರೀಕಾಂತ ಕುಮಟಾ
- ಕೆ.ರಮೇಶ ಅಂಕೋಲಾ, 9902043452
- ನಾಗಪತಿ ಹುಳಗೋಳ ಶಿಕ್ಷಕರು ಪಿ.ಎಂ. ಹೈಸ್ಕೂಲ್ ಅಂಕೋಲಾ
- ವಿನಾಯಕ ಭಟ್ ಮೂರೂರು ಕುಮಟಾ
- ಕಿರಣ ನಾಯ್ಕ ಹೊನ್ನಾವರ, 9916820374
- ಜಯರಾಮಭಟ್ ಯಲ್ಲಾಪುರ
- ನಾರಾಯಣ ಭಾಗ್ವತ ಮುಂಡಗೋಡು
- ನಾಗರಾಜ ನಾಯ್ಕ ಶಿರಸಿ
- ಡಾ. ಶ್ರೀಪಾದ ಭಟ್, 9448182042

## ರಂಗತಜ್ಞರು – ಸಂಘಟಕರು – ವಿಮರ್ಶಕರು

- ಡಾ. ಎಂ.ಜಿ. ಹೆಗಡೆ, ಉಪನ್ಯಾಸಕರು, ಎ.ವಿ. ಬಾಳಿಗಾ ಕಾಲೇಜು, ಕುಮಟಾ
- ಜಿ.ಯು. ಭಟ್, ವರದಿಗಾರರು, ಉದಯವಾಣಿ, ಹೊನ್ನಾವರ
- ಕೃಷ್ಣಮೂರ್ತಿ ಹೆಬ್ಬಾರ, ಸಂಪಾದಕರು, ನಾಗರಿಕ, ಹೊನ್ನಾವರ
- ವಿ.ಜೆ. ನಾಯ್ಕ, ವಂದಿಗೆ, ಅಂಕೋಲಾ
- ರಾಮಕೃಷ್ಣ ಗುಂದಿ, ಪ್ರಾಂಶುಪಾಲರು, ದಿವೇಕರ ಕಾಲೇಜು, ಕಾರವಾರ
- ಎಂ. ರಮೇಶ, ನಿವೃತ್ತ ಉಪನ್ಯಾಸಕರು, ಶಿರಸಿ
- ವಿಜಯನಳಿನಿ ರಮೇಶ, ಶಿರಸಿ
- ಗಂಗಾಧರ ಕೊಳಗಿ, ಪತ್ರಕರ್ತರು, ಸಿದ್ದಾಪುರ
- ಸುಬ್ರಾಯ ಮತ್ತಿಹಳ್ಳಿ, ಮತ್ತಿಹಳ್ಳಿ, ಸಿದ್ದಾಪುರ
- ಅಶೋಕ ಹಾಸ್ಯಗಾರ, ಸಂಪಾದಕರು, ಲೋಕಧ್ವನಿ, ಶಿರಸಿ

## ರಂಗ ಸಂಗೀತ ತಜ್ಞರು

- ಪಂ. ಜಿ. ಆರ್. ಭಟ್ ಕವಲಕ್ಕಿ ಹೊನ್ನಾವರ
- ವಿ.ಎಸ್. ಭಟ್. ನವಿಲುಗೋಣು ಹೊನ್ನಾವರ
- ಸುರೇಶ ಭಟ್, ಕಡತೋಕಾ, ಸ್ವರಶ್ರೀ ವಾದ್ಯ ವೃಂದ, ಹೊನ್ನಾವರ
- ಸತ್ಯನಾರಾಯಣ, ಗುಂಡಿಬೈಲು, ಹೊನ್ನಾವರ
- ಉದಯ ಭಂಡಾರಿ, ಹೊಳೆಗದ್ದೆ, ಕುಮಟಾ
- ಅರುಣ ಭಟ್, ಮೂರೂರು, ಕುಮಟಾ
- ವಿಶ್ವನಾಥ ಹಿರೇಮಠ, ಮುಂಡಗೋಡು
- ನರಸಿಂಹ ಕೋಮಾರ, ಯಲ್ಲಾಪುರ
- ಮಾರುತಿ ನಾಯ್ಕ, ಇಡಗುಂಜಿ, ಹೊನ್ನಾವರ
- ವಿಶ್ವನಾಥ ಗೋಡೆಮಕ್ಕಿ, ಸುನಾದ, ಹೊನ್ನಾವರ
- ಡಾ. ಅಶೋಕ ಹುಗ್ಗಣ್ಣ, ಉಪನ್ಯಾಸಕರು, ಎಸ್.ಡಿ.ಎಂ. ಕಾಲೇಜು, ಹೊನ್ನಾವರ

## ರಂಗಭೂಮಿಯಲ್ಲಿ ಸಂಶೋಧನೆ ಮಾಡಿದವರು

- ಹೆಸರು : **ಡಾ. ಶ್ರೀಪಾದ ಭಟ್**
  ವಿಷಯ : ಉತ್ತರಕನ್ನಡ ರಂಗಭೂಮಿ
  ವಿಶ್ವವಿದ್ಯಾಲಯ : ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
- ಹೆಸರು : **ಡಾ. ರಾಜು ಹೆಗಡೆ**
  ವಿಷಯ : ಗಿರೀಶ ಕಾರ್ನಾಡರ ನಾಟಕಗಳು
  ವಿಶ್ವವಿದ್ಯಾಲಯ : ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

## ರಂಗ ಪ್ರಕಟಣೆಗಳು

### ರಂಗ ನಾಟಕಗಳು ಮತ್ತು ರಂಗಭೂಮಿಯ ಪುಸ್ತಕಗಳು ಉತ್ತರಕನ್ನಡದ ಲೇಖಕರ ರಂಗ ನಾಟಕಗಳು(2010ರವರೆಗಿನ ಪ್ರಕಾಶನವನ್ನು ಗಮನಿಸಲಾಗಿದೆ)

(ಲೇಖಕರು, ನಾಟಕದ ಹೆಸರು, ಪ್ರಕಾಶನ, ಇಸ್ವಿ, ಈ ರೀತಿಯಲ್ಲಿ ಮಾಹಿತಿಗಳಿದೆ. ಲೇಖಕರ ಕಾಲದ ಹಿರಿತನವನ್ನು ಲಕ್ಷಿಸಿ ಪಟ್ಟಿಮಾಡಲಾಗಿದೆ)

1. ಹವ್ಯಕ ಹಿತೇಚ್ಛು (ಸೂರಿ ವೆಂಕಟರಮಣ ಶಾಸ್ತ್ರಿ) ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ – (ಸಂ) ಮಂಗೇಶ ಶರ್ಮ, ಕುಮಟಾ – 1887
2. ಧಾರೇಶ್ವರ ಶಿವರಾವ ನಾರಣಪ್ಪ ಕನ್ಯಾ ವಿಕ್ರಯ – ಕರ್ನಾಟಕ ಛಾಪಖಾನೆ ಮುಂಬಯಿ – 1987
3. ಹಾರನಳ್ಳಿ ಅನಂತರಾಯ ದ್ವೇಷ ಭಾಂಡಾರ – ಕಾರವಾರ – 1926
4. ಹೆಗಡೆ ಗಂಗಾಧರ ಗೋಪಾಲ ಕೃಷ್ಣ ಅರಣ್ಯ ರೋಧನ – ಶಿರ್ಶಿ – 1934
5. ನಾಯಕ ಶಾಂತಾರಾಮ ಹುಚ್ಚೂರು ತಾರಾಫೀಸು – ಕರ್ನಾಟಕ ಸಂಘ ಹೊನ್ನಾವರ – 1943
6. ಕೆ.ಎಚ್. ಪ್ರಭು ಧರ್ಮೋ೯ರಕ್ಷತಿ ಭಕ್ಷಿತಃ – ಪ್ರಭು ಈಗಲ್ ಪಬ್ಲಿಕೇಷನ್ಸ ಕುಮಟಾ – 1948
7. ನಾಮ ಕೊರವಾರ ಅರನೆಯ ತಾರೆ – ಶರಾವತಿ ಪ್ರಕಟನ ಮಂದಿರ ಶಿರಸಿ – 1951
8. ಮಲ್ಲಾಪುರ ನಾಗೇಶ ರಾವ್ ಸಂಗೀತ ಆಜನ್ಮ ಕುಮಾರಿ – ಸರಸ್ವತಿ ಸಂಗೀತ ಸಮಾಜ, ದಾಂಡೇಲಿ – 1954
9. ಜಿ.ಜಿ. ಹೆಗಡೆ ಅಡಕತ್ರಿ – ಸಿಟಿ ಬುಕ್ ಸ್ಟಾಲ್ ಹುಬ್ಬಳ್ಳಿ – 1955
10. ಹುಲಿಮನೆ ಸೀತಾರಾಮ ಶಾಸ್ತ್ರಿ ಪುತ್ರಾಪೇಕ್ಷೆ – ಸಿದ್ಧಿವಿನಾಯಕ ಪ್ರಕಾಶನ ಸಾಗರ – 1959
11. ರಾಮಚಂದ್ರ ಮಂಜ ಭಟ್ಟ ರಾವಣ ಗರ್ವಭಂಗ – ಕಡತೋಕಾ, ಹೊನ್ನಾವರ ಉ.ಕ. – 1958

12. **ವಾಲಗಳ್ಳಿ ಕೃಷ್ಣ ಜಿ.** ಗಣೇಶ ಜನನ – ನಿಸರ್ಗ ಉ.ಕ.
13. **ಶಾಸ್ತ್ರಿ ಪಿ.ವಿ.** ನೂರು ಮರ ಒಂದೇ ಸ್ವರ – ವಿದ್ಯಾರಣ್ಯ ಪ್ರಕಾಶನ ಉ.ಕ.
14. **ಹೆಗಡೆ ವೆಂಕಟರಮಣ** ಶ್ರೀ ಗಜಾನನಾವತಾರ – ಲೇಖಕರ ಪ್ರಕಾಶನ
15. **ಹೆಗಡೆ ಶಿವರಾಮ** ಕೃಷ್ಣಾರ್ಜುನ ಕಾಳಗ – ಕೃಷ್ಣ ಪ್ರಕಾಶನ ಬಾಳೇಗದ್ದೆ
16. **ಗಂಗಾಧರ ಶಾಸ್ತ್ರಿ (ಯಕ್ಷಜ್ಞ)** ಯೋಗ್ಯ ಸಂಬಂಧ – ಶೃಂಗಾರ ಪ್ರಕಾಶನ ಹೊನ್ನಾವರ – 1963
17. **ಗಂಗಾಧರ ಶಾಸ್ತ್ರಿ** ಶಾಕುಂತಲಾ – ಸಾಧನಾ ಪ್ರಕಾಶನ ಹೊನ್ನಾವರ – 1960
18. **ಸುಬ್ರಾಯ ಶೇಷಪ್ಪ ಹೆಗಡೆ** ವಿಶ್ವಾಮಿತ್ರ ತಪೋಭಂಗ – ಆನಂದ ಮುದ್ರಣ ಹೊನ್ನಾವರ, ಗೋಕರ್ಣ, – 1962
19. **ರಾಜಾರಾಮ ಚಿತ್ರಿಗಿಮಠ** ಚಿತ್ತೂರ ಪದ್ಮಿನಿ – ಮಿತ್ರ ಪ್ರಕಾಶನ ಯಲ್ಲಾಪುರ, ಉ.ಕ. – 1965
20. **ಎ.ಎಸ್. ಬಳ್ಳಾರಿ** ಕ್ಷಮೆ ಅರ್ಥಾತ್ ಪ್ರೇಮಾ ಮೀಟರ್ – ನೆಲ್ಲಿಕೇರಿ, ಕುಮಟಾ – 1978
21. **ಮಹಾಲೆ ಜಿ.ರೋಹಿದಾಸ** ಧರ್ಮ ಸಂಗಮ – ಲೇಖಕ ಕುಮಟಾ – 1960
22. **ಮಹಾಲೆ ಜಿ. ರೋಹಿದಾಸ** ಮುಳ್ಳಿನ ಹಾಸಿಗೆ – ಕುಮಟಾ – 1979
23. **ಮಹಾಲೆ ಜಿ. ರೋಹಿದಾಸ** ಅವಳು ನೀನಲ್ಲ – ಲೇಖಕರ ಪ್ರಕಾಶನ ಕುಮಟ
24. **ಎನ್.ಆರ್. ನಾಯಕ** ವಿಮೋಚನೆ – ಆರ್ಟ್ಸ ಮತ್ತು ಸೈನ್ಸ್ ಕಾಲೇಜು ಹೊನ್ನಾವರ – 1968
25. **ಕೆ.ಎಚ್. ಪ್ರಭು** ಹೋಲೆಯ ಬಂದ ಹೋಲೆಯ – ಈಗಲ್ ಪಬ್ಲಿಕೇಶನ್ಸ ಕುಮಟಾ – 1979
26. **ಗೌರೀಶ ಕಾಯ್ಕಿಣಿ** ಕ್ರೌಂಚಧ್ವನಿ – ಸಮಾಜ ಪುಸ್ತಕಾಲಯ ಧಾರವಾಡ – 1963
27. **ಗೌರೀಶ ಕಾಯ್ಕಿಣಿ** ಆಕಾಶ ನಾಟಕಗಳು – ಅಕ್ಷರ ಪ್ರಕಾಶನ ಸಾಗರ – 1982
28. **ಗೌರೀಶ ಕಾಯ್ಕಿಣಿ** ಚಿದಂಬರ ಸ್ವಾರಸ್ಯ – ರಾಘವೇಂದ್ರ ಪ್ರಕಾಶನ ಅಂಕೋಲಾ
29. **ಗೌರೀಶ ಕಾಯ್ಕಿಣಿ** ಕರ್ಣಾಮೃತ – ರಾಘವೇಂದ್ರ ಪ್ರಕಾಶನ ಅಂಕೋಲಾ– 1980
30. **ಗೌರೀಶ ಕಾಯ್ಕಿಣಿ** ದೇವಿಕೊಟ್ಟ ಬೆಳಕು – ರಾಘವೇಂದ್ರ ಪ್ರಕಾಶನ ಅಂಕೋಲಾ – 1980

31. ಗೌರೀಶ ಕಾಯ್ಕಿಣಿ ಗೌರೀಶ ಕಾಯ್ಕಿಣಿ ಸಮಗ್ರ ರೂಪಕ ಮತ್ತು ನಾಟಕಗಳು – ರಾಘವೇಂದ್ರ ಪ್ರಕಾಶನ ಅಂಕೋಲಾ
32. ಬಿ.ಎಚ್. ಶ್ರೀಧರ ಶಿರಸಿ ಮಯೂರ ಶರ್ಮ – ಯುಗಪುರುಷ ಪ್ರಕಟಣಾಲಯ ಕಿನ್ನಿಗೋಳಿ – 1988
33. ಗೋಪಾಲ ಕೃಷ್ಣ ನಾಯಕ ಹರಿಶ್ಚಂದ್ರ ಮತಿ – ವಿಜಯ ಭಾರತಿ ಪ್ರಕಾಶನ ಗೋಕರ್ಣ
34. ಹೊನ್ನೆಗುಂಡಿ ಆರ್. ಕೆ. ಶಿವಲೀಲಾಮೃತದ ಮೂರು ನೃತ್ಯ ನಾಟಕಗಳು – ಭಾರತಿ ಪ್ರಕಾಶನ ಸಿದ್ದಾಪುರ
35. ಡಾ. ಆರ್.ವಿ. ಭಂಡಾರಿ ಬೆಳಕಿನ ಕಡೆಗೆ – ರಾಘವೇಂದ್ರ ಪ್ರಕಾಶನ ಅಂಕೋಲಾ – 1996
36. ಡಾ. ಆರ್.ವಿ. ಭಂಡಾರಿ ಬೆಳಕು ಹಂಚಿದ ಬಾಲಕ – ಬಂಡಾಯ ಪ್ರಕಾಶನ ಅರೆಅಂಗಡಿ – 2004
37. ಡಾ. ಆರ್.ವಿ. ಬಣ್ಣದ ಹಕ್ಕಿ – ಬಂಡಾಯ ಪ್ರಕಾಶನ ಅರೆಅಂಗಡಿ – 2005
38. ಡಾ. ಆರ್.ವಿ. ಭಂಡಾರಿ ನಾನು ಗಾಂಧಿ ಆಗ್ತೇನೆ – ಬಂಡಾಯ ಪ್ರಕಾಶನ ಅರೆಅಂಗಡಿ – 2004
39. ಡಾ. ಆರ್.ವಿ. ಭಂಡಾರಿ ಈದ್ಗಾ ಮತ್ತು ಬೆಳಕಿನ ಕಡೆಗೆ – ರಂಗಾಯಣ ಮೈಸೂರು – 2004
40. ಡಾ. ಆರ್.ವಿ. ಭಂಡಾರಿ ಪ್ರೀತಿಯ ಕಾಳು – ಬಂಡಾಯ ಪ್ರಕಾಶನ ಅರೆಅಂಗಡಿ – 2010
41. ಡಾ. ಆರ್.ವಿ. ಭಂಡಾರಿ ಒಂದೇ ಗೂಡಿನ ಹಕ್ಕಿಗಳು – ಬಂಡಾಯ ಪ್ರಕಾಶನ ಅರೆಅಂಗಡಿ – 2010
42. ಡಾ. ಆರ್.ವಿ. ಭಂಡಾರಿ ಯಾನ ಮತ್ತಿತರ ನಾಟಕಗಳು – ಬಂಡಾಯ ಪ್ರಕಾಶನ ಅರೆಅಂಗಡಿ – 2001
43. ಡಾ. ಆರ್.ವಿ. ಭಂಡಾರಿ ದರುಶನ – ಬಂಡಾಯ ಪ್ರಕಾಶನ ಅರೆಅಂಗಡಿ – 2010
44. ಹೂಲಿ ಶೇಖರ ಗಾಂಧೀನಗರ – ಆಕೃತಿ ಕ್ರಿಯೇಟರ್ಸ್ ಅಂಬಿಕಾನಗರ ಉ.ಕ.– 1995
45. ಹೂಲಿ ಶೇಖರ ರಂಗ ಪುರಂದರ – ಹೂ ಮನೆ ಪ್ರಕಾಶನ ಬೆಂಗಳೂರು– 2007
46. ಹೂಲಿ ಶೇಖರ ಎರಡು ಲಾವಣಿ ಎರಡು ನಾಟಕ – ಆಕೃತಿ ಕ್ರಿಯೇಟರ್ಸ್ ಅಂಬಿಕಾನಗರ ಉ.ಕ. – 1997

47. ಹೂಲಿ ಶೇಖರ ಅರಗಿನ ಬೆಟ್ಟ – ಅನನ್ಯ ಪ್ರಕಾಶನ ಹೂಮನೆ ಧಾರವಾಡ – 1987
48. ಹೂಲಿ ಶೇಖರ ಅವತಾರ – ಭಾರತಿ ಪ್ರಕಾಶನ ದಾಂಡೇಲಿ – 1994
49. ನಾ.ಸು. ಭರತನಹಳ್ಳಿ ಪಂಜರದಲ್ಲಿ ಹುಲಿ – ಚಿಂತನ ಪ್ರಕಾಶನ ಶಿರಸಿ
50. ನಾ.ಸು. ಭರತನಹಳ್ಳಿ ಆಕಾಶ ಹರಿದು ಬೀಳುತ್ತಿದೆ – ತಾಲೂಕಾ ಕ.ಸಾ.ಪ. ಯಲ್ಲಾಪುರ
51. ನಾ.ಸು. ಭರತನಹಳ್ಳಿ ಅವಾಂತರ – ರಾಘವೇಂದ್ರ ಪ್ರಕಾಶನ ಅಂಕೋಲಾ – 1998
52. ವಿ.ತಿ. ಶೀಗೇ ಹಳ್ಳಿ ಧರಣಿ ಮಂಡಲ ಮತ್ತು ಸೂರ್ಯೋತ್ಸವ – ರಮಣಶ್ರೀ ಪ್ರಕಾಶನ ಬೆಂಗಳೂರು – 1999
53. ವಿ.ತಿ. ಶೀಗೇ ಹಳ್ಳಿ ಎರಡು ಪೆಟ್ಟಿಗೆ – ಸಂದೀಪ ಸಾಹಿತ್ಯ ಆತ್ರಾಡಿ ಉಡುಪಿ – 2001
54. ವಿಷ್ಣು ನಾಯ್ಕ ಬೋಳು ಗುಡ್ಡ – ರಾಘವೇಂದ್ರ ಪ್ರಕಾಶನ ಅಂಕೋಲಾ
55. ವಿಷ್ಣು ನಾಯ್ಕ ಒಂದು ಹನಿ ರಕ್ತ ಮತ್ತಿತರ ಬೀದಿ ನಾಟಕಗಳು – ರಾಘವೇಂದ್ರ ಪ್ರಕಾಶನ ಅಂಕೋಲಾ – 1993
56. ವಿಷ್ಣು ನಾಯ್ಕ ಯುದ್ಧ – ರಾಘವೇಂದ್ರ ಪ್ರಕಾಶನ ಅಂಕೋಲಾ – 2001
57. ವಿಷ್ಣು ನಾಯ್ಕ ಅಯ್ನೋರ ಪೂಜೆ – ರಾಘವೇಂದ್ರ ಪ್ರಕಾಶನ ಅಂಕೋಲಾ – 1995
58. ವಿಷ್ಣು ನಾಯ್ಕ ಸಾರಾಯಿ ಸೂರಪ್ಪ – ರಾಘವೇಂದ್ರ ಪ್ರಕಾಶನ ಅಂಕೋಲಾ – 2010
59. ವಿಷ್ಣು ನಾಯ್ಕ ಸಾವಿನ ಹಾದಿ – ರಾಘವೇಂದ್ರ ಪ್ರಕಾಶನ ಅಂಕೋಲಾ – 2010
60. ವಿಷ್ಣು ನಾಯ್ಕ ಬಿನ್ನಹಕೆ ಬಾಯಿಲ್ಲ – ರಾಘವೇಂದ್ರ ಪ್ರಕಾಶನ ಅಂಕೋಲಾ – 2010
61. ವಿಷ್ಣು ನಾಯ್ಕ ಕೋಳಿ ಅಂಕ – ರಾಘವೇಂದ್ರ ಪ್ರಕಾಶನ ಅಂಕೋಲಾ – 2010
62. ವಿಷ್ಣು ನಾಯ್ಕ ಸ್ವಾಮಿನಿಷ್ಠೆ – ರಾಘವೇಂದ್ರ ಪ್ರಕಾಶನ ಅಂಕೋಲಾ – 2010
63. ವಿಷ್ಣು ನಾಯ್ಕ ಪ್ರೀತಿ ಜಗತ್ತಿನ ದೊರೆ – ರಾಘವೇಂದ್ರ ಪ್ರಕಾಶನ ಅಂಕೋಲಾ – 2011
64. ಮೋಹನ ಹಬ್ಬು ಏಕಲವ್ಯ ಇತರ ನಾಟಕಗಳು – ಪ್ರಜ್ಞಾ ಪ್ರಕಾಶನ ವಂದಿಗೆ, ಅಂಕೋಲಾ – 1998

65. **ಮೋಹನ ಹಬ್ಬು** ಕರ್ಣ – ರಾಘವೇಂದ್ರ ಪ್ರಕಾಶನ ಅಂಕೋಲಾ – 1996
66. **ಮೋಹನ ಹಬ್ಬು** ಸಾವ ಸುತ್ತ – ಕರ್ನಾಟಕ ಸಂಘ ಅಂಕೋಲಾ– 1997
67. **ಮೋಹನ ಹಬ್ಬು** ಏಕಾಂಕ ಪಂಚಕ – ಕನ್ನಡ ಸಾಹಿತ್ಯ ಪರಿಷತ್ತು ಉ.ಕ. – 2010
68. **ಹೆಗಡೆ ದತ್ತಾತ್ರೇಯ ಎಸ್** ಪ್ರತಿಕಾರದ ತಿರುವು – ಪ್ರಜ್ಞಾ ಪ್ರಕಾಶನ ಉ.ಕ.
69. **ಗ.ಸು. ಭಟ್ಟ** ಚಿಟ್ಟೆಯ ಮೊಟ್ಟೆ – ನಿರ್ಮಲ ಪ್ರಕಾಶನ ತಿಪಟೂರು – 2001
70. **ಗ.ಸು. ಭಟ್ಟ** ನಲಿಯಿತು ನವಿಲು – ನಿರ್ಮಲ ಪ್ರಕಾಶನ ತಿಪಟೂರು – 2001
71. **ಗ.ಸು. ಭಟ್ಟ** ನಲಿಯಿತು ನವಿಲು – ನಿರ್ಮಲ ಪ್ರಕಾಶನ ತಿಪಟೂರು – 2001
72. **ಗ.ಸು. ಭಟ್ಟ** ಮರುಗಡಲು – ರಾಘವೇಂದ್ರ ಪ್ರಕಾಶನ ಅಂಕೋಲಾ
73. **ನಾಗಪತಿ ಹೆಗಡೆ** ಹುಳಗೋಳ ವೀರ ಪುಲಕೇಶಿ ಮತ್ತಿತರ ನಾಟಕಗಳು – ನಮ್ರತಾ ಪ್ರಕಾಶನ ಹುಳಗೋಳ ಶಿರಸಿ
74. **ನಾಗಪತಿ ಹೆಗಡೆ** ಹುಳಗೋಳ ಗೆಲಿಲಿಯೋ – ನಮ್ರತಾ ಪ್ರಕಾಶನ ಹುಳಗೋಳ ಶಿರಸಿ
75. **ನಾಗಪತಿ ಹೆಗಡೆ** ಹುಳಗೋಳ ಜಗದೋದ್ಧಾರ ನಾ – ನಮ್ರತಾ ಪ್ರಕಾಶನ ಹುಳಗೋಳ ಶಿರಸಿ
76. **ನಾಗಪತಿ ಹೆಗಡೆ** ಹುಳಗೋಳ ಮಹಾಮೋಕ್ಷ – ನಮ್ರತಾ ಪ್ರಕಾಶನ ಹುಳಗೋಳ ಶಿರಸಿ
77. **ನಾಗಪತಿ ಹೆಗಡೆ** ಹುಳಗೋಳ ಎಲ್ಲಿಗೆ ಬಂತೋ ಸಂಗ್ಯಾ – ನಮ್ರತಾ ಪ್ರಕಾಶನ ಹುಳಗೋಳ ಶಿರಸಿ
78. **ಎಸ್. ಅರುಂಧತಿ** ಚಿಂವ್ ಚಿಂವ್ ಚಿಟ್ಟಾಣಿ – ರಾಘವೇಂದ್ರ ಪ್ರಕಾಶನ ಅಂಕೋಲಾ
79. **ದಿವಾಕರ ಹೆಗಡೆ** ಯುದ್ಧ ಭಾರತ – ರಾಘವೇಂದ್ರ ಪ್ರಕಾಶನ ಅಂಕೋಲಾ – 2004
80. **ದಿವಾಕರ ಹೆಗಡೆ** ಉದ್ಧಾರ ಮತ್ತು ಸಂತೆ – ಅಕ್ಷಯ ಪ್ರಕಾಶನ ಅಂಕೋಲಾ – 2009
81. **ಕೃಷ್ಣಮೂರ್ತಿ ಹೆಬ್ಬಾರ** ನೆರೆಹಾವಳಿ – ದೀನಬಂಧು ಮುದ್ರಣಾಲಯ ರಥಬೀದಿ ಹೊನ್ನಾವರ – 1984
82. **ಶ್ರೀಪಾದ ಹೆಗಡೆ ಮಗೆಗಾರು** ದೇವಿಯ ದೀವಿಗೆ – ಮಹಾಗಣಪತಿ ನಾಟ್ಯ ಕಲಾಸಂಘ ಮಗೆಗಾರು – 1998

83. ಕ್ರಾಂತಿಯ ಕಿಡಿ – ಮಹಾಗಣಪತಿ ನಾಟ್ಯ ಕಲಾಸಂಘ ಮಗೆಗಾರು – 2008
84. ಟಿ. ದಿನಕರ ಮತ್ಸ್ಯಗಂಧಿ – ಕ್ವಾಲಿಟಿ ಪ್ರಿಂಟರ್ಸ್ ಅಂಕೋಲಾ – 1991
85. ವ್ಯಾಸ ದೇಶಪಾಂಡೆ ಇವ ನಮ್ಮವ – ರಾಘವೇಂದ್ರ ಪ್ರಕಾಶನ ಅಂಕೋಲಾ – 2006
86. ವಿವೇಕ ಶಾನಭಾಗ ಸಕ್ಕರೆ ಗೊಂಬೆ – ಅಕ್ಷರ ಪ್ರಕಾಶನ ಹೆಗ್ಗೋಡು – 1999
87. ಜಯಂತ ಕಾಯ್ಕಿಣಿ ಜತೆಗಿರುವನು ಚಂದಿರ – ಅಕ್ಷರ ಪ್ರಕಾಶನ ಹೆಗ್ಗೋಡು – 1999
88. ಎಂ.ಜಿ. ಶಾಸ್ತ್ರಿ ದತ್ತೂ ಮಾಣಿಯ ಮದುವೆ ಪ್ರಸಂಗ – ಗಡಿಹಳ್ಳಿ, ಕುಳವೆ ಶಿರಸಿ – 1990
89. ಜಿ.ಎಸ್. ಭಟ್ ಕೊಳ್ಳಿ – ನಿಧಿ ಪ್ರಕಾಶನ ಸಾಗರ – 2006
90. ಜಿ.ಎಸ್. ಭಟ್ ಬೆಪ್ತಕ್ಕಡಿ ಬೋಳೆಶಂಕರ – ಕೆ.ಯು. ಹಂಪಿ
91. ಎಚ್.ಆರ್. ಅಮರನಾಥ ವಿಶ್ವಾಮಿತ್ರ ಮತ್ತು ಮಧ್ಯಮನ ಭಾಗ್ಯ – ನಿಧಿ ಪ್ರಕಾಶನ ಸಾಗರ – 2008
92. ಟಿ.ಜಿ. ಭಟ್. ಹಾಸಣಗಿ ಮರೆತ ಸಂಬಂಧ – ಆದಿತ್ಯ ಪ್ರಕಾಶನ ಹಾಸಣಗಿ ಉ.ಕ. – 2001
93. ಅಪರಂಜಿ (ಶ್ರೀಪಾದ ಶಾಸ್ತ್ರಿ) ಸಂತೆಯಲ್ಲಿ ಸತ್ತವರು – ಸ್ವರಶ್ರೀ ಪ್ರಕಾಶನ ಕಡತೋಕಾ ಹೊನ್ನಾವರ – 1995
94. ಅರವಿಂದ ನಾಡಕರ್ಣಿ ಕಾಣದ ಹೂ – ರಾಘವೇಂದ್ರ ಪ್ರಕಾಶನ ಅಂಕೋಲಾ – 1999
95. ರಾಮಕೃಷ್ಣ ಗುಂದಿ ವಂದೇ ಮಾತರಂ – ಕರ್ನಾಟಕ ಸಂಘ ಅಂಕೋಲಾ – 1997
96. ಭಾಗೀರಥಿ ಹೆಗಡೆ ಪ್ರಭಾವತಿ – ರಾಘವೇಂದ್ರ ಪ್ರಕಾಶನ ಅಂಕೋಲಾ – 2000
97. ನಾಗೇಶ ಹೆಗಡೆ ಗುಳಿಗೆ ಗುಮ್ಮ – ವಸಂತ ಪ್ರಕಾಶನ ಬೆಂಗಳೂರು – 2007
98. ಸುಮುಖಾನಂದ ಜಲವಳ್ಳಿ ಮನೆಗೆ ಬಂದ ಮಗ – ಸುಮುಖ ಪ್ರಕಾಶನ
99. ವೈರಸ್ ಶಿರಾಲಿ ಶಾಲೆಗೆ ಹೊಸ ಮೇಷ್ಟ್ರು ಬಂದಿದಾರೆ – ಬೆಳಕಿಂಡಿ ಪ್ರಕಾಶನ ಶಿರಾಲಿ ಉ.ಕ.
100. ಹೆಗಡೆ ಸಿ. ತಾರಖಂಡ ಆದರ್ಶ ಶಿಕ್ಷಕ – ರಾಜೇಶ್ವರಿ ಪ್ರಕಾಶನ ಶಿರಸಿ

## ರಂಗಭೂಮಿಯ ಪುಸ್ತಕಗಳು

- ಉತ್ತರಕನ್ನಡ ಜಿಲ್ಲೆಯ ರಂಗಭೂಮಿ – ಚಿಂತನ ಉತ್ತರಕನ್ನಡ – 1993 ಭಟ್ ಕಿರಣ (ಸಂ) – ಮಕ್ಕಳ ರಂಗಭೂಮಿ – ಮಕ್ಕಳ ನಾಟಕೋತ್ಸವ ಸಮಿತಿ ಹೊನ್ನಾವರ – 2001
- ಬಹುಭೂಮಿಕಾ – ಡಾ.ಶ್ರೀಪಾದ ಭಟ್ – ಬಂಡಾಯಪ್ರಕಾಶನ ಕೆರೆಕೋಣ
- ಉತ್ತರಕನ್ನಡ ಜನಪದ ರಂಗಭೂಮಿ – ಡಾ.ಶ್ರೀಪಾದ ಭಟ್ – ರಾಘವೇಂದ್ರಪ್ರಕಾಶನ ಅಂಕೋಲಾ

## ಜಿಲ್ಲೆಯ ರಂಗ ಮಂದಿರಗಳು

ಉತ್ತರಕನ್ನಡ ಜಿಲ್ಲೆಯು ಸಾಂಸ್ಕೃತಿಕವಾಗಿ ಅದರಲ್ಲಿಯೂ ವಿಶೇಷವಾಗಿ ರಂಗಭೂಮಿಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಕ್ರಿಯಾಶೀಲವಾಗಿದೆ. ಹೊನ್ನಾವರ, ಶಿರಸಿ, ಅಂಕೋಲಾ, ಮಂಚಿಕೇರಿ ಮುಂತಾದ ಸ್ಥಳಗಳಲ್ಲಿ ರಂಗಭೂಮಿಯ ಚಟುವಟಿಕೆಗಳು ವರ್ಷದುದ್ದಕ್ಕೂ ನಿರಂತರವಾಗಿ ನಡೆಯುತ್ತಿವೆ. ಶಿರಸಿ ತೋಟಗಾರ್ ಸೊಸೈಟಿ, ಕಾರವಾರ ಜಿಲ್ಲಾ ರಂಗಮಂದಿರ ಮತ್ತು ಮಂಚಿಕೇರಿಯ ರಂಗಮಂದಿರಗಳಲ್ಲಿ ವರ್ಷದ ಬಹುಪಾಲು ದಿನಗಳು ಸಾಂಸ್ಕೃತಿಕ ಚಟುವಟಿಕೆಗಳಿಂದ ಕೂಡಿರುತ್ತದೆ. ಹವ್ಯಾಸಿ ರಂಗತಂಡಗಳ ನಾಟಕ ಪ್ರದರ್ಶನಗಳನ್ನು ಏರ್ಪಡಿಸುತ್ತವೆ. ಅತ್ಯುತ್ತಮ ರಂಗಮಂದಿರಗಳು ಮತ್ತು ಸೌಲಭ್ಯಗಳ ಕೊರತೆಯಿಂದಾಗಿ ರಂಗಚಟುವಟಿಕೆಗಳು ಶಾಲಾ–ಕಾಲೇಜುಗಳು, ದೇಗುಲಗಳು, ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚಾಗಿ ನಡೆಯುತ್ತವೆ.

ಲಭ್ಯವಿರುವ ರಂಗಮಂದಿರ ಅಥವಾ ಸಭಾ ಭವನದ ಸ್ಥೂಲ ಮಾಹಿತಿ ಇಲ್ಲಿದೆ. ನೀನಾಸಂನ ರಂಗಮಂದಿರ ಮಾಹಿತಿ ಯೋಜನೆ ಅಡಿಯಲ್ಲಿ ಕಿರಣ ನಾಯ್ಕ ಅವರು ಈ ಮಾಹಿತಿಗಳಲ್ಲಿ ಕೆಲವನ್ನು ಸಂಗ್ರಹಿಸಿದ್ದಾರೆ.

| ರಂಗಮಂದಿರದ ಹೆಸರು ವಿಳಾಸ | ಅಳತೆ | ಪ್ರೇಕ್ಷಕರ ಸಾಮರ್ಥ್ಯ |
|---|---|---|
| * ಜೈ ಹಿಂದ್ ರಂಗ ಮಂಟಪ, ಯು.ಜಿ.ಸಿ. ಸಭಾಭವನ, ಕೆನರಾ ವೆಲ್‌ಫೇರ್ ಟ್ರಸ್ಟ್ ಜಿ.ಸಿ. ಕಾಲೇಜು, ಅಂಕೋಲಾ | 19x12 | 500 |
| * ಸಮಾಜ ಮಂದಿರ, ತಾಲೂಕು ಪಂಚಾಯತ ಅಂಕೋಲಾ | 26x15 | 500 |
| * ಶ್ರೀಮತಿ ಗಂಗಾದೇವಿ ತೊರಕೆ ಸಭಾಭವನ ಅಂಕೋಲಾ | – | 200 |
| * ಸತ್ಯಾಗ್ರಹ ಸ್ಮಾರಕ ಸಭಾಭವನ ಅಂಕೋಲಾ | 60x40 | 1000 |
| * ಅಂಬೇಡ್ಕರ ಸಭಾಭವನ ಕೆ.ಪಿ.ಸಿ. ದಾಂಡೇಲಿ | 25x30 | 700 |
| * ರಂಗನಾಥ ಸಭಾಂಗಣ ದಾಂಡೇಲಿ | 30x40 | 1000 |
| * ಎಸ್.ಡಿ.ಎಂ. ಕಾಲೇಜು ಬಯಲು ರಂಗ ಮಂದಿರ ಹೊನ್ನಾವರ | 50x30 | 1000 |
| * ಹವ್ಯಕ ಸಭಾಭವನ ಹೊನ್ನಾವರ | 30x20 | 300 |
| * ನ್ಯೂ ಇಂಗ್ಲಿಷ್ ಶಾಲೆ ಸಭಾಗೃಹ ಹೊನ್ನಾವರ | 30x20 | 200 |
| * ಜಯಚಾಮರಾಜೇಂದ್ರ ಸಭಾಭವನ ಸೇಂಟ್ ಥಾಮಸ್ ಹೈಸ್ಕೂಲು | 30x20 | 200 |
| * ಕೆರೆಮನೆ ಶಿವರಾಮ ಹೆಗಡೆ ರಂಗಮಂದಿರ ಗುಣವಂತೆ, ಹೊನ್ನಾವರ | 20x30 | 300 |
| * ಶರಾವತಿ ಕಲಾಮಂದಿರ | 30x40 | 500 |
| * ಜಿಲ್ಲಾ ರಂಗಮಂದಿರ ಕಾರವಾರ | 41x31 | 1000 |
| * ರಾಜೇಂದ್ರಪ್ರಸಾದ ಸಭಾಭವನ, ಗಿಬ್ ಹೈಸ್ಕೂಲ್ ಕುಮಟಾ | 19x16 | 500 |
| * ಶಾಂತಿಕಾ ಪರಮೇಶ್ವರಿ ಸಭಾಗೃಹ ಕೂಜಳ್ಳಿ | 20x30 | 500 |
| * ಶ್ರೀ ಭಾರತೀ ತೀರ್ಥ ಸಭಾಭವನ ಸಿದ್ದಾಪುರ | 20x30 | 200 |

| | | |
|---|---|---|
| * ಕೆ.ಡಿ.ಭಟ್ ಸಭಾಭವನ ಸಿದ್ದಾಪುರ | 20x30 | 200 |
| * ಸಮಾಜಮಂದಿರ ಸಿದ್ದಾಪುರ | 20x30 | 200 |
| * ಕಡವೆ ಶ್ರೀಪಾದ ಹೆಗಡೆ ಕಲ್ಯಾಣ ಮಂಟಪ ತೋಟಗಾರ ಶಿರಸಿ | 30x40 | 500 |
| * ಶ್ರೀ ಮಾರಿಕಾಂಬಾ ಸಭಾಭವನ ಶಿರಸಿ | 20x30 | 400 |
| * ತೋಟಗಾರ ಸೊಸೈಟಿ ಸಭಾಭವನ ಶಿರಸಿ | 20x30 | 300 |
| * ವಿದ್ಯಾಧಿರಾಜ ಕಲಾಕ್ಷೇತ್ರ ಶಿರಸಿ | 42x22x3.5 | 1000 |
| * ಸಿಲ್ವರ್ ಜುಬಿಲಿ ಸಭಾಭವನ ವಿದ್ಯಾನಗರ ಶಿರಸಿ | 45x28x4 | 500 |
| * ಸಮಾಜ ಮಂದಿರ, ರಾಜೇಶ್ವರಿ ವಿದ್ಯಾ ಸಂಸ್ಥೆ ಮಂಚಿಕೇರಿ | 35x22x3 | 500 |
| * ಸಂಕಲ್ಪ ಸೇವಾ ಸಂಸ್ಥೆ ಯಲ್ಲಾಪುರ | 23x18x3 | 500 |
| * ದಿ.ತಿಮ್ಮಪ್ಪ ಹೆಗಡೆ ಬಯಲು ರಂಗ ವೇದಿಕೆ | 20x30 | 500 |

## ಅಂತ ಸಂಸ್ಕಾರ





ದೆವ್ವದ ಕಾಟ




ಕುಬಿ ಮತ್ತು ಇಯಾಲ

# ಚಿಂತನ ರಂಗ ಅಧ್ಯಯನ ಕೇಂದ್ರ



ಮಕ್ಕಳ ರವೀಂದ್ರ



........................



ಊರ್ಮಿಳಾ




## ಗುರು ಜಿಲ್ಲಾರಂಗ ಭೂಮಿ ಕಲಾವಿದರು




ಮಧ್ಯಮ ವ್ಯಾಯೋಗ

## ಹುಲಿಮನೆ ಪ್ರತಿಷ್ಠಾನ



ಹುಲಿಮನೆ ಸೀತಾರಾಮ ಶಾಸ್ತ್ರಿಯವರು
ಟಿಪ್ಪೂಸುಲ್ತಾನರಾಗಿ

## ಕೆ.ಆರ್. ಪ್ರಕಾಶ ಪ್ರಶಸ್ತಿ






# ಕೊಂಕಣ ಕಲಾಮಂಡಳ






ಸುಯೋಧನ


## ಮಾರಿಕಾಂಭ ಗೆಳೆಯರ ಬಳಗ





ಕಿವುಡ ಮಾಡಿದ ಕಿತಾಪತಿ

## ಮಹಾಗಣಪತಿ ನಾಟ್ಯ ಸಂಘ



ಪ್ರಚಂಡ ರಾವಣ

## ಕೊಂಕಣ ಕಲಾಮಂಡಳ



ಪರಿಸರದಲ್ಲಿ ನಾಟಕ - ಅಜ್ಜಿಗುಂಡಿ ಕಾಮ್




ಫುಲನ್ ದೇವಿ



ಒಡ್ಡೋಲಗ



ಚಕೋರಿ




ರಂಗ ಸೌಗಂಧ



ಅಧ್ವಾನಪುರ

## ಸಂಗಾತಿ ರಂಗಭೂಮಿ ಆಂಕೋಲ




ಕ್ರಾಂತಿ ಬಂತು ಕ್ರಾಂತಿ




ಸಿದ್ಧಿ ವಿನಾಯಕ ಗೋಳಿ

## ಸಿದ್ಧಿ ವಿನಾಯಕ ಗೋಳಿ



ಚಿತ್ತೂರ ಪದ್ಮಿನಿ



ಸ್ವಯಂವರ



ವಿರುಪಾಕ್ಷ ಕಲಾಮಿತ್ರ ಮಂಡಳಿ



ಕುರುಕ್ಷೇತ್ರ